## ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

### ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಫೆಬ್ರವರಿ 2ನೇ ವಾರ**

09-02-2026 TO 14-02-2026

## 11 ಒಪ್ಪಂದಗಳಿಗೆ ಭಾರತ-ಮಲೇಷ್ಯಾ ಸಮ್ಮತಿ

- ಏಷ್ಯನ್ ಶೂಟಿಂಗ್: ಅಮನ್‌ಪ್ರೀತ್‌ಗೆ ಚಿನ್ನ
- 114 ರಫೇಲ್ ಖರೀದಿಗೆ ಅಸ್ತು
- ಸಂವಿಧಾನದ 94(ಸಿ) ವಿಧಿ
- ಜಿಡಿಪಿ ಪ್ರಗತಿ ಶೇ 6.4ರಷ್ಟು

# ₹10,194 ಕೋಟಿಗೆ ಲೆಕ್ಕವಿಲ್ಲ

## ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆಯ ವಿವರಣೆ ಒಪ್ಪಲ್ಲ: ಸಿಎಜಿ

• ಜಯಸಿಂಹ ಆರ್.

**ಮುಖ್ಯಾಂಶಗಳು**

- ಅರ್ಹರಿಗೆ ತಲುಪದ ಹಣ
- ಶೇ 95ರಷ್ಟು ಮಂದಿಯ ವಿವರಗಳು ಲಭ್ಯವಿಲ್ಲ
- ನೈಜತೆಯ ಬಗ್ಗೆಯೇ ಅನುಮಾನ

**ಬೆಂಗಳೂರು:** ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಅಡಿ ಕೇಂದ್ರ ಸರ್ಕಾರವು 2015ರಿಂದ 2024ರ ಮಧ್ಯೆ ₹10,194 ಕೋಟಿ ವೆಚ್ಚ ಮಾಡಿದೆ. ಆದರೆ ಈ ಹಣ ಅರ್ಹ ಫಲಾನುಭವಿಗಳಿಗೇ ತಲುಪಿದೆ ಎಂಬುದನ್ನು ಪುಷ್ಟೀಕರಿಸುವ ದಾಖಲೆ ಕೇಂದ್ರ ಸರ್ಕಾರದ ಬಳಿ ಇಲ್ಲ. ಇರುವ ದಾಖಲೆ ಸರಿಯಾಗಿಲ್ಲ ಎಂದು ಮಹಾಲೇಖಪಾಲರು (ಸಿಎಜಿ) ಆಕ್ಷೇಪ ಎತ್ತಿದ್ದಾರೆ.

ಯೋಜನೆಯ ಫಲಾನುಭವಿಗಳಲ್ಲಿ ಶೇ 95ರಷ್ಟು ಮಂದಿಯ ವಿವರಗಳು ಲಭ್ಯವಿಲ್ಲ. ಯೋಜನಾ ವೆಚ್ಚದ ಅಷ್ಟೇ ಪ್ರಮಾಣದ ಮೊತ್ತ ಸರಿಯಾಗಿ ಬಳಕೆಯಾಗಿರುವ ಬಗ್ಗೆ ಅನುಮಾನವಿದೆ ಎಂದು ಸಿಎಜಿ ಬೊಟ್ಟು ಮಾಡಿದೆ.



ಈಚೆಗೆ ಸಂಸತ್ತಿನಲ್ಲಿ ಮಂಡಿಸಲಾದ 'ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ- ಲೆಕ್ಕ ಪರಿಶೋಧನ' ವರದಿಯಲ್ಲಿ ಈ ಮಾಹಿತಿ ಇದೆ.

ಯುವಜನರಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು 2015ರಲ್ಲಿ ಕೌಶಲ್ಯಾಭಿವೃದ್ಧಿ ಅಭಿಯಾನ ಆರಂಭಿಸಿತ್ತು, ಇದರ ಅನುಷ್ಠಾನಕ್ಕೆ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮವನ್ನು (ಎನ್‌ಎಸ್‌ಡಿಸಿ) ಸ್ಥಾಪಿಸಿತ್ತು. 2015 ರಿಂದ 2024ರ ಮಧ್ಯೆ ಕೇಂದ್ರವು ಒಟ್ಟು ಮೂರು ಹಂತಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ₹14,448 ಕೋಟಿ ಘೋಷಿಸಿತ್ತು ಮತ್ತು ಅದರಲ್ಲಿ ₹13,288 ಕೋಟಿ ಬಿಡುಗಡೆ ಮಾಡಿತ್ತು.

ಯುವಜನರಲ್ಲಿ ಕೌಶಲಾಭಿವೃದ್ಧಿಗಾಗಿ ತರಬೇತುದಾರರು ಮತ್ತು ತರಬೇತಿ ಕೇಂದ್ರಗಳ ಶುಲ್ಕ, ತರಬೇತಿ ಪಡೆದವರಿಗೆ ಶಿಷ್ಯವೇತನ ನೀಡಲಾಗುತ್ತದೆ. ಇದಕ್ಕೆಂದೇ ₹10,194 ಕೋಟಿ ವೆಚ್ಚ ಮಾಡಲಾಗಿದೆ. ಫಲಾನುಭವಿಗಳು ಮತ್ತು ತರಬೇತುದಾರರ ವಿವರಗಳ ಮಾಹಿತಿ ಸರಿಯಿಲ್ಲದ ಕಾರಣ, ಯೋಜನೆ ಅನುಷ್ಠಾನ ಮತ್ತು ಫಲಾನುಭವಿಗಳ ನೈಜತೆಯ ಬಗ್ಗೆಯೇ ಅನುಮಾನ ಮೂಡಿದೆ ಎಂದು ಸಿಎಜಿ ಆಕ್ಷೇಪ ದಾಖಲಿಸಿದೆ.

### ಏನೆಲ್ಲಾ ನಿಯಮ ಉಲ್ಲಂಘನೆ...

ಯೋಜನೆ ಅಡಿ ತರಬೇತಿಗೆ ಆಯ್ಕೆಯಾದ ಫಲಾನುಭವಿಗಳ ವೈಯಕ್ತಿಕ ಮಾಹಿತಿ, ಸಂಪರ್ಕ ಸಂಖ್ಯೆ, ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಕಡ್ಡಾಯವಾಗಿ ಸಂಗ್ರಹಿಸಬೇಕು ಎಂಬುದು ನಿಯಮ.




ತರಬೇತಿ ಪಡೆದು, ಪ್ರಮಾಣ ಪತ್ರ ಸ್ವೀಕರಿಸಿದ 1.10 ಕೋಟಿ ಫಲಾನುಭವಿಗಳ ಪೈಕಿ 5 ಲಕ್ಷ ಮಂದಿಯ ಬ್ಯಾಂಕ್ ವಿವರ ಮಾತ್ರ ಲಭ್ಯವಿದೆ. ಅಕ್ರಮ ನಡೆದಿದೆ ಎಂಬುದನ್ನು ಪುಷ್ಟೀಕರಿಸುವ ನಿದರ್ಶನಗಳಿವೆ ಎಂದು ಸಿಎಜಿ ಹೇಳಿದೆ.

**19.56 ಲಕ್ಷ**
ಮೊದಲ ಹಂತದ ಯೋಜನೆಯ ಫಲಾನುಭವಿಗಳು. ಇದರಲ್ಲಿ ಒಬ್ಬರ ವಿವರವನ್ನೂ ಸರ್ಕಾರ ಸರಿಯಾಗಿ ಸಂಗ್ರಹಿಸಿಲ್ಲ

**95.90 ಲಕ್ಷ**
2 ಮತ್ತು 3ನೇ ಹಂತದ ಫಲಾನುಭವಿಗಳ ಸಂಖ್ಯೆ. ಇದರಲ್ಲಿ 90.60 ಲಕ್ಷ ಫಲಾನುಭವಿಗಳ ಯಾವ ಮಾಹಿತಿಯನ್ನೂ ಸರ್ಕಾರ ಸರಿಯಾಗಿ ನಿರ್ವಹಣೆ ಮಾಡಿಲ್ಲ

- ಫಲಾನುಭವಿಗಳ ಬ್ಯಾಂಕ್ ಖಾತೆಯ ಸಂಖ್ಯೆ ಮುಂದೆ, '1111111...', '00000....', '12345678...' ಎಂದು ನಮೂದಿಸಲಾಗಿದೆ. ಬ್ಯಾಂಕ್ ಹೆಸರು, ಐಎಫ್‌ಎಸ್‌ಸಿ ಕೋಡ್ ಲಭ್ಯವಿಲ್ಲ
- ಲೆಕ್ಕ ಪರಿಶೋಧನೆ ವೇಳೆ 12,172 ಬ್ಯಾಂಕ್ ಖಾತೆಗಳ ವಿವರ ಲಭ್ಯವಾಗಿದ್ದು, ಅವುಗಳನ್ನೇ 52,381 ಅಭ್ಯರ್ಥಿಗಳ ಹೆಸರ ಮುಂದೆ ನಮೂದಿಸಲಾಗಿದೆ
- ಒಂದೇ ಬ್ಯಾಂಕ್ ಖಾತೆಯ ಮೂಲಕ ಮಧ್ಯಪ್ರದೇಶ, ರಾಜಸ್ಥಾನ, ಬಿಹಾರ, ಕೇರಳ ಮತ್ತು ಒಡಿಶಾದಲ್ಲಿನ ಫಲಾನುಭವಿಗಳ ಹೆಸರಿಗೆ ಶಿಷ್ಯವೇತನ ಮತ್ತು ಬಹುಮಾನದ ಮೊತ್ತ ಜಮೆ ಮಾಡಲಾಗಿದೆ

ಯೋಜನೆಯ ಮೂರೂ ಹಂತಗಳಲ್ಲಿ ಒಟ್ಟು 1.36 ಕೋಟಿ ಜನರಿಗೆ ತರಬೇತಿ ನೀಡಲಾಗಿದ್ದು, 1.05 ಕೋಟಿ ಫಲಾನುಭವಿಗಳ ವೈಯಕ್ತಿಕ ಮಾಹಿತಿ, ಬ್ಯಾಂಕ್ ಖಾತೆ ವಿವರ ಮತ್ತು ಅವರಿಗೆ ಹಣ ಜಮೆಯಾದುದರ ಬಗ್ಗೆ ಕೇಂದ್ರ ಸರ್ಕಾರದ ಬಳಿ ದಾಖಲೆಗಳು ಇಲ್ಲ. ಫಲಾನುಭವಿಗಳಿಗೆ ನೇರ ವರ್ಗಾವಣೆ ಮೂಲಕ ಹಣ ಜಮೆ ಮಾಡಲಾಗಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವಾಲಯ ಹೇಳುತ್ತಿದೆಯಾದರೂ, ಅದಕ್ಕೆ ಪೂರಕ ದಾಖಲೆಗಳನ್ನು ಒದಗಿಸಿಲ್ಲ. ಹೀಗಾಗಿ, ಈ ಬಗ್ಗೆ ಸಚಿವಾಲಯವು ನೀಡಿರುವ ವಿವರಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಎಜಿ ಹೇಳಿದೆ.



ಭಾರತ–ಅಮೆರಿಕ ವ್ಯಾಪಾರ ಒಪ್ಪಂದ; ಹಲವು ಅಂಶಗಳಿಗೆ ಆಕ್ಷೇಪ, ಕೃಷಿ ವಲಯ ಅತಂತ್ರವಾಗುವ ಆತಂಕ

# ಟ್ರಂಪ್ ಒತ್ತಡ ತಂತ್ರಕ್ಕೆ ಮಣಿಯಿತೇ ಭಾರತ?

ಭಾರತ ಮತ್ತು ಅಮೆರಿಕದ ನಡುವೆ ಏರ್ಪಟ್ಟಿರುವ ಮಧ್ಯಂತರ ವ್ಯಾಪಾರ ಒಪ್ಪಂದವು ಭಾರತದ ರಫ್ತುದಾರರಿಗೆ ವಿಶಾಲ ಮಾರುಕಟ್ಟೆ ಒದಗಿಸಲಿದೆ ಎಂದು ಹೇಳಲಾಗುತ್ತಿದೆಯಾದರೂ, ಅದರಲ್ಲಿನ ಕೆಲವು ಅಂಶಗಳಿಗೆ ಆಕ್ಷೇಪವೂ ವ್ಯಕ್ತವಾಗಿದೆ. ಅಮೆರಿಕದಿಂದ ಆಮದು ಮಾಡಲಾಗುವ ಕೆಲವು ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಪಶುಆಹಾರಕ್ಕೆ ಬಳಸುವ ಗೋವಿನ ಜೋಳ, ಸೋಯಾಬೀನ್ ಎಣ್ಣೆಯ ಮೇಲಿನ ಸುಂಕವನ್ನು ಸಂಪೂರ್ಣವಾಗಿ ತೆಗೆದು ಹಾಕಿದರೆ, ಭಾರತದ ರೈತರಿಗೆ, ಪಶು ಆಹಾರ ಉದ್ಯಮಕ್ಕೆ ಹೊಡೆತ ಬೀಳಲಿದೆ ಎಂದು ರೈತ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ. ರಷ್ಯಾದಿಂದ ತೈಲ ಖರೀದಿ ಸ್ಥಗಿತ, ಐದು ವರ್ಷಗಳಲ್ಲಿ ಅಮೆರಿಕದಿಂದ 50 ಸಾವಿರ ಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಟ್ರಂಪ್ ಅವರ ಒತ್ತಡಕ್ಕೆ ಮಣಿದು, ಅವರ ಷರತ್ತುಗಳಿಗೆ ಒಪ್ಪಿದಂತೆ ಕಾಣುತ್ತಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ

## ಕೃಷಿ ಕ್ಷೇತ್ರದ ಮೇಲೆ ಕರಿನೆರಳು?

ಒಪ್ಪಂದದಲ್ಲಿ ಕೃಷಿ ಮತ್ತು ಹೈನು ಉತ್ಪನ್ನಗಳಿಗೆ ರಕ್ಷಣೆ ಒದಗಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಒಪ್ಪಂದದಿಂದ ಭಾರತದ ಕೆಲವು ವಲಯಗಳಿಗೆ ಲಾಭವಾಗುತ್ತದೆ. ಆದರೆ, ಕೆಲವು ವಲಯಗಳಲ್ಲಿ ಬಿಕ್ಕಟ್ಟು ಸೃಷ್ಟಿಯಾಗಲಿದೆ ಎನ್ನಲಾಗುತ್ತಿದೆ.

ಪಶುಸಂಗೋಪನೆಯಲ್ಲಿ ಬಳಸುವ ಧಾನ್ಯಗಳು (ಡಿಸ್ಟಿಲರ್ಸ್ ಡ್ರೈಡ್ ಗ್ರೈನ್ಸ್ ವಿಥ್ ಸಾಲ್ಯುಬಲ್ಸ್–ಡಿಡಿಜಿಎಸ್), ಪಶು ಆಹಾರಕ್ಕೆ ಬಳಸುವ ಗೋವಿನ ಜೋಳ, ಡ್ರೈ ಫ್ರೂಟ್ಸ್, ಕೆಲವು ತಾಜಾ ಮತ್ತು ಸಂಸ್ಕರಿತ ಹಣ್ಣುಗಳು, ಸೋಯಾಬೀನ್ ಎಣ್ಣೆ, ವೈನ್, ಸ್ಪಿರಿಟ್ ಮತ್ತು ಇತರ ಉತ್ಪನ್ನಗಳಿಗೆ ಶೂನ್ಯ ಸುಂಕ ಅಥವಾ ಕಡಿಮೆ ಸುಂಕ ವಿಧಿಸುವ ಅಂಶವು ಒಪ್ಪಂದದಲ್ಲಿರುವುದು ರೈತ ಸಮುದಾಯದ ಆತಂಕಕ್ಕೆ ಕಾರಣವಾಗಿದೆ.

ಪಶುಸಂಗೋಪನಾ ವಲಯದ ಬೇಡಿಕೆ ಆಧರಿಸಿ ಸೀಮಿತ ಪ್ರಮಾಣದಲ್ಲಿ ಮಾತ್ರವೇ ಡಿಡಿಜಿಎಸ್ ಅನ್ನು ಆಮದು ಮಾಡಿಕೊಳ್ಳಲಾಗುವುದು. ಇದರಿಂದ ಕುಕ್ಕುಟೋದ್ಯಮಕ್ಕೆ ಸಹಾಯವಾಗಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಡ್ರೈ ಫ್ರೂಟ್ಸ್ ಸೇರಿದಂತೆ ಕೆಲವು ಉತ್ಪನ್ನಗಳ ಮೇಲಿನ ಸುಂಕ ಕಡಿತ ಅಥವಾ ಶೂನ್ಯ ಸುಂಕದ ಕ್ರಮವು ಭಾರತದ ಕೃಷಿ ವಲಯದ ಮೇಲೆ ಹೆಚ್ಚೇನೂ ಪರಿಣಾಮ ಬೀರದು. ಭಾರತದಲ್ಲಿ ಅವುಗಳನ್ನು ಹೆಚ್ಚು ಬೆಳೆಯುವುದಿಲ್ಲ. ಆದರೆ, ಮುಸುಕಿನ ಜೋಳ, ಸೋಯಾಬೀನ್ ಮತ್ತು ಪಶು ಆಹಾರದಲ್ಲಿ ಬಳಸುವ ಇತರ ಕೃಷಿ ಉತ್ಪನ್ನಗಳ ಬೆಲೆಯ ಮೇಲೆ ಒಪ್ಪಂದವು ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎನ್ನುವುದು ರೈತ ಮುಖಂಡರ ಅಭಿಪ್ರಾಯ. ಇತ್ತೀಚಿನ ವರ್ಷಗಳಲ್ಲಿ ಸೋಯಾಬೀನ್ ಬೆಲೆ ಕುಸಿದಿದ್ದು, ಮಧ್ಯಪ್ರದೇಶ, ಮಹಾರಾಷ್ಟ್ರ ತೆಲಂಗಾಣ ಮತ್ತು ರಾಜಸ್ಥಾನದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಈಗ ಸೋಯಾಬೀನ್ ಎಣ್ಣೆ ಆಮದು ಮಾಡಿಕೊಂಡರೆ, ಬೆಲೆಗಳು ಮತ್ತಷ್ಟು ಕುಸಿಯುವ ಸಾಧ್ಯತೆ ಇದೆ ಎನ್ನುವ ಆತಂಕ ವ್ಯಕ್ತವಾಗಿದೆ.

### 12ರಂದು ಮುಷ್ಕರಕ್ಕೆ ಕರೆ


ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ...

### ತೈಲ ಖರೀದಿ ಇಳಿಕೆ

### ಕುಲಾಂತರಿ ಬೀಜಗಳ ಅಪಾಯ

ನರೇಂದ್ರ ಮೋದಿ

ಡೊನಾಲ್ಡ್ ಟ್ರಂಪ್



ಭಯೋತ್ಪಾದನೆ ವಿಷಯದಲ್ಲಿ ರಾಜಿ ಇಲ್ಲ, ದ್ವಿಮುಖ ನೀತಿಯೂ ಇಲ್ಲ: ಪ್ರಧಾನಿ ನರೇಂದ್ರ ಮೋದಿ

# 11 ಒಪ್ಪಂದಗಳಿಗೆ ಭಾರತ–ಮಲೇಷ್ಯಾ ಸಮ್ಮತಿ

ಕ್ವಾಲಾಲಂಪುರ (ಪಿಟಿಐ): ವ್ಯಾಪಾರ, ಹೂಡಿಕೆ, ರಕ್ಷಣೆ, ಇಂಧನ, ಉತ್ಪಾದನೆ ಮತ್ತು ಸೆಮಿಕಂಡಕ್ಟರ್‌ನಂತಹ ಅದ್ಯತಾ ವಲಯಗಳಲ್ಲಿನ ಸಂಬಂಧ ವಿಸ್ತರಿಸಲು ಭಾರತ ಮತ್ತು ಮಲೇಷ್ಯಾ ಭಾನುವಾರ ಒಪ್ಪಿಗೆ ಸೂಚಿಸಿವೆ.

ಸೆಮಿಕಂಡಕ್ಟರ್ ವಲಯ ಸೇರಿದಂತೆ ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವೃದ್ಧಿಸಲು ಒಟ್ಟು 11 ಒಪ್ಪಂದಗಳು ಮತ್ತು ದಾಖಲೆಗಳಿಗೆ ಉಭಯ ದೇಶಗಳ ಪ್ರಧಾನಿ ಅವರು ಸಹಿ ಹಾಕಿದರು.

ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ಮಾತುಕತೆ ನಂತರ, ಭಯೋತ್ಪಾದನೆಯನ್ನು ಎದುರಿಸುವ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದ ಮೋದಿ, 'ಭಯೋತ್ಪಾದನೆ ಬಗ್ಗೆ ನಮ್ಮ ಸಂದೇಶ ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಯಾವುದೇ ದ್ವಿಮುಖ ನೀತಿಗಳಿಲ್ಲ, ರಾಜಿ ಇಲ್ಲ' ಎಂದು ಹೇಳಿದರು.

ದ್ವಿಪಕ್ಷೀಯ ವ್ಯಾಪಾರಕ್ಕಾಗಿ ಸ್ಥಳೀಯ ಕರೆನ್ಸಿಗಳಾದ ಭಾರತೀಯ ರೂಪಾಯಿ ಮತ್ತು ಮಲೇಷ್ಯಾದ ರಿಂಗಿಟ್ ಬಳಕೆಯನ್ನು ಉತ್ತೇಜಿಸುವ ನಿರ್ಧಾರವನ್ನು ಮೋದಿ ಮತ್ತು ಇಬ್ರಾಹಿಂ ಅವರು ಪ್ರಕಟಿಸಿದರು.

'ಮಲೇಷ್ಯಾದಲ್ಲಿ ಭಾರತೀಯ ಕಾನ್ಸುಲೇಟ್ ಜನರಲ್ ಸ್ಥಾಪಿಸಲಾಗುವುದು. ಎಐ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಜೊತೆಗೆ ಸೆಮಿಕಂಡಕ್ಟರ್‌ಗಳು, ಆರೋಗ್ಯ ಮತ್ತು ಆಹಾರ ಭದ್ರತಾ ವಲಯದ ಪಾಲುದಾರಿಕೆಯನ್ನು ಮುನ್ನಡೆಸುತ್ತೇವೆ' ಎಂದು ಮೋದಿ ತಿಳಿಸಿದರು.

'ಇಂಡೋ-ಪೆಸಿಫಿಕ್ ಪ್ರದೇಶವು ವಿಶ್ವದ ಬೆಳವಣಿಗೆಯ ಎಂಜಿನ್ ಆಗಿ ಹೊರ ಹೊಮ್ಮುತ್ತಿದೆ. ನಾವು, ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಜೊತೆಗೆ, ಇಂಡೋ-ಪೆಸಿಫಿಕ್ ಪ್ರದೇಶದಾದ್ಯಂತ ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆಗೆ ಬದ್ಧರಾಗಿದ್ದೇವೆ' ಎಂದು ಹೇಳಿದರು.

**ಭಾರತ ಮೂಲದ ನಾಯಕರ ಭೇಟಿ:** ಪ್ರಧಾನಿ ನರೇಂದ್ರ ಮೋದಿ ಅವರು ಭಾರತ ಮೂಲದ ಸಚಿವರು, ಸಂಸದರು ಮತ್ತು ಸೆನೆಟರ್‌ಗಳನ್ನು ಭಾನುವಾರ ಭೇಟಿ ಮಾಡಿದರು.



ಕ್ವಾಲಾಲಂಪುರದಲ್ಲಿ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

## ಪ್ರಮುಖ ನಿರ್ಧಾರಗಳು

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಶಾಶ್ವತ ಸದಸ್ಯತ್ವಕ್ಕೆ ಮಲೇಷ್ಯಾ ಬೆಂಬಲ
- ಗುಪ್ತಚರ ಮಾಹಿತಿ ಹಂಚಿಕೆ, ಕಡಲ ಭದ್ರತೆ, ರಕ್ಷಣಾ ಸಂಬಂಧ ವೃದ್ಧಿಗೆ ಒತ್ತು
- ಭಯೋತ್ಪಾದನೆಗೆ ಖಂಡನೆ; ಶೂನ್ಯ ಸಹಿಷ್ಣುತೆಗೆ ಕರೆ
- ಭಯೋತ್ಪಾದನೆ ಎದುರಿಸಲು ಸಂಘಟಿತ ಜಾಗತಿಕ ಪ್ರಯತ್ನ ಅಗತ್ಯ
- ಮೂಲಭೂತವಾದ, ಹಿಂಸಾತ್ಮಕ ಉಗ್ರವಾದ ಎದುರಿಸಲು ಉಭಯ ದೇಶಗಳು ಬದ್ಧ

## 'ಎಂಜಿಆರ್ ಅಭಿಮಾನಿ ಅನ್ವರ್ ಇಬ್ರಾಹಿಂ'

'ಭಾರತ ಮತ್ತು ಮಲೇಷ್ಯಾ ದೇಶಗಳು ತಮಿಳು ಭಾಷೆಯ ಮೇಲಿನ ಪ್ರೀತಿಯಿಂದ ಪರಸ್ಪರ ಬೆಸೆದುಕೊಂಡಿವೆ. ಮಲೇಷ್ಯಾದ ಶಿಕ್ಷಣ, ಮಾಧ್ಯಮ ಮತ್ತು ಸಾಂಸ್ಕೃತಿಕ ಜೀವನದಲ್ಲಿ ತಮಿಳು ಭಾಷೆ ಪ್ರಬಲವಾಗಿ ಬೇರೂರಿದೆ. ಭಾರತೀಯ ಮೂಲದ ಸುಮಾರು 30 ಲಕ್ಷ ಮಂದಿ ನೆಲಸಿದ್ದು, ಬಹುಪಾಲು ತಮಿಳು ಮೂಲದವರಾಗಿದ್ದಾರೆ' ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

'ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ತಮಿಳಿನ ಮೇರುನಟ ಎಂ.ಜಿ. ರಾಮಚಂದ್ರನ್ ಅವರ ದೊಡ್ಡ ಅಭಿಮಾನಿ. ಅವರು ಆಯೋಜಿಸಿದ್ದ ಔತಣಕೂಟದ ಸಂದರ್ಭದಲ್ಲಿ ಎಂಜಿಆರ್ ನಟನೆಯ 'ನಾಲೈ ನಮಧೆ' ಚಿತ್ರದ ಹಾಡನ್ನು ಪ್ರಸ್ತುತಪಡಿಸಲಾಯಿತು' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

## ನಿವೃತ್ತ ಯೋಧರ ಭೇಟಿ ಮಾಡಿದ ಪ್ರಧಾನಿ

ಕ್ವಾಲಾಲಂಪುರದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯ (ಆಜಾದ್ ಹಿಂದ್ ಫೌಜ್) ನಿವೃತ್ತ ಯೋಧ ಜಯರಾಜ್ ರಾಜಾ ರಾವ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಿದರು.

'ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಐಎನ್‌ಎಯ ಧೈರ್ಯಶಾಲಿ ಯೋಧರಿಗೆ ನಾವು ಎಂದೆಂದಿಗೂ ಋಣಿಯಾಗಿರುತ್ತೇವೆ. ಅವರ ಶೌರ್ಯವು ಭಾರತದ ಭವಿಷ್ಯವನ್ನು ರೂಪಿಸಲು ಸಹಾಯ ಮಾಡಿತ್ತು' ಎಂದು ಮೋದಿ ಅವರು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

1943ರ ಸೆಪ್ಟೆಂಬರ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಕ್ವಾಲಾಲಂಪುರದ ಸೆಲಂಗೋರ್ ಪಾದಂಗ್‌ನಲ್ಲಿ (ಈಗಿನ ಸ್ವಾತಂತ್ರ್ಯ ಚೌಕ) ಸಾವಿರಾರು ಅನುಯಾಯಿಗಳನ್ನು ಉದ್ದೇಶಿಸಿ ಪ್ರೇರಣಾದಾಯಕ ಭಾಷಣ ಮಾಡಿದ್ದರು. ಇದು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಹಲವಾರು ಯುವಕರನ್ನು ಪ್ರೇರೇಪಿಸಿತ್ತು.

# 'ಶೇ 70ರಷ್ಟು ಹುಲಿಗಳು ಭಾರತದಲ್ಲಿ'



ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): 'ವಿಶ್ವದಲ್ಲಿರುವ ಹುಲಿಗಳಲ್ಲಿ ಶೇ 70ರಷ್ಟು ಭಾರತದಲ್ಲಿಯೇ ಇವೆ' ಎಂದು ಅಂತರರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ನಿರ್ದೇಶಕ ಡಾ.ಎಸ್.ಪಿ.ಯಾದವ್ ತಿಳಿಸಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೇಲುಕಾಮನಹಳ್ಳಿಯಲ್ಲಿ ಸೋಮವಾರ ಆರಂಭವಾದ ಅಂತರರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

'ವಿಶ್ವದಲ್ಲಿರುವ ಬಿಗ್ ಕ್ಯಾಟ್ಸ್ ಪ್ರಬೇಧಗಳಾದ ಹುಲಿ, ಸಿಂಹ, ಚಿರತೆ, ಚೀತಾ, ಹಿಮ ಚಿರತೆ, ಜಾಗ್ವಾರ್ ಹಾಗೂ ಪ್ಯೂಮಾಗಳನ್ನು ರಕ್ಷಣೆ ಈ ಶೃಂಗಸಭೆಯ ಪ್ರಮುಖ ಉದ್ದೇಶವಾಗಿದೆ' ಎಂದು ಹೇಳಿದರು.

'ದೇಶದಲ್ಲಿ 14,000ದಿಂದ 15,000ದಷ್ಟು ಚಿರತೆಗಳಿವೆ. ಸಿಂಹಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿದ್ದು ಬಿಗ್ ಕ್ಯಾಟ್ಸ್‌ಗಳ ಸಂತತಿಯನ್ನು ಸಂರಕ್ಷಿಸುವಲ್ಲಿ ಭಾರತವು ಮಾದರಿಯಾಗಿದೆ' ಎಂದರು.

'1952ರಲ್ಲಿ ದೇಶದಲ್ಲಿ ಚೀತಾ ಸಂತತಿ ಸಂಪೂರ್ಣ ನಶಿಸಿತ್ತು. ನಮೀಬಿಯಾ ಹಾಗೂ ದಕ್ಷಿಣ ಆಫ್ರಿಕಾದಿಂದ ಚೀತಾಗಳನ್ನು ತರಿಸಿಕೊಂಡು ಪೋಷಿಸಿದ ಫಲವಾಗಿ ಪ್ರಸ್ತುತ 35 ಚೀತಾಗಳಿವೆ' ಎಂದು ಹೇಳಿದರು.

'ಶೃಂಗಸಭೆಯಲ್ಲಿ ವಿಶ್ವದ 23 ದೇಶಗಳ 39 ಪ್ರತಿನಿಧಿಗಳು ಭಾಗವಹಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಖಡೆ, ಎಪಿಪಿಸಿಎಫ್ ಮನೋರಂಜನ್, ಬಿಸ್ವಜಿತ್ ಮಿಶ್ರಾ, ಹುಲಿ ಯೋಜನೆ ನಿರ್ದೇಶಕ ರಮೇಶ್‌ಕುಮಾರ್, ಚಾಮರಾಜನಗರ ಸಿಸಿಎಫ್ ಮಾಲತಿ ಪ್ರಿಯಾ, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಪ್ರಭಾಕರನ್, ಎಸಿಎಫ್ ನವೀನ್‌ಕುಮಾರ್ ಇದ್ದರು.

ಅಮೆರಿಕದ ಆಂತ್ರೊಪಿಕ್ ಕೃತಕ ಬುದ್ಧಿಮತ್ತೆ ಕಂಪನಿಯು ತನ್ನ ಕ್ಲಾಡ್ ಕೋವರ್ಕ್ ಪ್ಲಾಟ್‌ಫಾರ್ಮ್‌ನಲ್ಲಿ ಹೊಸ ಪ್ಲಗ್–ಇನ್‌ಗಳನ್ನು ಬಿಡುಗಡೆ ಮಾಡಿದೆ. ಈ ಹೊಸ ಎಐ ಟೂಲ್ ದಾಖಲೆ, ದತ್ತಾಂಶ, ವಿವಿಧ ರೀತಿಯ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಸಂಕೀರ್ಣ ಕೆಲಸಗಳನ್ನು ಸ್ವಯಂಚಾಲಿತವಾಗಿ ಮಾಡುವ ಸಾಮರ್ಥ್ಯ ಹೊಂದಿವೆ. ಇದು ಐಟಿ ಕ್ಷೇತ್ರದಲ್ಲಿ, ವಿಶೇಷವಾಗಿ ಐಟಿ ಸೇವೆ ಒದಗಿಸುವ ಕಂಪನಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಕ್ಕೆ ಕಾರಣವಾಗಲಿದೆ ಎನ್ನಲಾಗುತ್ತಿದೆ. ಅಮೆರಿಕ ಮತ್ತು ಭಾರತದ ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿ ಈ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ. ಭಾರತದ ಟಿಸಿಎಸ್, ವಿಪ್ರೊ, ಇನ್ಫೊಸಿಸ್‌ನಂಥ ಐಟಿ ಕಂಪನಿಗಳಲ್ಲಿನ ಉದ್ಯೋಗಗಳಿಗೆ ಪೆಟ್ಟು ಬೀಳುವ ಸಂಭವ ಇದೆ ಎಂದು ಹೇಳಲಾಗುತ್ತಿದೆ

# ಐಟಿ ಕೆಲಸಕ್ಕೆ ಎಐ ಟೂಲ್ ಕನ್ನ?

ಪ್ರಜಾವಾಣಿ ವಾರ್ತೆ

ಫೆಬ್ರುವರಿ 4ರಂದು ಅಮೆರಿಕ, ಭಾರತದಲ್ಲಿ ಐಟಿ ಸೇವೆಗಳು, ಕಾನೂನು ಸೇವೆಗಳನ್ನು ಒದಗಿಸುವ ಕೆಲವು ಕಂಪನಿಗಳ ಷೇರುಗಳ ಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿತ್ತು. ಒಂದೇ ದಿನ ಷೇರುಪೇಟೆ 28,500 ಕೋಟಿ ಡಾಲರ್‌ಗಳ ನಷ್ಟ ಅನುಭವಿಸಿತ್ತು. ಭಾರತದ ಷೇರು ಪೇಟೆಯಲ್ಲಿ ಇನ್ಫೊಸಿಸ್, ವಿಪ್ರೊ, ಟಿಸಿಎಸ್ ಮುಂತಾದ ಐಟಿ ಕಂಪನಿಗಳ ಷೇರುಗಳ ಮೌಲ್ಯ ಶೇ 7ರಷ್ಟು ಕುಸಿತ ಕಂಡರೆ, ಅಮೆರಿಕದ ಕಂಪನಿಗಳ ಷೇರುಗಳು ಶೇ 12ರಷ್ಟು ಕುಸಿತ ದಾಖಲಿಸಿದವು. 'ಸಾಫ್ಟ್‌ವೇರ್ ಸೇವೆಗಳಲ್ಲಿ ಮಹಾಪ್ರಳಯ' (SaaSpocalypse) ಎಂದೇ ಅದನ್ನು ಕರೆಯಲಾಯಿತು. ಇಂಥ ಮಹಾಪತನಕ್ಕೆ ಕಾರಣವಾಗಿದ್ದು ಒಂದು ಎಐ ಟೂಲ್.

ಅಂತ್ರೊಪಿಕ್ ಎನ್ನುವ ಕೃತಕ ಬುದ್ಧಿಮತ್ತೆ (ಎಐ) ಕಂಪನಿಯು ಇದೇ ಜನವರಿಯಲ್ಲಿ ಕ್ಲಾಡ್ ಕೋವರ್ಕ್ (Claude Cowork) ಎನ್ನುವ ಎಐ ಏಜೆಂಟ್ ಅನ್ನು ಬಿಡುಗಡೆ ಮಾಡಿತ್ತು. ಅಂತ್ರೊಪಿಕ್‌ನ ಕ್ಲಾಡ್ ಚಾಟ್‌ಬಾಟ್ ಅಲ್ಪ ಅವಧಿಯಲ್ಲೇ ಭಾರಿ ಜನಪ್ರಿಯತೆ ಗಳಿಸಿತ್ತು. ಸಾಫ್ಟ್‌ವೇರ್ ಕೋಡಿಂಗ್ ಮಾಡುವವರಿಗಾಗಿಯೇ ಕ್ಲಾಡ್ ಕೋಡ್ ವಿಶೇಷ ಆವೃತ್ತಿ ಬಿಡುಗಡೆ ಮಾಡಿತ್ತು. ಅದರ ಕ್ಷಿಪ್ರ ಯಶಸ್ಸಿನಿಂದ ಸ್ಫೂರ್ತಿ ಪಡೆದ ಆಂತ್ರೊಪಿಕ್ ಕಂಪನಿಯು, ಕ್ಲಾಡ್‌ಗೆ ಹೆಚ್ಚುವರಿ ಜನವರಿ ಅಂತ್ಯದಲ್ಲಿ ಪ್ಲಗ್–ಇನ್‌ಗಳನ್ನು ಬಿಡುಗಡೆ ಮಾಡಿತು. ಸ್ವಯಂಚಾಲಿತವಾಗಿ ಕೆಲಸ ಮಾಡುವ ಇವುಗಳು ವಿಶ್ಲೇಷಣೆ, ಕೋಡಿಂಗ್‌ನಂತಹ ಸಂಕೀರ್ಣ ಕೆಲಸಗಳನ್ನೂ ಮಾಡುತ್ತವೆ. ಫೆಬ್ರುವರಿ ಮೊದಲ ವಾರದಲ್ಲಿ ಅದರ ಕಾರ್ಯನಿರ್ವಹಣೆಯ ವಿವರಗಳು ಬಹಿರಂಗಗೊಂಡಿದ್ದು ಷೇರು ಮಾರುಕಟ್ಟೆಯಲ್ಲಿ ತಲ್ಲಣ ಉಂಟು ಮಾಡಿತು.


**ಹೇಗೆ ಕೆಲಸ ಮಾಡುತ್ತದೆ?:** ಕ್ಲಾಡ್ ಕೋವರ್ಕ್ ಎಐ ಏಜೆಂಟ್‌ಗೆ ಹೊಸದಾಗಿ 11 ಪ್ಲಗ್ ಇನ್‌ಗಳನ್ನು ಅಂತ್ರೊಪಿಕ್ ಸೇರಿಸಿದ್ದು, ಈ ಹೊಸ ... ಟೂಲ್ ಕಂಪ್ಯೂಟರ್ ಮೂಲಕ ನಡೆಸುವ ಕಾನೂನು (ಲೀಗಲ್), ಮಾರಾಟ (ಸೇಲ್), ಮಾರುಕಟ್ಟೆ (ಮಾರ್ಕೆಟಿಂಗ್) ಮತ್ತು ದತ್ತಾಂಶ ವಿಶ್ಲೇಷಣೆ (ಡೇಟಾ ಅನಾಲಿಸಿಸ್) ವಲಯದ ಕೆಲಸಗಳನ್ನು ಸ್ವಯಂಚಾಲಿತವಾಗಿ ಮಾಡುತ್ತದೆ. ಸಾಫ್ಟ್‌ವೇರ್ ಕೋಡಿಂಗ್ ಮಾಡುವುದಷ್ಟೇ ಅಲ್ಲದೇ, ವೇತನ ಲೆಕ್ಕಾಚಾರ, ಷೇರುಪೇಟೆಯ ವಿಶ್ಲೇಷಣೆಯಂತಹ ವಿವಿಧ ಕೆಲಸಗಳನ್ನು ನಿರ್ವಹಿಸುತ್ತವೆ. ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ್‌ಗಳು ಮತ್ತು ಮನುಷ್ಯರು ಮಾಡುವ ಕೆಲಸಗಳಿಗೆ ಇದು ಪರ್ಯಾಯವಾಗಬಲ್ಲುದು ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರಿ ಪ್ರಮಾಣದಲ್ಲಿರುವ ದಾಖಲೆಗಳ ಪರಿಶೀಲನೆ, ತಿದ್ದುಪಡಿ ಮಾಡುವುದು, ಕರಡು ಸಿದ್ಧಪಡಿಸುವುದು, ಕೋಡಿಂಗ್ ಕೆಲಸಗಳು ಸೇರಿದಂತೆ ಹಲವು ಜನರ ತಂಡವು ದೀರ್ಘ ಸಮಯದವರೆಗೆ ಮಾಡುವ ಪ್ರಾಜೆಕ್ಟ್ (ಕೆಲಸ) ಅನ್ನು ಈ ಟೂಲ್ ಯಾರ ಸಹಾಯವಿಲ್ಲದೇ ಬಹುಬೇಗ ಮಾಡಿ ಕೊಡಬಲ್ಲದು. ಇದಕ್ಕಾಗಿ ಕಂಪ್ಯೂಟರ್ ಬಳಕೆದಾರ ಕೆಲಸ ಮಾಡಲು ಅನುಮತಿ ನೀಡಿದರೆ ಸಾಕು.

ಸರಳವಾಗಿ ಹೇಳುವುದಾದರೆ, ಹೊಸ ಎಐ ಟೂಲ್ ಒಳಗೊಂಡ ಕ್ಲಾಡ್ ಕೋವರ್ಕ್, ಬಳಕೆದಾರನೊಂದಿಗೆ ಕೇವಲ ಸಂವಾದ (ಕಾನ್‌ವರ್ಸೇಷನ್) ಮಾಡುವುದಲ್ಲ. ಕಂಪ್ಯೂಟರ್‌ನಲ್ಲಿರುವ ನಿರ್ದಿಷ್ಟ ಫೋಲ್ಡರ್‌ನ ಪರಿಶೀಲನೆಗೆ ಅನುಮತಿ ಕೊಟ್ಟರೆ (ಆ್ಯಕ್ಸೆಸ್) ನೀಡಿದರೆ ಸಾಕು. ಅದು ಆ ಫೋಲ್ಡರ್‌ನಲ್ಲಿರುವ ಅಂಶಗಳನ್ನು ಓದಿ, ತಿದ್ದುಪಡಿ, ಹೊಸದೊಂದು ಫೋಲ್ಡರ್ ಅನ್ನು ಸೃಷ್ಟಿಸಿ ಎಲ್ಲವನ್ನೂ ವ್ಯವಸ್ಥಿತವಾಗಿ ಜೋಡಿಸಿ ಮಾಡಿಕೊಡುತ್ತದೆ. ಕೇವಲ ಮಾತುಕತೆಗೆ ಸೀಮಿತವಾಗದೆ, ಬಳಕೆದಾರನಿಗೆ ಬೇಕಾದ ಎಲ್ಲ ಕೆಲಸವನ್ನೂ ಹಂತ ಹಂತವಾಗಿ ಮಾಡಿ ಕೊಡುತ್ತದೆ. ಕಂಪನಿಯ ಪ್ರಕಾರ, ಈ ಎಐ ಏಜೆಂಟ್ ಸಹೋದ್ಯೋಗಿಯ (ಕೋವರ್ಕರ್) ರೀತಿ ಕೆಲಸ ಮಾಡುತ್ತದೆ. ಪ್ರಾಜೆಕ್ಟ್‌ಗಳನ್ನು ಮಾಡುವ ತಂಡಗಳಿಗೆ ಮತ್ತು ಉದ್ದಿಮೆಗಳಿಗೆ ಈ ಟೂಲ್ ಹೆಚ್ಚು ಅನುಕೂಲಕಾರಿ.

ಹಲವು ಮಂದಿ, ಹಲವು ತಿಂಗಳು / ವರ್ಷಗಳು ಮಾಡುವ ಕೆಲಸವನ್ನು ಈ ಎಐ ಟೂಲ್‌ನಿಂದ ಅಲ್ಪ ಕಾಲದಲ್ಲಿ ಮುಗಿಸಬಹುದು ಎನ್ನಲಾಗುತ್ತಿದೆ. ಇದರಿಂದಾಗಿ ಸಾಫ್ಟ್‌ವೇರ್ ಸೇವೆಗಳು, ಹಣಕಾಸು ಸೇವೆ, ಕಾನೂನು ಸೇವೆಯಂಥ ವಲಯಗಳಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಉದ್ಯೋಗ ಕಡಿತಕ್ಕೂ ಕಾರಣವಾಗಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ.

ಆಧಾರ: ಆಂತ್ರೊಪಿಕ್.ಕಾಮ್, ಫೋರ್ಬ್ಸ್ ಇಂಡಿಯಾ, ರಾಯಿಟರ್ಸ್, ಮಾಧ್ಯಮ ವರದಿಗಳು




## ಪ್ರಮುಖ ಹುದ್ದೆಯಲ್ಲಿ ಕನ್ನಡಿಗ


ರಾಹುಲ್ ಪಾಟೀಲ

ಆಂತ್ರೊಪಿಕ್, ಅಮೆರಿಕದ ಎಐ ಸ್ಟಾರ್ಟ್‌ಅಪ್ ಆಗಿದ್ದು, ಎಐ ಭದ್ರತೆ ಮತ್ತು ಸಂಶೋಧನೆಯಲ್ಲಿ ತೊಡಗಿಕೊಂಡಿದೆ. ವಿಶ್ವಾಸಾರ್ಹವಾದ ಎಐ ವ್ಯವಸ್ಥೆಯನ್ನು ನಿರ್ಮಿಸುವುದು, ಎಐಗೆ ಸಂಬಂಧಿಸಿದ ಅವಕಾಶಗಳು ಮತ್ತು ಅಪಾಯಗಳ ಬಗ್ಗೆ ಸಂಶೋಧನೆ ಮಾಡುವುದು ತನ್ನ ಗುರಿ ಎಂದು ಕಂಪನಿ ಹೇಳಿಕೊಂಡಿದೆ. ಓಪನ್ ಎಐನಲ್ಲಿದ್ದ ತಂತ್ರಜ್ಞರು ಸೇರಿ 2021ರಲ್ಲಿ ಸ್ಥಾಪಿಸಿದ ಈ ಕಂಪನಿಯು ಕ್ಲಾಡ್ ಕೋಡ್‌ನಿಂದ ಅತ್ಯಲ್ಪ ಅವಧಿಯಲ್ಲೇ ಭಾರಿ ಯಶಸ್ಸು ಗಳಿಸಿದೆ.

ಆಂತ್ರೊಪಿಕ್ ಕಂಪನಿಯಲ್ಲಿ ಮುಖ್ಯ ತಂತ್ರಜ್ಞಾನ ಅಧಿಕಾರಿ ಆಗಿರುವುದು (ಸಿಟಿಒ) ಕನ್ನಡಿಗ ರಾಹುಲ್ ಪಾಟೀಲ. ಇವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು. ನಗರದ ಬಾಲ್ಡ್‌ವಿನ್ ಬಾಲಕರ ಪ್ರೌಢಶಾಲೆ, ಸೇಂಟ್ ಜೋಸೆಫ್ ಪದವಿ ಪೂರ್ವ ಕಾಲೇಜು ಮತ್ತು ಪಿಇಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಓದಿದ ಇವರು, ಅರಿಝೋನಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ವಾಷಿಂಗ್ಟನ್ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು. ಮೈಕ್ರೊಸಾಫ್ಟ್, ಅಮೆಜಾನ್ ವೆಬ್ ಸರ್ವೀಸಸ್ ಮತ್ತು ಒರಾಕಲ್ ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್ ಮುಂತಾದ ಕಂಪನಿಗಳಲ್ಲಿ ದಶಕಕ್ಕೂ ಹೆಚ್ಚು ಕಾಲದ ದುಡಿದ ಇವರು, 2025ರ ಅಕ್ಟೋಬರ್‌ನಲ್ಲಿ ಸಿಟಿಒ ಆಗಿ ಅಂತ್ರೊಪಿಕ್ ಸೇರಿದರು. ಕಂಪನಿಯು ಎಐ ಕ್ಷೇತ್ರದಲ್ಲಿ ವೇಗವಾಗಿ ಪ್ರಗತಿ ಸಾಧಿಸುತ್ತಿದ್ದು, ರಾಹುಲ್ ಅವರ ಕೌಶಲವೂ ಆಂತ್ರೊಪಿಕ್ ಬೆಳವಣಿಗೆಯ ಹಿಂದಿದೆ. ಅಮೆರಿಕದ ಹೊರಗೆ ಟೋಕಿಯೊದಲ್ಲಿ ಕಾರ್ಪೊರೇಟ್ ಕಚೇರಿ ... ಹೊಂದಿರುವ ಆಂತ್ರೊಪಿಕ್, ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿಯೂ ಕಚೇರಿ ಆರಂಭ ಮಾಡಲಿದೆ ಎನ್ನಲಾಗುತ್ತಿದೆ.

## ಐಟಿ ಕ್ಷೇತ್ರದ ಮೇಲೆ ಏನು ಪರಿಣಾಮ?



ಕಳೆದ ಬುಧವಾರ ಷೇರುಮಾರುಕಟ್ಟೆಯಲ್ಲಿ ಕಂಡು ಬಂದ 'ಮಹಾಪತನ'ದ ನಂತರ ಐಟಿ ಕಂಪನಿಗಳ ಷೇರುಗಳಲ್ಲಿ ದೊಡ್ಡ ಮಟ್ಟದ ಚೇತರಿಕೆ ಕಂಡು ಬಂದಿಲ್ಲ. ಐಟಿ ಉದ್ಯಮದಲ್ಲಿ ಇದರ ಬಗ್ಗೆ ಮಿಶ್ರ ಅಭಿಪ್ರಾಯಗಳು ವ್ಯಕ್ತವಾಗಿವೆ. ದೊಡ್ಡ ದೊಡ್ಡ ಕಂಪನಿಗಳು ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಐಟಿ ವಲಯದಲ್ಲಿ, ವಿಶೇಷವಾಗಿ ಉದ್ಯೋಗಿಗಳ ಮಧ್ಯೆ ಈ ಟೂಲ್ ಬೀರಬಹುದಾದ ಪರಿಣಾಮಗಳ ಬಗೆಗಿನ ಚರ್ಚೆ ತೀವ್ರವಾಗಿ ನಡೆಯುತ್ತಿದೆ.

25 ಸಾವಿರ ಕೋಟಿ ಡಾಲರ್ ಮೌಲ್ಯದ (ಅಂದಾಜು ₹22.67 ಲಕ್ಷ ಕೋಟಿ) ಭಾರತದ ಐಟಿ ಕ್ಷೇತ್ರವು ಸೇವೆ ಆಧಾರಿತವಾಗಿದೆ. ಇಲ್ಲಿನ ಕಂಪನಿಗಳು ಸಾಫ್ಟ್‌ವೇರ್ ನಿರ್ವಹಣೆ, ಪರೀಕ್ಷೆ, ದತ್ತಾಂಶಗಳ ಪರಿಶೀಲನೆ, ಒಪ್ಪಂದಗಳ ವಿಶ್ಲೇಷಣೆ, ನಿಯಮಗಳ ಪಾಲನೆ ಮೇಲ್ವಿಚಾರಣೆ, ಗ್ರಾಹಕ ಸೇವೆಗಳು, ವ್ಯವಹಾರ ಪ್ರಕ್ರಿಯೆಯ ನಿರ್ವಹಣೆಯಂತಹ ಹೆಚ್ಚು ಮಾನವ ಸಂಪನ್ಮೂಲ ಬೇಡುವ ಹೊರಗುತ್ತಿಗೆ ಕೆಲಸಗಳನ್ನು ಮಾಡುತ್ತಾ ಬಂದಿವೆ. ದೇಶದ್ದಲ್ಲದೆ, ಹೊರದೇಶಗಳ ಕಂಪನಿಗಳಿಗೂ ಈ ಸೇವೆಗಳನ್ನು ಒದಗಿಸುತ್ತಿವೆ.

ತಾವು ಪ್ರಾಜೆಕ್ಟ್ ರೂಪದಲ್ಲಿ ಕೈಗೆತ್ತಿಕೊಂಡ ಕೆಲಸಗಳನ್ನು ಮಾಡಿಕೊಡಲು ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಎಂಜಿನಿಯರ್‌ಗಳನ್ನು ನೇಮಕ ಮಾಡುತ್ತವೆ. ಎಂಜಿನಿಯರ್‌ಗಳ ತಂಡಗಳನ್ನು ರಚಿಸಿ, ಅವುಗಳಿಗೆ ಪ್ರಾಜೆಕ್ಟ್‌ಗಳನ್ನು ನೀಡಿ ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಲು ಸೂಚಿಸುತ್ತವೆ. ಈ ಪ್ರಾಜೆಕ್ಟ್‌ಗಳನ್ನು ಎಂಜಿನಿಯರ್‌ಗಳ ಬದಲಾಗಿ ಸ್ವಯಂ ಚಾಲಿತವಾಗಿ ಕೆಲಸ ಮಾಡುವ ಎಐ ಟೂಲ್‌ಗೆ ಮಾಡಲು ಸಾಧ್ಯವಾದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಮಾನವ ಸಂಪನ್ಮೂಲವಿಲ್ಲದೇ ಕೆಲಸ ಮುಗಿಸಬಹುದು. ಹಾಗಾದಲ್ಲಿ ವಿದೇಶಗಳ ಕಂಪನಿಗಳು ಸೇರಿದಂತೆ ವಿವಿಧ ಕಂಪನಿಗಳು ಪ್ರಾಜೆಕ್ಟ್‌ಗಳನ್ನು ಭಾರತದ ತಂತ್ರಜ್ಞಾನ ಕಂಪನಿಗಳಿಗೆ ಹೊರಗುತ್ತಿಗೆ ನೀಡಬೇಕಾಗಬಹುದು. ಇದು ಆ ಕಂಪನಿಗಳು ಮಾಡುವ ನೇಮಕಾತಿಯ ಮೇಲೆ ನೇರ ಪರಿಣಾಮ ಬೀರಲಿದೆ.

'ಭಾರತದ ಐಟಿ ಕ್ಷೇತ್ರವು ಇನ್ನೂ ಪೂರ್ಣ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ತೆರೆದುಕೊಂಡಿಲ್ಲ. ಒಂದು ವೇಳೆ ಪ್ರಾಜೆಕ್ಟ್‌ಗಳು ಕಡಿಮೆಯಾದರೆ ಅಥವಾ ಕಂಪನಿಗಳು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ, ಕೆಲವು ವರ್ಷಗಳವರೆಗೆ ಎಂಜಿನಿಯರ್‌ಗಳ ನೇಮಕಾತಿ ಪ್ರಕ್ರಿಯೆಗೆ ಕಡಿವಾಣ ಬೀಳಬಹುದು. ಆದರೆ, ಆ ನಂತರ ಈ ತಂತ್ರಜ್ಞಾನಕ್ಕೆ ಪೂರಕವಾದ ಪರ್ಯಾಯ ಉದ್ಯೋಗಗಳು ಸೃಷ್ಟಿಯಾಗಬಹುದು' ಎಂದು ಹೇಳುತ್ತಾರೆ ಐಟಿ ಕ್ಷೇತ್ರದಲ್ಲಿ ತೊಡಗಿರುವವರು.

### ಪ್ರಭಾವ ಬೀರದು: ನಾಸ್ಕಾಂ

'ಆದರೆ, ಈಗ ಚರ್ಚೆಯಾಗುತ್ತಿರುವಂತೆ ಅತ್ಯಾಧುನಿಕ ಎಐ ಟೂಲ್‌ಗಳಿಂದ ದೇಶದ ಐಟಿ ಸೇವಾ ವಲಯಕ್ಕೆ ಯಾವುದೇ ಪರಿಣಾಮ ಬೀರದು. ಬದಲಿಗೆ ಈ ಟೂಲ್‌ಗಳು ವಲಯದ ಮಹತ್ವವನ್ನು ಮರುವ್ಯಾಖ್ಯಾನಿಸಲಿವೆ ಮತ್ತು 'ಇನ್ನಷ್ಟು ಹೆಚ್ಚಿಸಲಿವೆ' ಎಂದು ಐಟಿ ಉದ್ದಿಮೆಯ ಒಕ್ಕೂಟ ನಾಸ್ಕಾಂ ಹೇಳಿದೆ.

'ಭಾರತದ ತಂತ್ರಜ್ಞಾನ ಸೇವೆಗಳ ಕಂಪನಿಗಳು, ಸಂಕೀರ್ಣವಾದ ತಂತ್ರಜ್ಞಾನದ ವಾತಾವರಣದಲ್ಲಿ ಕಾರ್ಯಾಚರಿಸುತ್ತಿರುವ ಜಾಗತಿಕ ಮಟ್ಟದ ಕಂಪನಿಗಳೊಂದಿಗೆ ಕೆಲಸ ಮಾಡುತ್ತಿವೆ. ಎಐ ಆಧಾರಿತವಾದ ಮೌಲ್ಯಯುತ ಉದ್ದಿಮೆ ಸೃಷ್ಟಿಸಲು ಈ ಕ್ಷೇತ್ರದ ಬಗ್ಗೆ ಆಳವಾದ ಜ್ಞಾನ ಹೊಂದಿರುವ, ದೀರ್ಘ ಅನುಭವವುಳ್ಳ ಮತ್ತು ಉದ್ದಿಮೆಗೆ ಸಂಬಂಧಿಸಿದ ನಿರ್ದಿಷ್ಟ ವಿಷಯಗಳನ್ನು ಅರ್ಥೈಸಿಕೊಳ್ಳಬಲ್ಲವರ ನಡುವೆ ಉತ್ತಮ ಸಮನ್ವಯ ಇರಬೇಕು' ಎಂದು ಹೇಳಿದೆ.

'ದೊಡ್ಡ ಕಂಪನಿಗಳು ಎಐಯನ್ನು ಲಭ್ಯ ಮಾದರಿಯ ಹೊರತಾದ ಸರಳ ಪರಿಹಾರ ಎಂದುಕೊಂಡು ಅದನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಕಡಿಮೆ' ಎಂದು ನಾಸ್ಕಾಂ ಹೇಳಿಕೆಯಲ್ಲಿ ತಿಳಿಸಿದೆ.

# ಎಂಎಸ್‌ಇಗಳಿಗೆ ಅಡಮಾನ ರಹಿತ ಸಾಲ: ಆರ್‌ಬಿಐ

ಮುಂಬೈ (ಪಿಟಿಐ): ಅತಿಸಣ್ಣ ಹಾಗೂ ಸಣ್ಣ ಗಾತ್ರದ (ಎಂಎಸ್‌ಇ) ಉದ್ಯಮಗಳಿಗೆ ಬ್ಯಾಂಕ್‌ಗಳು ಯಾವುದೇ ಅಡಮಾನ ಇಲ್ಲದೆ ₹25 ಲಕ್ಷದವರೆಗೆ ಸಾಲ ನೀಡಬಹುದು ಎಂದು ಆರ್‌ಬಿಐ ಸೋಮವಾರ ಹೇಳಿದೆ. ಬ್ಯಾಂಕ್‌ಗಳು ಎಂಎಸ್‌ಇ ಉದ್ಯಮಗಳ ಹಣಕಾಸಿನ ಸ್ಥಿತಿ ಹಾಗೂ ಅವುಗಳ ಹಣಕಾಸಿನ ಹಿನ್ನೆಲೆಯನ್ನು ಪರಿಗಣಿಸಿ ಈ ಸಾಲ ನೀಡಬಹುದಾಗಿದೆ.

ಎಂಎಸ್‌ಇ ವಲಯಕ್ಕೆ ಸಾಲ ನೀಡುವುದರ ಕುರಿತ ನಿರ್ದೇಶನಗಳಿಗೆ ಆರ್‌ಬಿಐ ತಿದ್ದುಪಡಿ ತಂದಿದೆ.

'ಎಂಎಸ್‌ಇ ಉದ್ಯಮಗಳ ಇದುವರೆಗಿನ ಹಣಕಾಸಿನ ಹಿನ್ನೆಲೆ ಪರಿಗಣಿಸಿ, ಅವುಗಳ ಈಗಿನ ಹಣಕಾಸಿನ ಸ್ಥಿತಿ ಪರಿಗಣಿಸಿ ಬ್ಯಾಂಕ್‌ಗಳು ತಮ್ಮ ಆಂತರಿಕ ನೀತಿಗೆ ಅನುಗುಣವಾಗಿ ₹25 ಲಕ್ಷದವರೆಗೆ ಸಾಲವನ್ನು ಅಡಮಾನ ಇಲ್ಲದೆ ಕೊಡಬಹುದು' ಎಂದು ಹೇಳಿದೆ.

ಲಭ್ಯವಿರುವೆಡೆಗಳಲ್ಲಿ ಬ್ಯಾಂಕ್‌ಗಳು ಸಾಲ ಖಾತರಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಅದು ತಿಳಿಸಿದೆ. 'ಆದರೆ ಇಲ್ಲಿ ಹೇಳಿರುವ ಮಿತಿಯವರೆಗಿನ ಸಾಲಕ್ಕೆ, ಸಾಲ ಪಡೆಯುವವರು ಸ್ವಇಚ್ಛೆಯಿಂದ ಚಿನ್ನವನ್ನು ಮತ್ತು ಬೆಳ್ಳಿಯನ್ನು ಅಡಮಾನವಾಗಿ ಇರಿಸಿದರೆ ಅದನ್ನು ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದಿಲ್ಲ' ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ತಿದ್ದುಪಡಿ ತಂದಿರುವ ಈ ನಿಯಮಗಳು ಏಪ್ರಿಲ್ 1ರಿಂದ ಅನ್ವಯ ಆಗಲಿವೆ.

# 'ಜಿಡಿಪಿ ಪ್ರಗತಿ ಶೇ 6.4ರಷ್ಟು'

ನವದೆಹಲಿ (ಪಿಟಿಐ): ಮುಂದಿನ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 6.4ರಷ್ಟು ಇರುವ ನಿರೀಕ್ಷೆ ಇದೆ ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಮೂಡೀಸ್ ಸೋಮವಾರ ಹೇಳಿದೆ. ಇದು ಜಿ-20 ರಾಷ್ಟ್ರಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಆಗಿರಲಿದೆ.

ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಹೆಚ್ಚಳವಾಗಿದೆ. ಸರ್ಕಾರದ ನೀತಿ ನಿಯಮಗಳು ಮತ್ತು ಸದೃಢ ಬ್ಯಾಂಕಿಂಗ್ ವ್ಯವಸ್ಥೆಯು ಜಿಡಿಪಿ ಹೆಚ್ಚಳಕ್ಕೆ ನೆರವಾಗಲಿವೆ ಎಂದು ತಿಳಿಸಿದೆ.

ಬ್ಯಾಂಕ್‌ಗಳ ಆಸ್ತಿ ಗುಣಮಟ್ಟ ಉತ್ತಮವಾಗಿದೆ. ಎಂಎಸ್‌ಎಂಇ ವಲಯಕ್ಕೆ ನೀಡಿದ ಸಾಲದ ವಸೂಲಾತಿಯಲ್ಲಿ ಸಣ್ಣ ಪ್ರಮಾಣದ ಸಮಸ್ಯೆ ಕಾಣಬಹುದು. ಇದನ್ನು ಹೊರತುಪಡಿಸಿದರೆ, ಬ್ಯಾಂಕ್‌ಗಳು ಸಾಲದ ನಷ್ಟವನ್ನು ನಿಭಾಯಿಸಲು ಸಾಕಷ್ಟು ಸಂಪತ್ತನ್ನು ಹೊಂದಿವೆ ಎಂದು ಮೂಡೀಸ್ ಬ್ಯಾಂಕಿಂಗ್ ವ್ಯವಸ್ಥೆಯ ಮುನ್ನೋಟ ವರದಿಯಲ್ಲಿ ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಆಗಿದೆ. ಆದಕ್ಕೂ ಮುಂಚಿತವಾಗಿ ವೈಯಕ್ತಿಕ ಆದಾಯ ತೆರಿಗೆಯ ಮಿತಿ ಹೆಚ್ಚಳ ಮಾಡಲಾಗಿದೆ. ಇವು ಗ್ರಾಹಕರ ಕೈಯಲ್ಲಿ ಹಣ ಉಳಿಯುವಂತೆ ಮಾಡಲಿವೆ ಮತ್ತು ಜನರ ಖರೀದಿ ಸಾಮರ್ಥ್ಯ ಹೆಚ್ಚಿಸಿವೆ. ಈ ಕ್ರಮಗಳು ಬೆಳವಣಿಗೆಗೆ ಸಹಕಾರಿಯಾಗಿವೆ ಎಂದು ತಿಳಿಸಿದೆ.

ಕಳೆದ ತಿಂಗಳು ಸಂಸತ್ತಿನಲ್ಲಿ ಮಂಡನೆಯಾದ ಆರ್ಥಿಕ ಸಮೀಕ್ಷೆ ವರದಿಯು ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರಷ್ಟಾಗಲಿದೆ ಎಂದು ಅಂದಾಜಿಸಿದೆ. ಮೂಡೀಸ್ ಅಂದಾಜು ಇದಕ್ಕಿಂತ ಕಡಿಮೆ ಇದೆ.

ಸರ್ಕಾರದ ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಶೇ 7.4ರಷ್ಟಾಗುವ ನಿರೀಕ್ಷೆಯಿದೆ. 2024-25ರಲ್ಲಿ ಇದು ಶೇ 6.5ರಷ್ಟಾಗಿತ್ತು.

ಪ್ರಸ್ತುತ ಬ್ಯಾಂಕ್‌ಗಳ ಸಾಲದ ಬೆಳವಣಿಗೆ ದರ ಶೇ 10.6ರಷ್ಟಿದೆ. ಇದು ಮುಂದಿನ ಆರ್ಥಿಕ ವರ್ಷದಲ್ಲಿ ಶೇ 11ರಿಂದ ಶೇ 13ರಷ್ಟಾಗಬಹುದು ಎಂದು ಮೂಡಿಸ್ ಹೇಳಿದೆ.

# ಜಿಎಸ್‌ಟಿ ಸರಳೀಕರಣ: ರಾಜ್ಯಗಳಿಗೆ ಪರಿಹಾರ ಇಲ್ಲ-ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ


**ನವದೆಹಲಿ:** ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಸರಳೀಕರಣದಿಂದ ರಾಜ್ಯಗಳಿಗೆ ಆಗಿರುವ ನಷ್ಟದ ಬಗ್ಗೆ ಪರಿಹಾರ ನೀಡುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.


ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಗೆ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಈ ಬಗ್ಗೆ ಉತ್ತರ ನೀಡಿದ್ದಾರೆ. ಜಿಎಸ್‌ಟಿ ವ್ಯವಸ್ಥೆ ಸರಳೀಕರಣದಿಂದ ವಾರ್ಷಿಕ ₹15 ಸಾವಿರ ಕೋಟಿ ನಷ್ಟವಾಗಲಿದ್ದು, ಇದಕ್ಕೆ ಪರಿಹಾರ ನೀಡಬೇಕು ಎಂದು ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು, ತಮ್ಮ ರಾಜ್ಯಗಳಿಗೆ ವಾರ್ಷಿಕ ತಲಾ ₹10 ಸಾವಿರ ಕೋಟಿ ನಷ್ಟವಾಗಲಿದೆ ಎಂದು ತಮಿಳುನಾಡು ಹಾಗೂ ಕೇರಳ ಸರ್ಕಾರಗಳು ದೂರಿದ್ದವು. ಬಿಜೆಪಿಯೇತರ ಸರ್ಕಾರಗಳ ಸಚಿವರು ನವದೆಹಲಿಯಲ್ಲಿ ಸಭೆ ನಡೆಸಿ ನಷ್ಟ ಪರಿಹಾರ ನೀಡುವಂತೆ ಒತ್ತಡ ಹೇರಿದ್ದವು. ರಾಜ್ಯ ಸರ್ಕಾರಗಳ ಬೇಡಿಕೆಯನ್ನು ಹಣಕಾಸು ಸಚಿವಾಲಯ ಸಾರಾಸಗಟಾಗಿ ತಳ್ಳಿ ಹಾಕಿದೆ.

## ಕರ್ನಾಟಕದಲ್ಲಿ ₹1.30 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಕರ್ನಾಟಕದಲ್ಲಿ 2025–26ನೇ ಸಾಲಿನಲ್ಲಿ ಜನವರಿ ಅಂತ್ಯದ ವರೆಗೆ ₹1.30 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿದೆ ಎಂದು ಪಂಕಜ್ ಚೌಧರಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರ ನೀಡಿರುವ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ ಕಳೆದ ವರ್ಷದಿಂದ ಈ ವರ್ಷ ಹೆಚ್ಚುವ ಸಾಧ್ಯತೆ ಇದೆ.

ಪ್ರತ್ಯೇಕ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರ ಬಿಡುಗಡೆಗೆ ಬಾಕಿ ಇಲ್ಲ. ಕರ್ನಾಟಕಕ್ಕೆ 2022–23 ಹಾಗೂ 2023–24ರಲ್ಲಿ ₹21,482 ಕೋಟಿ ನಷ್ಟ ಪರಿಹಾರ ಬಿಡುಗಡೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.



## ❖ ಕೃಷಿ ಉತ್ಪನ್ನ ಸುಂಕ ಕಡಿತ?

**ಸಂದರ್ಭ: ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಫ್ಯಾಕ್ಟ್ ಶೀಟ್ ಪ್ರಕಟಿಸಿದ ಶ್ವೇತಭವನ: 'ಕೆಲವು ದ್ವಿದಳ ಧಾನ್ಯಗಳು ಸೇರಿದಂತೆ ಅಮೆರಿಕದಿಂದ ಆಮದು ಮಾಡಿಕೊಳ್ಳುವ ವಿಶಾಲ ಶ್ರೇಣಿಯ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿತ ಮಾಡಲು ಅಥವಾ ಶೂನ್ಯಕ್ಕಿಳಿಸಲು ಭಾರತ ಮುಂದಾಗಿದೆ ಎಂದು ಶ್ವೇತಭವನ ಬಿಡುಗಡೆ ಮಾಡಿರುವ ಫ್ಯಾಕ್ಸ್ ಶೀಟ್ ವರದಿ ಹೇಳಿದೆ.**

- ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ರೂಪುರೇಷೆ, ನಿಬಂಧನೆ ಗಳನ್ನು ಒಳಗೊಂಡ ಶೀಟ್‌ಅನ್ನು, ಫ್ಯಾಕ್ಸ್ 'ಮುಂದಿನ ಸಮೃದ್ಧ ಹಾದಿ' ಎಂದೇ ಬಣ್ಣಿಸಲಾಗಿದೆ. ಇದರಲ್ಲಿರುವ ಅಂಶಗಳು ಯಥಾವತ್ ಜಾರಿಗೊಂಡರೆ, ಅದು ಭಾರತ ಕೃಷಿ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.
- ಈಗಾಗಲೇ ಭಾರತ-ಅಮೆರಿಕ ನಡುವೆ ಫೆಬ್ರುವರಿ 6ರಂದು ಮಧ್ಯಂತರ ಒಪ್ಪಂದದ ಚೌಕಟ್ಟನ್ನು ರೂಪಿಸಲಾಗಿದೆ. ಇದಾದ ಮೂರು ದಿನಗಳಲ್ಲೇ ಫ್ಯಾಕ್ಸ್ ಶೀಟ್ ಬಿಡುಗಡೆಗೊಂಡಿದೆ. ಕೃಷಿ, ಆಹಾರ ಉತ್ಪನ್ನಗಳ ಸುಂಕ ಕಡಿತಕ್ಕೆ ಸಂಬಂಧಿಸಿದಂತೆ ಫೆ.6ರಂದು ಉಭಯ ದೇಶಗಳು ನೀಡಿದ ಹೇಳಿಕೆಗೂ, ಫ್ಯಾಕ್ಸ್ ಶೀಟ್‌ನಲ್ಲಿರುವ ಅಂಶಗಳಿಗೂ ವ್ಯತ್ಯಾಸ ಕಂಡುಬಂದಿದೆ.
- ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದ ವೇಳೆ ಆಹಾರ ಮತ್ತು ಕೃಷಿ ಕ್ಷೇತ್ರಗಳ ಹಿತಾಸಕ್ತಿ ಕಾಪಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಸಂಸತ್‌ಗೆ ಭರವಸೆ ನೀಡಿದ್ದರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಕೂಡ, 'ಗೋಧಿ, ಜೋಳ, ಅಕ್ಕಿ, ರಾಗಿ, ಆಲೂಗಡ್ಡೆ, ಈರುಳ್ಳಿ, ಬಟಾಣಿ, ಬೀನ್ಸ್, ಸೌತೆಕಾಯಿ, ಅಣಬೆ, ದ್ವಿದಳ ಧಾನ್ಯಗಳು ಅಮೆರಿಕ ದಿಂದ ಭಾರತಕ್ಕೆ ಬರುವುದಿಲ್ಲ' ಎಂದು ಹೇಳಿದ್ದರು.



### ಸುಂಕ ಇಳಿಕೆ ಸಾಧ್ಯತೆ

ಧಾನ್ಯಗಳು, ಬೇಳೆಕಾಳುಗಳು, ಕೆಂಪು ಜೋಳ, ಡ್ರೈಫ್ರೂಟ್‌ಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣು, ದ್ವಿದಳ ಧಾನ್ಯಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಮದ್ಯ

### ಭಾರತದ ಒಪ್ಪಿಗೆ

ಅಮೆರಿಕದಿಂದ ಇಂಧನ, ಮಾಹಿತಿ ತಂತ್ರಜ್ಞಾನ, ಸಂವಹನ, ಕಲ್ಲಿದ್ದಲು, ಕೃಷಿ ಮತ್ತು ಇತರೆ ವಲಯಗಳ ಉತ್ಪನ್ನಗಳು ಸೇರಿ ಒಟ್ಟು 500 ಬಿಲಿಯನ್ ಡಾಲರ್‌ಗಿಂತ (ಸರಿಸುಮಾರು ₹45.28 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ಸರಕಗಳನ್ನು ಖರೀದಿಸಲು ಭಾರತ ಒಪ್ಪಿಕೊಂಡಿದೆ.

### ಅಮೆರಿಕದ ಆದ್ಯತೆ

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಒಪ್ಪಂದದ ಮೂಲಕ ಅಮೆರಿಕದ ರಾಷ್ಟ್ರೀಯ ಮತ್ತು ಆರ್ಥಿಕ ಭದ್ರತೆ ರಕ್ಷಿಸಲು ಮತ್ತು ಅಲ್ಲಿನ ರಫ್ತುದಾರರಿಗೆ ಮಾರುಕಟ್ಟೆ ಪ್ರವೇಶಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸುಂಕ ಮತ್ತು ಸುಂಕ ರಹಿತ ಸರಕುಗಳ ನಡುವಿನ ವ್ಯಾಪಾರ ಅಡೆತಡೆ ನಿವಾರಿಸಲು ಯತ್ನಿಸುತ್ತಿದ್ದಾರೆ.

### ಭಾರತದ ರಕ್ಷಣಾತ್ಮಕ ಸುಂಕ ನೀತಿ

ಭಾರತವು ಅಮೆರಿಕದ ಮೇಲೆ ಗರಿಷ್ಠ ಸುಂಕ ದರವನ್ನೇ ಕಾಯ್ದುಕೊಂಡಿದೆ. ಕೃಷಿ ಉತ್ಪನ್ನಗಳ ಮೇಲೆ ಶೇ 37ರಷ್ಟು, ಕೆಲವು ವಾಹನಗಳಿಗೆ ಶೇ 100ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಭಾರತವು ಹೆಚ್ಚು ರಕ್ಷಣಾತ್ಮಕವಾದ ಸುಂಕ ವಿಧಿಸುವ ಇತಿಹಾಸವನ್ನು ಹೊಂದಿದೆ. ಇದರಿಂದ ಅಮೆರಿಕದಿಂದ ಭಾರತಕ್ಕೆ ಹಲವು ಸರಕುಗಳ ರಫ್ತು ನಿಷೇಧಿಸಲಾಗಿದೆ ಎಂದು ಫ್ಯಾಕ್ಟ್ ಶೀಟ್ ಹೇಳಿದೆ. ಅಂತಿಮ ಒಪ್ಪಂದದ ಮೂಲಕ ಭಾರತ ಮತ್ತು ಅಮೆರಿಕದ ಮುಂದೆ ಸ್ಪಷ್ಟವಾದ ಮಾರ್ಗ ತೆರೆದು ಕೊಳ್ಳುತ್ತದೆ. ಪ್ರಮುಖ ವ್ಯಾಪಾರ ಪಾಲುದಾರ ದೇಶವಾಗಿರುವ ಭಾರತದೊಂದಿಗೆ ಸಮತೋಲಿತ, ಪರಸ್ಪರ ಸಹಕಾರದ ವ್ಯಾಪಾರ ಒಪ್ಪಂದ ಸಾಕಾರಗೊಳ್ಳಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬದ್ಧತೆ ಕಾರಣ ಎಂದೂ ಶ್ವೇತಭವನ ಹೇಳಿದೆ.

- ಆದರೆ, ಫ್ಯಾಕ್ಸ್ ಶೀಟ್‌ನಲ್ಲಿ ಮುಖ್ಯವಾಗಿ, ಅಮೆರಿಕದಿಂದ ಆಮದು ಮಾಡಿಕೊಳ್ಳುವ ಮತ್ತು ಸುಂಕ ಕಡಿತಕ್ಕೆ ಒಳಗಾಗುವ ಸರಕುಗಳಲ್ಲಿ 'ಮಸೂರ್ ಬೇಳೆ'ಯನ್ನು ಉಲ್ಲೇಖಿಸಲಾಗಿದೆ. ಸದ್ಯ ಮಸೂರ್ ಬೇಳೆಗೆ ಶೇ 10ರಷ್ಟು ಸುಂಕ ಇದೆ. ಇದರ ಜತೆಗೆ 'ಕೆಂಪು ಜೋಳ'ವನ್ನು ಮೇವು ಎಂದು ಮೊದಲು ಹೇಳಲಾಗಿತ್ತು. ಫ್ಯಾಕ್ಸ್ ಶೀಟ್‌ನಲ್ಲಿ ಎಲ್ಲ ಬಗೆಯ ಕೆಂಪು ಜೋಳವನ್ನೂ ಸುಂಕ ಕಡಿತಕ್ಕೆ ಒಳಗಾಗುವ ಸರಕುಗಳ ಪಟ್ಟಿಗೆ ಸೇರಿಸಲಾಗಿದೆ.
- ಅಮೆರಿಕದ ಕೈಗಾರಿಕಾ ಸರಕುಗಳ ಮೇಲಿನ ತೆರಿಗೆಯನ್ನೂ ಭಾರತ ಕಡಿತ ಮಾಡಬಹುದು ಎಂದು ಫ್ಯಾಕ್ಸ್ ಶೀಟ್‌ನಲ್ಲಿ ಹೇಳಲಾಗಿದೆ.

- 'ಬಿಟಿಎ' ಅಂತಿಮಗೊಂಡ ನಂತರ ಭಾರತದ ಕೆಲವು ಸರಕುಗಳು ಸುಂಕ ರಹಿತವಾಗಿ ಅಮೆರಿಕದ ಮಾರುಕಟ್ಟೆ ಹಾಗೂ ಅಮೆರಿಕದ ಕೃಷಿ ಉತ್ಪನ್ನಗಳು ಭಾರತದ ಮಾರುಕಟ್ಟೆ ಪ್ರವೇಶಿಸಲಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.
- ವ್ಯಾಪಾರ ಒಪ್ಪಂದ ಅಂತಿಮಗೊಳ್ಳುವ ಮುನ್ನ 'ಹೂಡಿಕೆ ಸೇವೆ, ಕಾರ್ಮಿಕ ವಲಯ, ತಾಂತ್ರಿಕ ಅಡೆತಡೆ, ಭೌತಿಕ ಆಸ್ತಿ,ಕಸ್ಟಮ್ಸ್, ಸರಕುಗಳ ಸಂಗ್ರಹ, ವ್ಯಾಪಾರ ಅಕ್ರಮ ತಡೆ ಸೇರಿದಂತೆ ಕೆಲವು ವಿಷಯಗಳು ಇತ್ಯರ್ಥವಾಗ ಬೇಕಿವೆ. ಆ ನಿಟ್ಟಿನಲ್ಲಿ ಉಭಯ ದೇಶಗಳು ಮಾತುಕತೆಯಲ್ಲಿ ತೊಡಗಿದ್ದು. ಕೆಲವೇ ವಾರಗಳಲ್ಲಿ ಒಪ್ಪಂದ ಅಂತಿಮಗೊಳ್ಳಲಿದೆ. ಈ ಒಪ್ಪಂದವು ಉಭಯ ದೇಶಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಯೋಜನಕಾರಿ ಯಾಗಲಿದೆ' ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ.

## ❖ ಬೊಕ್ಕಸದ ಹೊರೆ ತಗ್ಗಿಸಿದ ಸುಪ್ರೀಂ ಕೋರ್ಟ್ ತೀರ್ಪು

**ಸಂದರ್ಭ: 'ಭೂಸ್ವಾಧೀನಕ್ಕಾಗಿ ನೀಡಲಾದ ಪರಿಹಾರದ ವಿರುದ್ಧ ಸಲ್ಲಿಕೆಯಾಗಿರುವ ಮೇಲ್ಮನವಿಗಳು ಲಿಮಿಟೇಷನ್ (ಮಿತಿ) ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವುದು ವಿಳಂಬವಾದಲ್ಲಿ ಹೈಕೋರ್ಟ್‌ಗಳು ಅದನ್ನು ಕ್ಷಮಿಸಬಹುದು' ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.**

- ತೀರ್ಪಿನಿಂದಾಗಿ, ಕರ್ನಾಟಕ ಸರ್ಕಾರಕ್ಕೆ ₹60 ಸಾವಿರ ಕೋಟಿಯಷ್ಟು ಭೂ ಪರಿಹಾರದ ಹೊರೆ ತಗ್ಗಿದಂತಾಗಿದೆ.
- 2013ರ ಭೂಸ್ವಾಧೀನ ಕಾಯ್ದೆಯ ಸೆಕ್ಷನ್ 74 ಮತ್ತು 1963ರ ಮಿತಿ ಕಾಯ್ದೆಯ ಸೆಕ್ಷನ್. ನಿಯಮಗಳ ನಡುವಿನ ಸಂಕೀರ್ಣ ಕಾನೂನಾತ್ಮಕ ಪ್ರಶ್ನೆಗೆ ನ್ಯಾಯಮೂರ್ತಿ ಗಳಾದ ಎಂ.ಎಂ.ಸುಂದರೇಶ್ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ನ್ಯಾಯಪೀಠ ಉತ್ತರ ನೀಡಿದೆ.
- ಭೂಸ್ವಾಧೀನ ಪ್ರಕರಣಗಳಲ್ಲಿ ವಿಳಂಬ ಅರ್ಜಿಗಳನ್ನು ಪರಿಗಣಿಸುವಾಗ, ಹೈಕೋರ್ಟ್‌ಗಳು ಮತ್ತು ಉದಾರ ಪ್ರಾಯೋಗಿಕ ದೃಷ್ಟಿಕೋನ ಅಳವಡಿಸಿಕೊಳ್ಳ ಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.
- ಅನೇಕ ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು 1894ರ ಭೂ ಸ್ವಾಧೀನ ಕಾಯ್ದೆಯಡಿ ಆರಂಭಿಸಲಾಗಿತ್ತು. ಆದರೆ, ಭೂ ಪರಿಹಾರ ನಿಗದಿಪಡಿಸಿರಲಿಲ್ಲ. ಅದೇ ಹೊತ್ತಿಗೆ 2013ರ ಕಾಯ್ದೆ ಜಾರಿಗೆ ಬಂದಿತ್ತು. ಇವುಗಳಿಗೆ ಯಾವ ಕಾಯ್ದೆ ಅನ್ವಯಿಸುತ್ತದೆ ಎಂಬ ಗೊಂದಲ ಉಂಟಾಗಿತ್ತು. ಇದಕ್ಕೆ ಸ್ಪಷ್ಟನೆ ನೀಡಿರುವ ನ್ಯಾಯಪೀಠ, 'ಇಂತಹ ಪ್ರಕರಣ ಗಳಲ್ಲಿ 2013ರ ಕಾಯ್ದೆಯಡಿ ಪರಿಹಾರ ನಿರ್ಣಯಿಸಬೇಕು' ಎಂದು ಸೂಚಿಸಿದೆ.

## ❖ ಕೆಎಸ್‌ಡಿಎಲ್ ಪ್ರಚಾರಕ್ಕಿಳಿದ ತಮನ್ನಾ


- ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ನೂತನ ರಾಯಭಾರಿ ನಟಿ ತಮನ್ನಾ ಭಾಟಿಯಾ ಅವರು, ನಿಗಮದ 57 ಹೊಸ ಉತ್ಪನ್ನ ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.
- ಮೈಸೂರ್ ಸ್ಯಾಂಡಲ್ ಉತ್ಪನ್ನಗಳಿಗೆ ನಟಿ ಎರಡು ವರ್ಷ ರಾಯಭಾರಿ.



**ಹೊಸ ಉತ್ಪನ್ನಗಳು**

ಮೈಸೂರ್ ಸ್ಯಾಂಡಲ್ ಸೋಪುಗಳಿಗೆ ಹೆಸರುವಾಸಿಯಾದ ಕೆಎಸ್‌ಡಿಎಲ್ ಈಗ ಗಂಧದ ಎಣ್ಣೆ, ವಿವಿಧ ಪರಿಮಳದ ಸೋಪುಗಳು, ಸುಗಂಧ ದ್ರವ್ಯ, ಹಲ್ಲುಜ್ಜುವ ಪೇಸ್ಟ್, ಕೊಬ್ಬರಿ ಎಣ್ಣೆ, ಪೆಟ್ರೋಲಿಯಂ ಜೆಲ್ಲಿ, ವಿವಿಧ ಸಾವಯವ ಉತ್ಪನ್ನಗಳು ಸೇರಿ 57 ನೂತನ ಉತ್ಪನ್ನಗಳನ್ನು ಮಂಗಳವಾರ ಬಿಡುಗಡೆ ಮಾಡಿದೆ.

ನಿಗಮದ 100ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ವಿವರಿಸುವ 'ಸುಗಂಧ ಸಿರಿ' ಮತ್ತು 'ಅರೋಮ್ಯಾಟಿಕ್ ಜರ್ನಿ' ಕಾಫಿ ಟೇಬಲ್ ಪುಸ್ತಕಗಳೂ ಮಾರುಕಟ್ಟೆಗೆ ಬಂದಿವೆ.




# ವಿವಾದದಲ್ಲಿ ಹುಟ್ಟಿದ ಆ್ಯಕ್ಷನ್ ಎಐ

2026 ಬಾಟ್‌ಗಳಿಗೆ ಹೊಸ ಯುಗ. ಒಂದು ಎಐ ಇನ್ನೊಂದು ಎಐ ಜೊತೆಗೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುತ್ತವೆ. ಇದು ವಿಜ್ಞಾನದ ಕಟ್ಟುಕತೆಯಂತೆ ಕಂಡರೂ, ಅದುವೇ ವಾಸ್ತವ.

• ಕೃಷ್ಣಭಟ್

ತಂತ್ರಜ್ಞಾನಲೋಕ 2026ರ ಆರಂಭದಲ್ಲಿ ಒಂದು ಅದ್ಭುತ ಆವಿಷ್ಕಾರಕ್ಕೆ ಸಾಕ್ಷಿಯಾಯಿತು. ಇದನ್ನು ಅನೇಕರು 'ಹೊಸ ಕಾಲದ ಸಿರಿ' ಎಂದೂ ಕರೆಯುತ್ತಿದ್ದಾರೆ. ಮೊದಲು 'ಕ್ಲಾಡ್‌ಬಾಟ್' (Clawdbot) ಎಂಬ ಹೆಸರಿನಲ್ಲಿ ಉದ್ಭವವಾದ ಒಂದು ಪ್ರಾಜೆಕ್ಟ್, ನಂತರ 'ಮೋಲ್ಟ್‌ಬಾಟ್' (Moltbot) ಆಗಿ ಬದಲಾಯಿತು. ಇದು ಈಗ ನಾವೆಲ್ಲ ಬಳಸುತ್ತಿರುವ ಬರಿ ಮಾತನಾಡಬಲ್ಲ ಚಾಟ್‌ಬಾಟ್ ಅಲ್ಲ; ನಾವು ಹೇಳಿದ ಕೆಲಸಗಳನ್ನು ಮಾಡುವ 'ಏಜೆಂಟಿಕ್ ಎಐ'.

## ಕೈಕಾಲುಗಳಿರುವ 'ಎಐ'

ಸಾಮಾನ್ಯ ಜನರಿಗೆ ಈ ಎಐ ಹೇಗಿದೆ ಎಂದು ಹೇಳುವುದಾದರೆ, ನಾವು ಈಗ 'ಜಿಪಿಎಸ್' ಬಳಸುತ್ತಿದ್ದೆವು, ಇದು ನಮಗೆ 'ಸ್ವಯಂಚಾಲಿತ ಕಾರು' ಕೊಟ್ಟಿದೆ. ಜಿಪಿಎಸ್ ನಿಮಗೆ ದಾರಿ ತೋರಿಸುತ್ತದೆ, ಆದರೆ ಸ್ವಯಂಚಾಲಿತ ಕಾರು ನಿಮ್ಮನ್ನು ಬೇಕಾದಲ್ಲಿಗೆ ಕರೆದೊಯ್ಯುತ್ತದೆ.

ಹಳೆಯ ಎಐಗಳಿಗೆ ನೀವು 'ಕೆಲಸಗಳ ಪಟ್ಟಿ ಮಾಡಿಕೊಡಪ್ಪಾ' ಎಂದು ಕೇಳುತ್ತಿದ್ದಿರಿ. ಆದರೆ, ಮೋಲ್ಟ್‌ಬಾಟ್ ನಿಮ್ಮ ಕೆಲಸದ ಪಟ್ಟಿ ನೋಡಿಕೊಂಡು ತಾನೇ ಕೆಲಸವನ್ನು ಮಾಡುತ್ತದೆ. ಇದು ನಿಮ್ಮ ಕಂಪ್ಯೂಟರ್‌ನ ಸ್ಕ್ರೀನ್ ನೋಡಬಲ್ಲದು, ಮೌಸ್ ಅನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಬಲ್ಲದು. ಟೈಪ್ ಕೂಡ ಮಾಡಬಲ್ಲದು.

## ಕೆಲವು ಉದಾಹರಣೆಗಳು

**ಇಮೇಲ್ ಡಿಲೀಟ್ ಮಾಡುವುದು:** ಒಬ್ಬ ಬಳಕೆದಾರ ತನ್ನ 75,000 ಹಳೆಯ ಇಮೇಲ್‌ಗಳನ್ನು ಡಿಲೀಟ್ ಮಾಡು ಎಂದು ಹೇಳಿದ. ಈ ಬಾಟ್ ಕೇವಲ ಐದೇ ನಿಮಿಷದಲ್ಲಿ ಆ ಎಲ್ಲಾ ಇಮೇಲ್‌ಗಳನ್ನು ಆರಿಸಿ ಡಿಲೀಟ್ ಮಾಡಿತು.

**ಚೌಕಾಶಿ ಮಾಡುವ ಸಹಾಯಕ:** ಕಾರು ಖರೀದಿಸುವಾಗ ಒಬ್ಬ ಗ್ರಾಹಕನಿಗೆ ಈ ಬಾಟ್ ಸಹಾಯ ಮಾಡಿತು ಎಂದಾದರೆ, ಬೇರೆ ಬೇರೆ ಡೀಲರ್‌ಗಳಿಗೆ ಇಮೇಲ್ ಕಳುಹಿಸಿ, ಅವರ ಜೊತೆಗೆ ದರದ ಬಗ್ಗೆ ಚರ್ಚೆ ಮಾಡಿ, ಮಾಲೀಕನಿಗೆ ಲಕ್ಷಗಟ್ಟಲೆ ಹಣ ಉಳಿಸಿಕೊಡಬಲ್ಲದು!

**ಅಡುಗೆಯ ಆರ್ಡರ್:** ನೀವು ನಿದ್ರೆಯಿಂದ ಎದ್ದ ತಕ್ಷಣವೇ ನಿಮ್ಮ ನಿದ್ದೆಯ ಡೇಟಾವನ್ನು ಗಮನಿಸಿ, ನಿಮಗೆ ಬೇಕಾದ ಕಾಫಿ ಅಥವಾ ತಿಂಡಿಯನ್ನು ಆರ್ಡರ್ ಮಾಡುವ ಸಾಮರ್ಥ್ಯ ಇದಕ್ಕಿದೆ!

**'ಕ್ಲಾಡ್‌ಬಾಟ್ ಸಮಸ್ಯೆ':** ಹ್ಯಾಕರ್‌ಗಳಿಗೆ ದಾರಿ ಮಾಡಿಕೊಟ್ಟ ಹೆಸರು ಬದಲಾವಣೆ

ಈ ಆವಿಷ್ಕಾರವೇನೋ ಅದ್ಭುತವೇ! ಆದರೆ, ಇದರಿಂದ ಏನು ಆಗಬಹುದು ಎಂದು ಜನರು ಹೆದರಿದ್ದರೋ ಆ ಸಮಸ್ಯೆ ಸ್ವತಃ ಇದಕ್ಕೆ ಮತ್ತು ಇದರ ಮಾಲೀಕರಿಗೇ ಎದುರಾಯಿತು! ಒಂದು ಕಾನೂನು ಸಮಸ್ಯೆಯಿಂದಾಗಿ ಇದರ ಹೆಸರು ಬದಲಾಯಿಸಬೇಕಾಗಿ ಬಂತು. 'ಕ್ಲಾಡ್‌ಬಾಟ್' ಎನ್ನುವ ಹೆಸರು 'ಆಂಥ್ರೋಪಿಕ್' ಕಂಪನಿಯ 'ಕ್ಲಾಡ್' (Claude) ಹೆಸರಿಗೆ ಹೋಲುತ್ತಿತ್ತು. ಹಾಗಾಗಿ, ಕ್ಲಾಡ್ ಕಂಪನಿ ಆಕ್ಷೇಪ ಎತ್ತಿತು. ಹೀಗಾಗಿ ಇದಕ್ಕೆ 'ಮೋಲ್ಟ್‌ಬಾಟ್' ಎಂದು ಮರುನಾಮಕರಣ ಮಾಡಲಾಯಿತು.

ಆದರೆ ಈ ಹೆಸರು ಬದಲಾಗುವ ಸಮಯದಲ್ಲಿ ಒಂದು ದೊಡ್ಡ ಅಪಾಯ ಮೈತಳೆಯಿತು. ಹಳೆಯ ಹೆಸರನ್ನು ಬಿಟ್ಟು ಹೊಸ ಹೆಸರಿಗೆ ಬದಲಾಗುವ ಆ ಕೆಲವು ಗಂಟೆಗಳಲ್ಲಿ, ಹ್ಯಾಕರ್‌ಗಳು 'ಕ್ಲಾಡ್‌ಬಾಟ್' ಹೆಸರಿನ ನಕಲಿ ವೆಬ್‌ಸೈಟ್‌ಗಳನ್ನು ಸೃಷ್ಟಿಸಿದರು. ಹೆಸರು ಬದಲಾದ ಮಾಹಿತಿ ತಿಳಿಯದ ಬಳಕೆದಾರರು ಈ ನಕಲಿ ಬಾಟ್ ಅನ್ನೇ ಡೌನ್‌ಲೋಡ್ ಮಾಡಿಕೊಂಡರು. ಇದು ಜನರ ಪಾಸ್‌ವರ್ಡ್ ಮತ್ತು ಬ್ಯಾಂಕ್ ವಿವರಗಳನ್ನು ಕದಿಯುವ 'ಡಿಜಿಟಲ್ ಕಳ್ಳ' ಆಗಿತ್ತು.

## ಇದು ನಮಗೆ ಏಕೆ ಮುಖ್ಯ?

ಮೋಲ್ಟ್‌ಬಾಟ್ ನಮ್ಮ ತಂತ್ರಜ್ಞಾನದ ಬಳಕೆಯನ್ನೇ ಬದಲಿಸಲಿದೆ. ಇದು ನಮ್ಮ ವಾಟ್ಸ್‌ಆ್ಯಪ್ ಅಥವಾ ಟೆಲಿಗ್ರಾಮ್ ಮೂಲಕವೂ ಕೆಲಸ ಮಾಡಬಲ್ಲದು. ನೀವು ಕಚೇರಿಯಲ್ಲಿದ್ದಾಗ ಮನೆಗೆ ಮೆಸೇಜ್ ಕಳುಹಿಸಿ, 'ಮೋಲ್ಟ್‌ಬಾಟ್, ನಾನು ಮನೆಯ ಓವನ್ ಆಫ್ ಮಾಡಿದ್ದೇನೆಯೇ ಎಂದು ನೋಡು', ಅಥವಾ 'ನನಗೆ ಬಂದಿರುವ ಉದ್ದದ ಇಮೇಲ್ ಸಾರಾಂಶ ಹೇಳು' ಎಂದು ಆದೇಶಿಸಬಹುದು.

ಆದರೆ ಈ 'ಮೋಲ್ಟ್‌ಬಾಟ್ ಸಮಸ್ಯೆ' ನಮಗೆ ಒಂದು ಪಾಠವನ್ನೂ ಕಲಿಸಿದೆ. 'ಅಧಿಕಾರದ ಜೊತೆಗೆ ಎಚ್ಚರಿಕೆಯೂ ಬೇಕು' ಎಂಬ ಪಾಠವನ್ನು ತನ್ನದೇ ಉದಾಹರಣೆಯ ಜೊತೆಗೆ ಕೊಟ್ಟಿದೆ. ನಿಮ್ಮ ಕಂಪ್ಯೂಟರ್‌ನ ಸಂಪೂರ್ಣ ನಿಯಂತ್ರಣವನ್ನು ಒಂದು ಎಐಗೆ ನೀಡುವಾಗ, ಅದು ಅಧಿಕೃತವಾದದ್ದೇ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯ.

## ಭವಿಷ್ಯ: 2026ರ ಹೊಸ ಯುಗ

ಇಂದು ಈ ಬಾಟ್‌ಗಳು ತಮ್ಮದೇ ಸಾಮಾಜಿಕ ಜಾಲತಾಣವನ್ನು ಹೊಂದಿವೆ. ಅಲ್ಲಿ ಒಂದು ಎಐ ಇನ್ನೊಂದು ಎಐ ಜೊತೆಗೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುತ್ತವೆ. ಇದು ವಿಜ್ಞಾನದ ಕಟ್ಟುಕತೆಯಂತೆ ಕಂಡರೂ, ಇಂದಿನ ವಾಸ್ತವ.

## ಮಾರುಕಟ್ಟೆಯ ಮೇಲೆ ಪ್ರಭಾವ

ಈ ಆವಿಷ್ಕಾರವು ಕೇವಲ ವ್ಯಕ್ತಿಗಳಿಗೆ ಮಾತ್ರವಲ್ಲದೆ, ಸಣ್ಣ ಉದ್ಯಮಗಳಿಗೂ ವರದಾನವಾಗಿದೆ. ಉದಾಹರಣೆಗೆ, ಒಬ್ಬ ಸಾಮಾನ್ಯ ವ್ಯಾಪಾರಿ ತನ್ನ ಅಕೌಂಟಿಂಗ್ ಕೆಲಸಗಳನ್ನು ಮಾಡಲು ಅಥವಾ ಕಂಪನಿಗಳು ತಮ್ಮ ಗ್ರಾಹಕರ ಆರ್ಡರ್ ಮತ್ತು ಇನ್ವೆಂಟರಿಯನ್ನು ನಿರ್ವಹಿಸಲು ಈ ಬಾಟ್ ಅನ್ನು ಬಳಸಬಹುದು. ಇದು ಮನುಷ್ಯರ ಕೆಲಸವನ್ನು ಕಿತ್ತುಕೊಳ್ಳುವ ಬದಲು, ಒಂದೇ ಕೆಲಸವನ್ನು ಮತ್ತೆ ಮಾಡುವಂಥ ಮತ್ತು ಬೇಸರದ ಕೆಲಸಗಳನ್ನು ತಾನು ಮಾಡಿ, ಹೊಸದಾಗಿ ಯೋಚನೆ ಮಾಡಲು ನಮಗೆ ಸಮಯ ನೀಡುತ್ತದೆ. 2026ರ ಕೊನೆಯ ಹೊತ್ತಿಗೆ, ಎಐ ಪ್ರಾಂಪ್ಟ್ ಎಂಜಿನಿಯರಿಂಗ್'ಗಿಂತಲೂ 'ಎಐ ಏಜೆಂಟ್ ಮ್ಯಾನೇಜ್‌ಮೆಂಟ್' ಕೌಶಲಕ್ಕೆ ಹೆಚ್ಚಿನ ಬೆಲೆ ಸಿಗುತ್ತಿದೆ. ಒಟ್ಟಿನಲ್ಲಿ, ಕೇವಲ ಮಾತನಾಡುವ ಎಐನ ಯುಗ ಮುಗಿದು, ಕೆಲಸ ಮಾಡುವ ಎಐ ಯುಗ ಆರಂಭವಾಗಿದೆ.

### ಮುನ್ನೆಚ್ಚರಿಕೆಗಳು

ಮೋಲ್ಟ್‌ಬಾಟ್ ಕೇವಲ ಸಾಫ್ಟ್‌ವೇರ್ ಅಲ್ಲ, ಇದು ನಿಮ್ಮ ಕಂಪ್ಯೂಟರ್‌ನ 'ಡಿಜಿಟಲ್ ಕೀಲಿ ಕೈ'. ಹ್ಯಾಕರ್‌ಗಳು ಹಳೆಯ ಹೆಸರನ್ನು ಬಳಸಿಕೊಂಡು ಮಾಡಿದ ದಾಳಿಯಿಂದ ಪಾರಾಗಲು ಈಗ 'ಸ್ಯಾಂಡ್‌ಬಾಕ್ಸಿಂಗ್' ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಎಂದರೆ, ಈ ಎಐ ಕೆಲಸ ಮಾಡುವಾಗ ನಿಮ್ಮ ಕಂಪ್ಯೂಟರ್‌ನ ವೈಯಕ್ತಿಕ ಫೈಲ್‌ಗಳಿಗೆ ನೇರ ಆಕ್ಸೆಸ್ ಸಿಗದಂತೆ ಒಂದು ಸುರಕ್ಷಿತ ವಲಯವನ್ನು ನಿರ್ಮಿಸಲಾಗುತ್ತದೆ. ಬಳಕೆದಾರರು ಯಾವುದೇ ಕಮಾಂಡ್ ನೀಡುವ ಮೊದಲು ಯೋಚನೆ ಮಾಡಿ ಅನುಮತಿಯನ್ನು ಕೊಡುವ ಮೋಡ್ ಆನ್ ಮಾಡಿಕೊಳ್ಳುವುದು ಉತ್ತಮ. ಇದರಿಂದ ಪ್ರತಿ ಬಾರಿ ಬಾಟ್ ಮೌಸ್ ಓಡಾಡುವಾಗಲೂ ನಿಮ್ಮ ಅನುಮತಿ ಕೇಳುತ್ತದೆ.





• ಶಶಿಕುಮಾರ್ ಎಲ್.

# ಡಿಎನ್‌ಎ ತಂತ್ರಜ್ಞಾನ ತನಿಖೆಗೆ ವರದಾನ

**ಕೆಲವು ತಿಂಗಳ** ಹಿಂದೆ ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ನಡೆದ ಬಸ್ ದುರಂತದಲ್ಲಿ 19 ಮಂದಿ ಅಸುನೀಗಿದ್ದರು. ಬೆಂಕಿಯ ಕೆನ್ನಾಲಿಗೆಗೆ ಸಿಕ್ಕಿ ಸುಟ್ಟು ಕರಕಲಾಗಿದ್ದ ಎಲ್ಲ ಮೃತದೇಹಗಳನ್ನು ಗುರುತಿಸಲು ಸಹಾಯಕವಾಗಿದ್ದು ಡಿಎನ್‌ಎ ಬೆರಳಚ್ಚು ತಂತ್ರಜ್ಞಾನ. ಹಾಗೆಯೇ ಅಹಮದಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನದ ಅಪಘಾತದಲ್ಲಿ ಸತ್ತ 260 ವ್ಯಕ್ತಿಗಳ ಗುರುತು ಪತ್ತೆ ಹಚ್ಚುವಲ್ಲಿಯೂ ನೆರವಾಗಿದ್ದು ಡಿಎನ್‌ಎ ಬೆರಳಚ್ಚು ಪರೀಕ್ಷೆ.

ಆಧುನಿಕ ವಿಧಿವಿಜ್ಞಾನದ ಪುರಾವೆಗಳ ಪ್ರಮುಖ ಸಾಧನ ಎಂದರೆ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನ ಬಳಕೆ.

'ಡಿಆಕ್ಸಿ-ರೈಬೋ ನ್ಯೂಕ್ಲಿಕ್ ಆ್ಯಸಿಡ್' ಎಂಬುದರ ಸಂಕ್ಷಿಪ್ತ ರೂಪವೇ ಡಿಎನ್‌ಎ. ವಂಶವಾಹಿಯ ಮುಖ್ಯ ಭಾಗವಾಗಿರುವ ಡಿಎನ್‌ಎಯು ಏಣಿಯ ರೂಪದಲ್ಲಿರುತ್ತದೆ; ಜೀವಕೋಶದ ಕೇಂದ್ರಭಾಗವಾದ ನ್ಯೂಕ್ಲಿಯಸ್‌ನ ವರ್ಣತಂತುಗಳಲ್ಲಿ ಇರುತ್ತದೆ. ವ್ಯಕ್ತಿ ಅಥವಾ ಜೀವಿಗಳ ವಂಶಾವಳಿಯ ಮಾಹಿತಿಗಳನ್ನು ಇದು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುತ್ತದೆ.

'ಡಿಎನ್‌ಎ ಬೆರಳಚ್ಚು' ಅಥವಾ 'ಡಿಎನ್‌ಎ ಫಿಂಗರ್ ಪ್ರಿಂಟಿಂಗ್' ಎಂಬುದು ವ್ಯಕ್ತಿಯ ಡಿಎನ್‌ಎಯ ವಿಶಿಷ್ಟ ಮಾದರಿಯನ್ನು ಗುರುತಿಸುವ ತಂತ್ರಜ್ಞಾನ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಡಿಎನ್‌ಎ ಭಾಗಗಳನ್ನು ವಿಶ್ಲೇಷಿಸುತ್ತದೆ. ಪ್ರತಿಯೊಬ್ಬರ ಡಿಎನ್‌ಎ ಒಳಗೆ ಜೀನ್‌ಗಳ ನಡುವೆ ಪುನರಾವರ್ತಿತ ಸರಣಿಗಳು ಇರುತ್ತವೆ. ಇದನ್ನು 'ತಾಂಡೆಂ ಪುನರಾವರ್ತನೆಗಳು' (Tandem repeats) ಎನ್ನುತ್ತಾರೆ. ಈ ಪುನರಾವರ್ತನೆಯ ಅನುಕ್ರಮವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಡಿಎನ್‌ಎ ಬೆರಳಚ್ಚು ತಂತ್ರಜ್ಞಾನವನ್ನು ಬಳಸಿಕೊಂಡು ಪ್ರತಿ ವ್ಯಕ್ತಿಗೆ ಸಂಬಂಧಿಸಿದ ಒಂದು ಅನನ್ಯ ಪುನರಾವರ್ತನೆಯ ಮಾದರಿಯನ್ನು ನಾವು ಕಂಡುಕೊಳ್ಳಬಹುದು. ಇದು ರಕ್ತಸಂಬಂಧಿಕರ ನಡುವಿನ ಡಿಎನ್‌ಎ ಅನುಕ್ರಮಗಳ ಜೊತೆ ಹೆಚ್ಚಿನ ಪ್ರಮಾಣದಲ್ಲಿ ಹೋಲುತ್ತವೆ. ಈ ಪರೀಕ್ಷೆ ಹಲವಾರು ಪ್ರಕರಣಗಳಲ್ಲಿ ವ್ಯಕ್ತಿಯ ಗುರುತನ್ನು ಖಚಿತಪಡಿಸಲು ಮತ್ತು ರಕ್ತಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

## ಅವಶ್ಯಕ ಮಾದರಿಗಳು

ಡಿಎನ್‌ಎ ಬೆರಳಚ್ಚು ವಿಧಾನದಲ್ಲಿ ಅಪರಾಧ ನಡೆದ ಸ್ಥಳದಲ್ಲಿ ದೊರಕುವ ಸಾಕ್ಷ್ಯಾಧಾರ ಮತ್ತು ಮಾದರಿಗಳಾದ ರಕ್ತ, ಕೂದಲು, ಬೆವರಿನ ಜೀವಕೋಶಗಳು, ಚರ್ಮ, ಮಾಂಸ, ಜೊಲ್ಲು, ಮೂತ್ರ, ವೀರ್ಯಾಣು, ಮೂಳೆ ಇತ್ಯಾದಿಗಳ ಡಿಎನ್‌ಎ ಮಾದರಿಯನ್ನು ವಿಶ್ಲೇಷಿಸಿ, ಅವುಗಳನ್ನು ಆಪಾದಿತರ ಡಿಎನ್‌ಎಯೊಂದಿಗೆ ಹೋಲಿಕೆ ಮಾಡುವ ಮೂಲಕ ನಿಜವಾದ ಅಪರಾಧಿಗಳನ್ನು ಬಹಳ ಸುಲಭವಾಗಿ ಹಾಗೂ ಶೀಘ್ರವಾಗಿ ಪತ್ತೆ ಹಚ್ಚಬಹುದಾಗಿದೆ.

## ಯಾವ ಯಾವ ಪ್ರಕರಣಗಳಲ್ಲಿ

ವ್ಯಕ್ತಿಯ ಗುರುತನ್ನು ಪತ್ತೆಹಚ್ಚಲು ಡಿಎನ್‌ಎ ಬೆರಳಚ್ಚು ಪರೀಕ್ಷೆಯು ಸಹಾಯ ಮಾಡುವುದಲ್ಲದೆ, ಆಸ್ಪತ್ರೆಯಲ್ಲಿ ಮಕ್ಕಳನ್ನು ಬದಲಾಯಿಸಿರುವುದನ್ನು ಕಂಡುಹಿಡಿಯಲು, ಪಿತೃತ್ವ/ಮಾತೃತ್ವ ಪರೀಕ್ಷೆಗೆ ಕೂಡ ಈ ವಿಧಾನವನ್ನು ಬಳಸಲಾಗುತ್ತದೆ. ಅತ್ಯಾಚಾರ, ಅಪಹರಣ, ಕೊಲೆ, ದರೋಡೆ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂತಹ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯಲು, ಸುಟ್ಟ ಅಥವಾ ಅರೆಬೆಂದ ಮನುಷ್ಯನ ಗುರುತಿಸುವಿಕೆ ಕಾರ್ಯದಲ್ಲಿ, ಪ್ರವಾಹ, ಭೂಕಂಪದಂತ ಪ್ರಕೃತಿ ವಿಕೋಪಗಳು ಘಟಿಸಿದ ಸಂದರ್ಭದಲ್ಲಿ, ಇಷ್ಟೇ ಅಲ್ಲದೆ, ವಾಹನ ಅಪಘಾತ, ರೈಲು ದುರಂತ, ಕಟ್ಟಡ ಕುಸಿತ ಮತ್ತು ಭಾರಿ ಅಗ್ನಿ ಅವಘಡದ ಸಂದರ್ಭದಲ್ಲಿ ಮಡಿದವರ ಶೀಘ್ರ ಗುರುತಿನ ಪತ್ತೆಗೆ ಈ ತಂತ್ರಜ್ಞಾನವು ಅತ್ಯಾವಶ್ಯಕವಾಗಿದೆ. ಪ್ರಾಣಿಗಳ ಬೇಟೆ ಮತ್ತು ಕಳ್ಳ ಸಾಗಣೆಯನ್ನು ಪತ್ತೆ ಹಚ್ಚುವ ಕಾರ್ಯದಲ್ಲೂ ನೊಂದ ಅಥವಾ ಸತ್ತ ಪ್ರಾಣಿಯ ಗುರುತನ್ನು ಹಿಡಿಯಲು ಈ ಪರೀಕ್ಷಾ ವಿಧಾನದಿಂದ ಸಾಧ್ಯವಾಗುತ್ತದೆ.

### ಬಗೆಹರಿಸಿದ ಪ್ರಮುಖ ಪ್ರಕರಣಗಳು

ಜ್ಞಾನಭಾರತಿ ಸಾಮೂಹಿಕ ಅತ್ಯಾಚಾರ ಪ್ರಕರಣ, ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ, ಮೈಸೂರಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಸೇರಿದಂತೆ ಹಲವು ಅತಿ ಸೂಕ್ಷ್ಮ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯುವಲ್ಲಿ ಡಿಎನ್‌ಎ ಬೆರಳಚ್ಚು ಪರೀಕ್ಷೆಯು ಪೊಲೀಸ್ ಮತ್ತು ನ್ಯಾಯಾಂಗ ಇಲಾಖೆಗಳಿಗೆ ಸಹಾಯ ಮಾಡಿದೆ. ರಾಜೀವ್ ಗಾಂಧಿ ಕೊಲೆ ಪ್ರಕರಣ, ಮಧುಮಿತ ಮತ್ತು ಬೀನ್ ಪ್ರಕರಣಗಳಲ್ಲೂ ಈ ತಂತ್ರಜ್ಞಾನದಿಂದಲೇ ಅಪರಾಧಿಗಳನ್ನು ಪತ್ತೆಹಚ್ಚಲಾಗಿದೆ.

## ವಿಧಾನ

ಡಿಎನ್‌ಎ ಬೆರಳಚ್ಚು ವಿಧಾನದಲ್ಲಿ ವ್ಯಕ್ತಿಯ ರಕ್ತ, ಕೂದಲು, ಲಾಲರಸ, ಮಾಂಸ ಹಾಗೂ ಮೂಳೆಗಳ ಮಾದರಿಗಳನ್ನು ಮೊದಲು ಸಂಗ್ರಹಿಸಲಾಗುತ್ತದೆ. ನಂತರ ಈ ಮಾದರಿಗಳಿಂದ 'ಡಿಎನ್‌ಎ'ಯನ್ನು ಹೊರತೆಗೆಯಲಾಗುತ್ತದೆ. ಹೀಗೆ ಹೊರ ತೆಗೆದ ಡಿಎನ್‌ಎಯನ್ನು ನಿರ್ದಿಷ್ಟ ಕಿಣ್ವಗಳನ್ನು ಬಳಸಿ ಸಣ್ಣ ತುಣುಕುಗಳಾಗಿ ವಿಭಜಿಸಲಾಗುತ್ತದೆ. ಈ ತುಣುಕುಗಳನ್ನು 'ಜೆಲ್ ಎಲೆಕ್ಟ್ರೋಫೋರೋಸಿಸ್' ಎಂಬ ತಂತ್ರವನ್ನು ಬಳಸಿ ಗಾತ್ರದ ಆಧಾರದ ಮೇಲೆ ಪ್ರತ್ಯೇಕಿಸಲಾಗುತ್ತದೆ. ಪ್ರತ್ಯೇಕಗೊಂಡ ಡಿಎನ್‌ಎ ತುಣುಕುಗಳನ್ನು 'ಪಾಲಿಮರೇಸ್ ಚೈನ್ ರಿಯಾಕ್ಷನ್' (ಪಿಸಿಆರ್) ತಂತ್ರಜ್ಞಾನವನ್ನು ಬಳಸಿ ವರ್ಧಿಸಲಾಗುತ್ತದೆ. ಇದರಿಂದಾಗಿ ಹೆಚ್ಚು ಡಿಎನ್‌ಎ ಸಿಗುತ್ತದೆ. ಮಾದರಿಗಳನ್ನು ಎಕ್ಸರೇ ಫಿಲಂ ಅಥವಾ ಇತರ ವಿಧಾನಗಳನ್ನು ಬಳಸಿ ದೃಶ್ಯೀಕರಿಸಲಾಗುತ್ತದೆ. ಈ ಮೂಲಕ ಡಿಎನ್‌ಎಯ ವಿಶಿಷ್ಟ ಮಾದರಿಯನ್ನು ಪಡೆಯಲಾಗುತ್ತದೆ. ಪಡೆದ ಮಾದರಿಯನ್ನು ರಕ್ತಸಂಬಂಧಿಕರ ಡಿಎನ್‌ಎ ಮಾದರಿಗಳ ಜೊತೆ ಹೋಲಿಸಿ ನೋಡಿ ವ್ಯಕ್ತಿಯ ಗುರುತನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಇಡೀ ಪ್ರಕ್ರಿಯೆಗೆ ಕೇವಲ ಕೆಲವೇ ದಿನಗಳು ಸಾಕಾಗುತ್ತವೆ.

ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಸಹ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನವನ್ನು ಪ್ರವೇಶಿಸಿ ಅಪರಾಧ ತನಿಖೆ ನಡೆಸುವಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಇದು ಕ್ಲಿಷ್ಟಕರ ಪ್ರಕರಣಗಳನ್ನು ಭೇದಿಸಲು ತನಿಖಾಧಿಕಾರಿಗಳಿಗೆ ಸಾಕಷ್ಟು ನೆರವಾಗುತ್ತಿದೆ. ವಿಧಿವಿಜ್ಞಾನ ತಳಿಶಾಸ್ತ್ರದ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆಯು ಜೀನ್‌ಗಳ ನಡುವಿನ ತಾಂಡಂ ಪುನರಾವರ್ತನೆಗಳನ್ನು ಅತ್ಯಂತ ನಿಖರವಾಗಿ, ವೇಗವಾಗಿ ಹಾಗೂ ಸಂಕ್ಷಿಪ್ತವಾಗಿ ವಿಶ್ಲೇಷಿಸಿ ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಸಲು ಸಹಾಯ ಮಾಡುತ್ತಿದೆ ಎಂಬುದು ಗಮನಾರ್ಹ ಅಂಶ.

## ❖ ಆಗುಂಬೆ ಘಾಟಿ: ಸುರಂಗ ಮಾರ್ಗ

- ಆಗುಂಬೆ ಘಾಟ್ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ-169ಎ ರಸ್ತೆಯನ್ನು ಎರಡು ಲೇನ್ ರಸ್ತೆ, ಎರಡೂ ಬದಿ ಪಾದಚಾರಿ ಮಾರ್ಗ ಸಹಿತ ವಿಸ್ತರಿಸುವ ಉದ್ದೇಶದಿಂದ ಕಾರ್ಯ ಸಾಧ್ಯತಾ ಅಧ್ಯಯನ ಹಾಗೂ ವಿವರವಾದ ಯೋಜನಾ ವರದಿ ತಯಾರಿಸಲು ಕೇಂದ್ರ ಭೂಸಾರಿಗೆ ಇಲಾಖೆ ಟೆಂಡರ್ ಅಹ್ವಾನಿಸಿದೆ.

# ಮಣಿಪುರ: ಮತ್ತೆ ಭುಗಿಲೆದ್ದ ಹಿಂಸಾಚಾರ

ಇಂಫಾಲ (ಪಿಟಿಐ): ಮಣಿಪುರದ ಉಖರುಲ್ ಜಿಲ್ಲೆಯಲ್ಲಿ ತಾಂಗಖುಲ್ ನಾಗಾ ಸಮುದಾಯದ ಸದಸ್ಯರೊಬ್ಬರ ಮೇಲೆ ನಡೆದ ಹಲ್ಲೆ ಸಂಬಂಧ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಮಂಗಳವಾರ ಬೆಳಿಗ್ಗೆ ಶಸ್ತ್ರಸಜ್ಜಿತ ಬಂಡುಕೋರರು ಪಾಳುಬಿದ್ದ ಹಲವು ಮನೆಗಳಿಗೆ ಬೆಂಕಿ ಹಚ್ಚಿ, ಗುಂಡು ಹಾರಿಸಿದ್ದಾರೆ.

ರಾಜ್ಯ ಸರ್ಕಾರವು ಮುನ್ನೆಚ್ಚರಿಕೆ ಕ್ರಮವಾಗಿ ಉಖರುಲ್ ಜಿಲ್ಲೆಯಲ್ಲಿ ಇಂಟರ್ನೆಟ್ ಸೇವೆಗಳನ್ನು ಐದು ದಿನಗಳವರೆಗೆ ಸ್ಥಗಿತಗೊಳಿಸಿದೆ. .

**ಘಟನೆಯಲ್ಲಿ 21 ಮನೆಗಳು ಸುಟ್ಟುಹೋಗಿವೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ**

**ಗೋವಿಂದಾಸ್ ಕೋಂಥೌಜಾಮ್, ಮಣಿಪುರದ** ಗೃಹ ಸಚಿವ

'ಈ ಪ್ರದೇಶದಲ್ಲಿ ನಡೆದ ಗುಂಡಿನ ದಾಳಿಯನ್ನು ತಡೆಯುವಲ್ಲಿ ಭದ್ರತಾ ಪಡೆಗಳು ವಿಫಲವಾಗಿವೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗುಡ್ಡಗಾಡು ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

'ಕುಕಿ ಮತ್ತು ತಾಂಗಖುಲ್ ನಾಗಾ ಸಮುದಾಯದ ನೂರಾರು ಮಂದಿ ಕಳೆದ ಎರಡು ದಿನಗಳಿಂದ ಲಿಟನ್ ಸಾರೈಖೋಂಗ್ ಹಾಗೂ ನೆರೆಯ ಕುಕಿ ಗ್ರಾಮಗಳನ್ನು ತೊರೆದು ಕಾಂಗ್‌ಪೋಕ್ಪಿ ಮತ್ತು ಉಖರುಲ್ ಜಿಲ್ಲೆಗಳ ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿದ್ದಾರೆ.

ಪ್ರಜಾವಾಣಿ | ಆಳ–ಅಗಲ



ಎಐ ಚಿತ್ರ: ಹಳೇಮನಿ

ಜಾಗತಿಕವಾಗಿ ಇನ್ನೂ ತಯಾರಾಗಿಲ್ಲ ಪರಿಣಾಮಕಾರಿ ಔಷಧ, ಭಾರತದಲ್ಲಿ ಲಸಿಕೆ ಅಭಿವೃದ್ಧಿಗೆ ಆಮೆ ವೇಗ

# ಲಸಿಕೆಯ ಅಂಕೆಗೆ ಸಿಗದ ಹಕ್ಕಿಜ್ವರ

• ಅಮೃತ್ ಕಿರಣ ಬಿ.ಎಂ

ಅಮೆರಿಕ, ಯುರೋಪ್‌ನ ವಿವಿಧ ದೇಶಗಳಲ್ಲಿ ಕಳೆದ ವರ್ಷ ಸಾಕಷ್ಟು ಅವಾಂತರ ಸೃಷ್ಟಿಸಿದ್ದ ಹಕ್ಕಿಜ್ವರದ (ಏವಿಯನ್ ಇನ್‌ಫ್ಲುಯೆನ್ಜಾ) ಪ್ರಭಾವ ಇನ್ನೇನು ಕಡಿಮೆಯಾಯಿತು ಎನ್ನುತ್ತಿರುವಾಗಲೇ ಅದು ಮಗ್ಗಲು ಬದಲಿಸಿದೆ. ಈ ಬಾರಿ ಏಷ್ಯಾದಲ್ಲೂ ತನ್ನ ಜಾಡು ವಿಸ್ತರಿಸಿಕೊಂಡಿದೆ. ನಮ್ಮ ದೇಶದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ವ್ಯಾಪಕವಾಗುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ.

ತಮಿಳುನಾಡಿನ ಚೆನ್ನೈ ನಗರ ಸೇರಿದಂತೆ ಅಡ್ಯಾರ್, ವೆಲಚೇರಿ, ತಿರುವಣ್ಣಿಯೂರ್ ಜಿಲ್ಲೆಗಳಲ್ಲಿ ಕೆಲವು ದಿನಗಳ ಹಿಂದೆ ಬೃಹತ್ ಸಂಖ್ಯೆಯ ಕಾಗೆಗಳು ಹಕ್ಕಿಜ್ವರ ಸೋಂಕಿನಿಂದ ಮೃತಪಟ್ಟವು. ಮೃತಪಟ್ಟ ಕಾಗೆಯಲ್ಲಿ ಎಚ್5ಎನ್1 ಸೋಂಕಿನ ಇರುವಿಕೆಯನ್ನು ಭೋಪಾಲ್‌ನ ಐಸಿಎಆರ್ ಪ್ರಯೋಗಾಲಯ ಖಚಿತಪಡಿಸಿತು. ಆಂಧ್ರಪ್ರದೇಶದ ಅನ್ನಮಯ್ಯ ಮತ್ತು ಚಿತ್ತೂರು ಜಿಲ್ಲೆಗಳಲ್ಲೂ ಸೋಂಕು ದೃಢಪಟ್ಟಿದ್ದು, ಸರ್ಕಾರ ಹೈ ಅಲರ್ಟ್ ಘೋಷಿಸಿದೆ.

ಕೇರಳದಲ್ಲೂ ಕಳೆದ ವರ್ಷಾಂತ್ಯದಲ್ಲೇ ಇದರ ಹಾವಳಿ ಶುರುವಾಗಿತ್ತು. ಕೊಟ್ಟಾಯಂ, ಕೊಲ್ಲಂ ಜಿಲ್ಲೆಗಳಲ್ಲಿ ಕೋಳಿಗಳಲ್ಲಿ ಸೋಂಕು ಖಚಿತಪಡುತ್ತಿದ್ದಂತೆಯೇ ಅವುಗಳ ಸಾಗಾಟವನ್ನು ನಿರ್ಬಂಧಿಸಲಾಯಿತು. ಸೋಂಕುಪೀಡಿತ ಹಕ್ಕಿಗಳನ್ನು ಕೊಲ್ಲಲಾಯಿತು. ವಲಸೆ ಹಕ್ಕಿಗಳ ಮೇಲೆ ನಿಗಾ ಇಡುವಂತೆ ಪುದುಚೇರಿ ಸರ್ಕಾರ ಆದೇಶ ಹೊರಡಿಸಿದೆ. ಬಿಹಾರದ ದರ್ಬಾಂಗ್ ಜಿಲ್ಲೆಯಲ್ಲಿ ವೈರಸ್ ಕಂಡುಬಂದಿದ್ದು, ತೀವ್ರ ನಿಗಾಕ್ಕೆ ಸೂಚಿಸಲಾಗಿದೆ. ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ರಾಷ್ಟ್ರೀಯ ಕ್ರಿಯಾ ಯೋಜನೆ ನಿಯಮಗಳನ್ನು ಜಾರಿಗೆ ತರುವಂತೆ ಸೋಂಕು ಬಾಧಿತ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

**485 ಪ್ರಭೇದದ ಹಕ್ಕಿಗಳಲ್ಲಿ ಸೋಂಕು:** ಹಕ್ಕಿಜ್ವರದ ವ್ಯಾಪ್ತಿ ಅಂದುಕೊಂಡಿದ್ದಕ್ಕಿಂತ ತುಸು ಹೆಚ್ಚೇ ಇದೆ. ಕೋಳಿಗಳನ್ನೂ ಒಳಗೊಂಡಂತೆ ಅಂದಾಜು 485 ಪ್ರಭೇದದ ಹಕ್ಕಿಗಳಲ್ಲಿ ಎಚ್5ಎನ್1 ವೈರಾಣುವಿನ ಇರುವಿಕೆಯನ್ನು ಗುರುತಿಸಲಾಗಿದೆ. ಹಕ್ಕಿಗಳಷ್ಟೇ ಅಲ್ಲದೇ, ಸಸ್ತನಿಗಳನ್ನೂ ಇದು ಬಿಟ್ಟಿಲ್ಲ. ಸೀಲ್, ಸಮುದ್ರದ ನೀರುನಾಯಿ, ಡಾಲ್ಫಿನ್, ನರಿ, ಹಸು, ಕುರಿಗಳಲ್ಲೂ ಕಾಣಿಸಿಕೊಂಡಿದ್ದು, ಸರ್ವವ್ಯಾಪಿ ಎನಿಸಿದೆ. ಇಲ್ಲಿಯವರೆಗೆ 15 ಕೋಟಿ ಹಕ್ಕಿಗಳ ದೇಹವನ್ನು ವೈರಾಣು ಹೊಕ್ಕಿದೆ ಎಂದು ಅಂದಾಜಿಸಲಾಗಿದೆ. ಜಾನುವಾರುಗಳ ಜತೆ ನಿಕಟ ಸಂಪರ್ಕದಲ್ಲಿ ಇರುವ ವ್ಯಕ್ತಿಗಳಿಗೂ ಈ ಸೋಂಕು ಹರಡಬಹುದು ಎಂಬುದು ತಜ್ಞರ ಅಂದಾಜು.

ವೈರಾಣು ಪ್ರಾಣಿ–ಪಕ್ಷಿಗಳಿಂದ ಮನುಷ್ಯರಿಗೆ ಹರಡುವ ಸಾಧ್ಯತೆ ಇದೆ. ಆದರೆ ಅದು ಅಪಾಯದ ಮಟ್ಟದಲ್ಲಿ ಇಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ ) ಸ್ಪಷ್ಟಪಡಿಸಿದೆ. ಒಂದು ವೇಳೆ ವೈರಾಣು ರೂಪಾಂತರ ಹೊಂದಿ, ಮನುಷ್ಯನಿಂದ–ಮನುಷ್ಯನಿಗೆ ಹರಡಲು ಶುರುವಾದರೆ, ಕೋವಿಡ್ ರೀತಿಯ ಮತ್ತೊಂದು ಸಾಂಕ್ರಾಮಿಕ ಎದುರಿಸಲು ಜಗತ್ತು ಸಿದ್ಧವಾಗಬೇಕಿದೆ.



ಪ್ರಬಲ ಲಸಿಕೆಗಳ ಸಂಶೋಧನೆ ಪ್ರಕ್ರಿಯೆ ತುಂಬಾ ನಿಧಾನಗತಿಯಲ್ಲಿರುವ ಕಾರಣ, ವೈರಸ್ ಹರಡುವಿಕೆ ತಡೆಯಲು, ಸೋಂಕಿತ ಹಕ್ಕಿಗಳನ್ನು ಕೊಲ್ಲುವುದೊಂದೇ ಸದ್ಯಕ್ಕಿರುವ ಮಾರ್ಗ. ಈಗಾಗಲೇ ಅಭಿವೃದ್ಧಿಪಡಿಸಿರುವ ಕೆಲ ಲಸಿಕೆಗಳು ಅಷ್ಟು ಪರಿಣಾಮಕಾರಿ ಆಗಿಲ್ಲ. ಇದು 'ಸೀಸನಲ್ ಫ್ಲೂ' ರೀತಿ ಆಗಾಗ್ಗೆ ಕಾಣಿಸಿಕೊಂಡು ಮಾಯವಾಗುವ ಕಾರಣ, ದೀರ್ಘಕಾಲ ಬಾಧಿಸದು ಎಂಬ ಕಾರಣಕ್ಕೆ ಲಸಿಕೆ ತಯಾರಿಕೆಯ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ ಎಂಬ ಅಭಿಪ್ರಾಯ ಇದೆ.

ವೈರಸ್‌ಗಳಲ್ಲಿ 'ರೂಪಾಂತರ' (ಮ್ಯುಟೇಷನ್) ಎಂಬುದು ಸಹಜ ಪ್ರಕ್ರಿಯೆ ಆಗಿದ್ದರೂ, ಹಕ್ಕಿಜ್ವರಕ್ಕೆ ಕಾರಣವಾಗಿರುವ ಎಚ್5ಎನ್1 ವೈರಾಣು ಪ್ರತಿ ಬಾರಿಯೂ ಹೊಸ ಅತಿಥೇಯ ಜೀವಿಯ (ಹೋಸ್ಟ್) ದೇಹವನ್ನು ಹೊಕ್ಕು ದಿಗಿಲು ಮೂಡಿಸುತ್ತಿದೆ. ಈಗ ಹೆಚ್ಚು ಬಾಧಿಸುತ್ತಿರುವ ಎಚ್5ಎನ್1 ವೈರಾಣು, ಈಗಾಗಲೇ ಅಭಿವೃದ್ಧಿಪಡಿಸಿರುವ ಲಸಿಕೆಯ ಎಚ್‌ಎನ್ ವೈರಾಣು ತಳಿಗಳಿಗಿಂತ ಭಿನ್ನವಾಗಿದ್ದು, ಲಸಿಕೆಯ ಲಗಾಮಿಗೆ ಸಿಗುತ್ತಿಲ್ಲ.

**ವೈರಾಣು ಸಂರಚನೆ:** ಸಾಮಾನ್ಯ ಜ್ವರ, ನೆಗಡಿಗೆ (ಫ್ಲೂ) ಇನ್‌ಫ್ಲುಯೆನ್ಜಾ 'ಎ' ವೈರಸ್ ಕಾರಣ. ಈ ವೈರಸ್‌ನ ಮೇಲ್ಭಾಗದಲ್ಲಿ ಎರಡು ರೀತಿಯ ಪ್ರೊಟೀನ್‌ಗಳು (ಹೆಮಗ್ಲುಟೆನಿನ್–H ಮತ್ತು ನ್ಯೂರಾಮಿನಿಡೇಸ್ –N) ಅಂಟಿಕೊಂಡಿವೆ. 18 ರೀತಿಯ ಹೆಮಗ್ಲುಟೆನಿನ್ (ಎಚ್1ನಿಂದ ಎಚ್18ವರೆಗೆ) ಹಾಗೂ 11 ವಿಧದ ನ್ಯೂರಾಮಿನಿಡೇಸ್‌ನ (ಎನ್1ನಿಂದ ಎನ್11ವರೆಗೆ) ಉಪತಳಿಗಳನ್ನು ಗುರುತಿಸಲಾಗಿದೆ. ಈ ಪ್ರೊಟೀನ್‌ಗಳ ಸಂರಚನೆಯ ಪೈಕಿ, ಎಚ್3ಎನ್1 ಹಾಗೂ ಎಚ್5ಎನ್1 ಹೆಚ್ಚು ಅಪಾಯಕಾರಿ ಎನಿಸಿವೆ.

**ಎಂಆರ್‌ಎನ್‌ಎ ಲಸಿಕೆಗಳಿಗೆ ಬೇಡಿಕೆ:** ಕೋವಿಡ್ ಅವಧಿಯಲ್ಲಿ ಸಾಕಷ್ಟು ಪ್ರಚಲಿತಕ್ಕೆ ಬಂದು, ಅಪಾರ ವಿಶ್ವಾಸಾರ್ಹತೆ ಗಳಿಸಿರುವ 'ಎಂಆರ್‌ಎನ್‌ಎ' (mRNA) ಕಾರ್ಯ ವಿಧಾನದ ಲಸಿಕೆಗಳಿಗೆ ಈಗ ಹೆಚ್ಚು ಒತ್ತು ನೀಡಲಾಗುತ್ತಿದೆ. ಇವುಗಳನ್ನು ಕಡಿಮೆ ಅವಧಿಯಲ್ಲಿ ಅಭಿವೃದ್ಧಿಪಡಿಸಬಹುದು ಹಾಗೂ ವೈರಾಣು ಮತ್ತೆ ರೂಪಾಂತರಕ್ಕೆ ಒಳಗಾದಲ್ಲಿ, ಹೊಸ ಉಪತಳಿಗಳನ್ನೂ ಅದು ನಿಗ್ರಹಿಸಬಲ್ಲದು ಎಂಬುದು ಅದರ ಜನಪ್ರಿಯತೆಗೆ ಕಾರಣ.

ಎಂಆರ್‌ಎನ್‌ಎ ಕಾರ್ಯವಿಧಾನದ ಲಸಿಕೆಗಳ ಕ್ಲಿನಿಕಲ್ ಹಂತದ ಪ್ರಯೋಗಗಳು ಈಗಾಗಲೇ ಚಾಲ್ತಿಯಲ್ಲಿವೆ. 'ಅಕ್ರ್ಯುರಸ್ ಥೆರಪ್ಯೂಟಿಕ್ಸ್' ಸಂಸ್ಥೆಯು 2024ರ ಡಿಸೆಂಬರ್‌ನಲ್ಲಿ ಎಂಆರ್‌ಎನ್‌ಎ ಲಸಿಕೆಯ ಮೊದಲ ಕ್ಲಿನಿಕಲ್ ಪ್ರಯೋಗವನ್ನು ಕೈಗೊಂಡಿದ್ದು, ಲಸಿಕೆಯ ಸುರಕ್ಷತೆ ಮತ್ತು ರೋಗನಿರೋಧಕ ಶಕ್ತಿಯ ಪ್ರತಿಕ್ರಿಯೆಯನ್ನು ವಿಶ್ಲೇಷಣೆ ಮಾಡುತ್ತಿದೆ. ಮೊಡೆರ್ನಾ ಸಂಸ್ಥೆಯೂ ಎಂಆರ್‌ಎನ್‌ಎ ಮಾದರಿಯ ಲಸಿಕೆ ಅಭಿವೃದ್ಧಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿವೆ.

ಆಧಾರ: ಅಮೆರಿಕದ ರೋಗ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕೇಂದ್ರ (ಸಿಡಿಸಿ), ಡಬ್ಲ್ಯುಎಚ್‌ಒ, ಸೈನ್ಸ್ ಡೈರೆಕ್ಟ್, ಅಮೆರಿಕನ್ ಸೊಸೈಟಿ ಫಾರ್ ಮೈಕ್ರೊಬಯಾಲಜಿ ವೆಬ್‌ಸೈಟ್, ಐಸಿಎಂಆರ್ ಸುತ್ತೋಲೆಗಳು

## ಹೇಗೆ ನಡೆಯುತ್ತಿದೆ ಲಸಿಕೆ ಅಭಿವೃದ್ಧಿ?

ಇದೇ ಜನವರಿಯಲ್ಲಿ ರಷ್ಯಾ ಸೇಂಟ್ ಪೀಟರ್‌ಬರ್ಗ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 'ರಿವರ್ಸ್ ಜನೆಟಿಕ್ಸ್' ತತ್ವದ ಆಧಾರದ ಲಸಿಕೆಯು ಈಗಿನ ರೂಪಾಂತರಿ ವಿರುದ್ಧ ಹೋರಾಡಲು ಸಮರ್ಥವಾಗಿದೆ ಎನ್ನಲಾಗಿದೆ. ಅರ್ಜೆಂಟೀನಾದ ಸಂಗೇರಿಯಂ ಬಯೋಟೆಕ್, ಎಂಆರ್‌ಎನ್‌ಎ ಸ್ವರೂಪದ ಲಸಿಕೆ ಅಭಿವೃದ್ಧಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದೆ. ಈ ತಂತ್ರಜ್ಞಾನವನ್ನು ಬಡ–ಮಧ್ಯಮ ಆದಾಯದ ದೇಶಗಳೊಂದಿಗೆ ಹಂಚಿಕೊಳ್ಳಲು ಸಿದ್ಧವಾಗಿದೆ.

ಅಮೆರಿಕದಲ್ಲಿ ಸಾರ್ವಜನಿಕರಿಗೆ ಯಾವುದೇ ಎಚ್5ಎನ್1 ಲಸಿಕೆ ಲಭ್ಯವಿಲ್ಲ. ಹಳೆಯ ರೂಪಾಂತರಿ ವಿರುದ್ಧ ಹೋರಾಡಬಲ್ಲ ಸಾಮರ್ಥ್ಯದ ಲಸಿಕೆಗಳನ್ನು ಶೇಖರಿಸಿ ಇಟ್ಟುಕೊಂಡಿದ್ದು, ತುರ್ತು ಸಂದರ್ಭದಲ್ಲಿ ಬಳಸಲು ನಿರ್ಧರಿಸಿದೆ. ಸನೋಫಿ ಪಾಶ್ಚರ್ ಮತ್ತು ಜಿಎಸ್‌ಕೆ ಕಂಪನಿಗಳಿಗೆ ಲಸಿಕೆ ಉತ್ಪಾದಿಸಲು ಪರವಾನಗಿ ನೀಡಿದೆ.

ಮೊಡರ್ನಾ ಮತ್ತು ಅಕ್ರ್ಯುರಸ್ ಥೆರಪ್ಯೂಟಿಕ್ಸ್ ಸಂಸ್ಥೆಗಳು ಹೊಸ ತಲೆಮಾರಿನ ಎಂಆರ್‌ಎನ್‌ಎ ಲಸಿಕೆ ಕ್ಯಾಂಡಿಟೇಟ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಪರವಾನಗಿ ಪಡೆದಿವೆ. ವಾಷಿಂಗ್ಟನ್ ವಿಶ್ವವಿದ್ಯಾಲಯವು ಮೂಗಿನ ಮೂಲಕ ಹಾಕುವ ಲಸಿಕೆ ಅಭಿವೃದ್ಧಿಪಡಿಸಿದ್ದು, ಪರಿಣಾಮಕಾರಿಯಾಗಿದೆ ಎಂದು ಹೇಳಿಕೊಂಡಿದೆ.

2025ರಲ್ಲಿ ಜಾನುವಾರು ಸೋಂಕು ತಡೆಯಬಲ್ಲ ಏಳು ಲಸಿಕೆ ಕ್ಯಾಂಡಿಡೇಟ್‌ಗಳ ಪ್ರಾಯೋಗಿಕ ಪರೀಕ್ಷೆಗೆ ಅಮೆರಿಕ ಅನುಮತಿ ನೀಡಿತು. ಈ ಪೈಕಿ ಮೆಡ್ಜೀನ್‌ನ ಎಚ್5ಎನ್1 ಲಸಿಕೆಯು ಅಂತಿಮ ಹಂತ ಪ್ರವೇಶಿಸಿತು. ಈ ನಿಟ್ಟಿನಲ್ಲಿ ಉಳಿದ ಕಡೆಗಳಲ್ಲಿ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ.

## ಭಾರತದಲ್ಲಿ ನಿಧಾನ

ಭಾರತದಲ್ಲಿ ಏವಿಯನ್ ಇನ್‌ಫ್ಲುಯೆನ್ಜಾ ವಿರುದ್ಧ ಹೋರಾಡಬಲ್ಲ ಲಸಿಕೆಯ ಅಭಿವೃದ್ಧಿಗೆ ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಯ (ಎನ್‌ಐವಿ) ಜೊತೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) 2025ರಲ್ಲಿ ಮುಂದಾಯಿತು.

ಜಂಟಿಯಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಕೈಗೊಳ್ಳಲು ಆಸಕ್ತಿ ವ್ಯಕ್ತಪಡಿಸುವಂತೆ ಅರ್ಹ ಸಂಘ-ಸಂಸ್ಥೆಗಳು, ತಯಾರಕರಿಗೆ ಕಳೆದ ವರ್ಷದ ಫೆಬ್ರುವರಿಯಲ್ಲಿ ಐಸಿಎಂಆರ್ ಆಹ್ವಾನ ನೀಡಿತ್ತು. ಸಾಂಪ್ರದಾಯಿಕ ಅಥವಾ ಎಂಆರ್‌ಎನ್‌ಎ ಆಧಾರಿತ ಲಸಿಕೆ ಅಭಿವೃದ್ಧಿಗೆ ಎನ್‌ಐವಿಯಲ್ಲಿ ಸಿದ್ಧತೆಗಳು ನಡೆದಿವೆ. 2026ರ ಅಂತ್ಯಕ್ಕೆ ಲಸಿಕೆಯ ಕ್ಯಾಂಡಿಟೇಟ್ ಸಿದ್ಧವಾಗುವ ಸಾಧ್ಯತೆಯಿದ್ದು, ಆ ನಂತರ ಲಸಿಕೆಯನ್ನು ಹಲವು ಹಂತಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಎಂದು ಮೂಲಗಳು ತಿಳಿಸಿವೆ.

ಸೀರಂ ಇನ್‌ಸ್ಟಿಟ್ಯೂಟ್, ಜೆನ್ನೋವಾ ಬಯೋಫಾರ್ಮಾ ಕಂಪನಿ, ಐಸಿಎಂಆರ್–ಎನ್‌ಐವಿ ಜಂಟಿಯಾಗಿ ವಿವಿಧ ಮಾದರಿಯ ಲಸಿಕೆ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿವೆ.

ಭೋಪಾಲ್‌ನ ಐಸಿಎಆರ್ ಪ್ರಯೋಗಾಲಯ ಅಭಿವೃದ್ಧಿಪಡಿಸಿದ ಕಡಿಮೆ ರೋಗಕಾರಕ ಹಕ್ಕಿಜ್ವರ ಎಚ್9ಎನ್2 ತಡೆ ಲಸಿಕೆಯು ಕಳೆದ ವರ್ಷ ಮಾರುಕಟ್ಟೆಯಲ್ಲಿತ್ತು. ಆದರೆ ಅದರ ಬಳಕೆ ಸೀಮಿತವಾಗಿದ್ದು, ಆರು ತಿಂಗಳು ಮಾತ್ರ ರಕ್ಷಣೆ ನೀಡಬಲ್ಲದು ಎನ್ನಲಾಗಿದೆ. ಮೇಲಾಗಿ ಈಗಿನ ರೂಪಾಂತರಿ ವೈರಾಣುವನ್ನು ಎದುರಿಸುವ ಬಗ್ಗೆ ಇನ್ನೂ ಖಚಿತತೆ ಇಲ್ಲ.



## ಏನಿದು ಎಂಆರ್‌ಎನ್‌ಎ, ಕೆಲಸ ಹೇಗೆ?

ಲಸಿಕೆ ತಯಾರಿಕೆಗೂ ಮುನ್ನ, ವೈರಸ್‌ಗಳು ಹೊಂದಿರುವ ಪ್ರೊಟೀನ್ ಸಂಯೋಜನೆಯನ್ನು ತಿಳಿಯುವುದು ಅತಿಮುಖ್ಯ. ಈ ಪ್ರಕ್ರಿಯೆಯಲ್ಲಿ ಎಂಆರ್‌ಎನ್‌ಎ ಒಂದು ಟೆಂಪ್ಲೇಟ್ ಅಥವಾ ವಾಹಕದ ರೀತಿಯಲ್ಲಿ ಕೆಲಸ ಮಾಡುತ್ತದೆ. ಡಿಎನ್‌ಎಯಿಂದ ರೈಬೋಸೋಮ್‌ಗಳಿಗೆ ಆನುವಂಶಿಕ ಮಾಹಿತಿಯನ್ನು ರವಾನಿಸುವ ವಾಹಕವಾಗಿ ಮೆಸೆಂಜರ್ ರೈಬೋನ್ಯೂಕ್ಲಿಯಿಕ್ ಆಮ್ಲ (mRNA) ಕಾರ್ಯ ನಿರ್ವಹಿಸುತ್ತದೆ. ನಿರ್ದಿಷ್ಟ ಪ್ರೊಟೀನ್‌ವೊಂದನ್ನು ಉತ್ಪಾದನೆ ಮಾಡುವುದಕ್ಕೆ ರೈಬೊಸೋಮ್‌ಗಳಿಗೆ ಸೂಚನೆಗಳನ್ನು ರವಾನಿಸುವ ಇದು, ನಂತರದಲ್ಲಿ ತಾನೇ ಆ್ಯಂಟಿಜನ್ (ಪ್ರತಿಕಾಯ) ಆಗಿ ಕೆಲಸ ಮಾಡಲು ಶುರುಮಾಡಿ, ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು (ಇಮ್ಯೂನ್ ಸಿಸ್ಟಂ) ಪ್ರಚೋದಿಸುತ್ತದೆ.

**ಪ್ರಕ್ರಿಯೆ:** ವೈರಾಣುವಿನ ಪ್ರೊಟೀನ್ ಸಂಕೇತಗಳನ್ನು ಎಂಆರ್‌ಎನ್‌ಎ ಮೂಲಕ ಎಂಆರ್‌ಎನ್‌ಎ ಲಸಿಕೆಗಳು ದೇಹಕ್ಕೆ ಪರಿಚಯಿಸುತ್ತವೆ. ತಕ್ಷಣವೇ, ದೇಹದ ಜೀವಕೋಶಗಳು ಎಂಆರ್‌ಎನ್‌ಎ ಸಂಕೇತಗಳನ್ನು ಬಳಸಿಕೊಂಡು ವೈರಾಣುವಿನ ಪ್ರೊಟೀನ್‌ಗಳನ್ನೇ ಹೆಚ್ಚೆಚ್ಚು ಉತ್ಪಾದಿಸಲು ಆರಂಭಿಸುತ್ತವೆ. ಆಗ ಪ್ರತಿರಕ್ಷಣಾ ವ್ಯವಸ್ಥೆಯು ಜಾಗೃತಗೊಂಡು, ಇವು ಹೊರಗಿನ ಕಣಗಳು ಎಂಬುದನ್ನು ಗುರುತಿಸಲು ಶುರು ಮಾಡುತ್ತದೆ. ತಕ್ಷಣವೇ, ಶತ್ರುಗಳ ವಿರುದ್ಧ ಹೋರಾಡಬಲ್ಲ ಪ್ರತಿಕಾಯಗಳನ್ನು ದೇಹ ಉತ್ಪಾದಿಸಲು ತೊಡಗುತ್ತದೆ. ದೇಹವನ್ನು ಹೊಕ್ಕಿರುವ ವೈರಲ್ ಪ್ರೊಟೀನ್‌ಗಳನ್ನು ತಟಸ್ಥಗೊಳಿಸುತ್ತದೆ. ಈ ತಂತ್ರಗಾರಿಕೆಯ ಕಾರಣಕ್ಕೆ ಎಂಆರ್‌ಎನ್‌ಎ ಕಾರ್ಯ ವಿಧಾನದ ಲಸಿಕೆಗಳು ಜನಪ್ರಿಯತೆ ಗಳಿಸಿವೆ.

## ❖ ಸ್ಪೀಕರ್ ಪದಚ್ಯುತಿ: ಯಶಸ್ವಿಯಾದ ನಿದರ್ಶನ ಇಲ್ಲ

**ಸಂದರ್ಭ: ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಿಗೊಳಿಸುವ ಕುರಿತು ವಿರೋಧ ಪಕ್ಷಗಳು ನೋಟಿಸ್ ನೀಡಿವೆ. ಆದರೆ, ಸಂಸದೀಯ ಇತಿಹಾಸ ಅವಲೋಕಿಸಿದಾಗ, ಈ ಹಿಂದೆ ಇಂತಹ ಯಾವ ಪ್ರಯತ್ನಗಳು ಯಶಸ್ವಿಯಾದ ನಿದರ್ಶನಗಳು ಇಲ್ಲ ಎಂಬುದು ಗೊತ್ತಾಗುತ್ತದೆ.**

- ಸರಳ ಬಹುಮತದೊಂದಿಗೆ ಸದನ ಠರಾವು ಅನುಮೋದಿಸುವ ಮೂಲಕ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂವಿಧಾನದ 94(ಸಿ) ವಿಧಿ ಅವಕಾಶ ನೀಡುತ್ತದೆಯೆಂದು ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಡಿ. ಟಿ.ಆಚಾರಿ ಹೇಳಿದ್ದಾರೆ.
- ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸ್ಪೀಕರ್ ಅವರಿಗೆ ಸಂವಿಧಾನದ 96ನೇ ವಿಧಿಯು ಅವಕಾಶ ನೀಡುತ್ತದೆ ಎಂದೂ ಆಚಾರಿ ಹೇಳಿದರು.

**ನೆಹರೂ ನೆನೆದ ಕಾಂಗ್ರೆಸ್:**

- ಲೋಕಸಭಾ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವುದುಸೇರಿ ಸಂಸದೀಯ ನಡವಳಿಕೆಗೆ ಸಂಬಂಧಿಸಿ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ನಡೆದುಕೊಳ್ಳುತ್ತಿದ್ದ ರೀತಿಯನ್ನು ಕಾಂಗ್ರೆಸ್ ಪಕ್ಷಮಂಗಳವಾರ ಸ್ಮರಿಸಿದೆ.
- 1954ರಲ್ಲಿ ಆಗಿನ ಸ್ಪೀಕರ್ ಪದಚ್ಯುತಿ ಕುರಿತ ನೋಟಿಸ್‌ಗೆ ಸಂಬಂಧಿಸಿ ವಿಸ್ತೃತವಾಗಿ ಚರ್ಚೆ ನಡೆಸಲು ವಿಪಕ್ಷಗಳಿಗೆ ಹೆಚ್ಚು ಸಮಯ ನೀಡುವಂತೆ ನೆಹರೂ ಹೇಳಿದ್ದರು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಎಕ್ಸ್ 'ನಲ್ಲಿ ಪೋಸ್ಟ್ ಮಾಡಿದ್ದಾರೆ.

## ❖ ಎ.ಐ ವಿಷಯಗಳ ಮೇಲೆ ಕಠಿಣ ನಿಯಮ

**ಸಂದರ್ಭ: ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗುವ ಕೃತಕ ಬುದ್ಧಿಮತ್ತೆ (ಎ.ಐ) ಮೂಲಕ ಸೃಜಿಸಿದ ವಿಷಯ ವಸ್ತುಗಳ ನಿಯಂತ್ರಣಕ್ಕೆ ಕೇಂದ್ರವು ಕಠಿಣ ಆದೇಶ ಹೊರಡಿಸಿದೆ.**

- ಕಾನೂನುಬಾಹಿರ ವಿಷಯಗಳಿರುವ ಪೋಸ್ಟ್‌ಗಳನ್ನು ಯಾವುದೇ ಪ್ರಾಧಿಕಾರ ಅಥವಾ ಕೋರ್ಟ್ ಸೂಚಿಸಿದ ಮೂರು ಗಂಟೆಯೊಳಗೆ ತೆಗೆದುಹಾಕಬೇಕು ಎಂದು ಸೂಚಿಸಿದೆ.
- ಎ.ಐ ರಚಿತ ವಿಷಯಗಳಿಗೆ ಕಡ್ಡಾಯವಾಗಿ ಲೇಬಲಿಂಗ್ (ಎ.ಐ ಮೂಲಕ ರಚಿಸಿದ ಎಂದು ನಮೂದಿಸ ಬೇಕು) ಮಾಡಬೇಕು. ಕೃತಕವಾಗಿ ರಚಿಸ ಲಾದ ವಿಷಯಗಳನ್ನು ಹಂಚುವಾಗಲೂ ಲೇಬಲ್ ಮಾಡಬೇಕು ಎಂದು ನಿಯಮ ದಲ್ಲಿ ಹೇಳಲಾಗಿದೆ.
- ಎ.ಐ ಮೂಲಕ ರಚಿಸಲಾದ ಕಾನೂನುಬಾಹಿರ, ಲೈಂಗಿಕ ಶೋಷಣೆಯ, ಒಪ್ಪಿಗೆಯಿಲ್ಲದ ಅಥವಾ ಸುಳ್ಳು ದಾಖಲೆಗಳು, ಮಕ್ಕಳ ಮೇಲಿನ ದೌರ್ಜನ್ಯ, ಸ್ಫೋಟಕ ಮುಂತಾದ ವಿಷಯವನ್ನು ತಡೆಯಲು ಪ್ಲಾಟ್ ಫಾರ್ಮ್‌ಗಳು ಸ್ವಯಂಚಾಲಿತ ಸಾಧನಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದೆ.

## ❖ ಏಷ್ಯನ್ ಶೂಟಿಂಗ್: ಆಕೃತಿಗೆ ಬೆಳ್ಳಿ

**ಸಂದರ್ಭ: ಭಾರತದ ಅಕೃತಿ ದಹಿಯಾ ಮತ್ತು ಅಂಜುಮ್ ಮೌನ್ಸಿಲ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಮಂಗಳವಾರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.**

- ಕಜಾಕಸ್ತಾನದ ಸೋಫಿಯಾ ಶುಲ್ಲೆಂಕೊ ಅವರು ಕರ್ನಿ ಸಿಂಗ್ ರೇಂಜ್‌ನಲ್ಲಿ ಚಿನ್ನ ಗೆಲ್ಲುವ ಮೊದಲು ನೂತನ ವಿಶ್ವದಾಖಲೆ ಸ್ಥಾಪಿಸಿದರು.
- 35 ಗುರಿಯತ್ನಗಳಿರುವ ಫೈನಲ್‌ನಲ್ಲಿ ಸೋಫಿಯಾ 358.2 ಸ್ಕೋರ್ ದಾಖಲಿಸಿದರು. ಅವರಿಗಿಂತ ನಾಲ್ಕು ಪಾಯಿಂಟ್ ಹಿಂದೆಬಿದ್ದ ಆಕೃತಿ (354) ಬೆಳ್ಳಿ ಗೆದ್ದರು. ಮೂರನೇ ಸ್ಥಾನ ಪಡೆದ ಅಂಜುಮ್ 340.4 ಸ್ಕೋರ್ ದಾಖಲಿಸಿದರು.

- ಸೋಫಿಯಾ ಈ ಹಾದಿಯಲ್ಲಿ ಇನ್ನೂ ಮೂರು- ವಿಶ್ವ ಜೂನಿಯರ್, ಏಷ್ಯನ್ ಮತ್ತು ಏಷ್ಯನ್ ಜೂನಿಯರ್ ದಾಖಲೆಗಳನ್ನು ಸ್ಥಾಪಿಸಿದರು.
- ಜೂನಿಯರ್ ಮಹಿಳೆಯರ 3ಪಿ ಫೈನಲ್‌ನಲ್ಲಿ ಭಾರತದ ಪ್ರಾಚಿ ಗಾಯಕವಾಡ್ 353.4 ಸ್ಕೋರ್‌ನೊಡನೆ ವಿಜೇತರಾದರು. ಕಜಾಕಸ್ತಾನದ 14 ವರ್ಷ ವಯಸ್ಸಿನ ಪ್ರತಿಭೆ ತೊಮಿರಿಸ್ ಅಮನೋವಾ 351.4 ಸ್ಕೋರ್ ನೊಡನೆ ಬೆಳ್ಳಿ ಮತ್ತು ಕರ್ನಾಟಕದ ಅನುಷ್ಕಾ ತೋಕೂರ್ (341.1) ಕಂಚಿನ ಪಕದ ಗೆದ್ದರು. ಮಹಾರಾಷ್ಟ್ರದ ಪ್ರಾಚಿ.
- ಅನುಷ್ಕಾ ಮತ್ತು ಹೆಝುಲ್ ಅವರಿದ್ದ ಭಾರತ ತಂಡ ಒಟ್ಟು 1748 ಪಾಯಿಂಟ್‌ಗಳೊಡನೆ ಟೀಮ್ ಚಿನ್ನ ಸಹ ಗೆದ್ದಿತು. ಮಹಿಳೆಯರ ರೈಫಲ್ 3ಪಿ ತಂಡ ಸ್ಪರ್ಧೆಯಲ್ಲಿ ಕಜಾಕಸ್ತಾನ ತಂಡ, ಆತಿಥೇಯ ತಂಡವನ್ನು 4 ಪಾಯಿಂಟ್‌ಗಳಿಂದ ಹಿಂದೆಹಾಕಿ ಚಿನ್ನ ಗೆದ್ದಿತು. ಕಜಾಕ್ ತಂಡ ಒಟ್ಟು 1760 ಪಾಯಿಂಟ್ಸ್ ಕಲೆಹಾಕಿತು.
- ಭಾರತ ಒಟ್ಟು 39 ಚಿನ್ನ, 15 ಬೆಳ್ಳಿ ಮತ್ತು 12 ಕಂಚಿನ ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಇತರ ತಂಡಗಳಿಗಿಂತ ಬಹೂ ಮುಂದಿದೆ.



## ❖ ಸುಧಾರಾಣಿ ಪ್ರಚಾರ ರಾಯಭಾರಿ

**ಸಂದರ್ಭ: ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ನಂದಿನಿ ಉತ್ಪನ್ನಗಳಿಗೆ ಪ್ರಚಾರ ರಾಯಭಾರಿಯಾಗಿ ನಟಿಸುಧಾರಾಣಿ ಅವರನ್ನು ನೇಮಕ ಮಾಡಲಾಗಿದೆ.**

- 'ರಾಜ್'ಕುಮಾರ್, ಶಿವರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರಂತಹ ಮೇರು ವ್ಯಕ್ತಿಗಳ ಹಾದಿಯನ್ನು ಅನುಸರಿಸಿ ಬ್ರ್ಯಾಂಡ್ ಅಂಬಾಸಿಡರ್ ಆಗಿರುವುದು ಕೇವಲ ಅನುಕರಣೆಯಲ್ಲ, ಧನ್ಯತೆ ಮತ್ತು ಹೆಮ್ಮೆಯ ಜವಾಬ್ದಾರಿ. ಅವರಂತೆಯೇ ಉಚಿತವಾಗಿ ಪ್ರಚಾರ ಮಾಡಲು ಒಪ್ಪಿಕೊಂಡಿದ್ದೇನೆ' ಎಂದು ಸುಧಾರಾಣಿ ತಿಳಿಸಿದ್ದಾರೆ.
- 'ತಲೆಮಾರುಗಳಿಂದ ಪ್ರತಿಯೊಬ್ಬ ಕನ್ನಡಿಗನ ನಂಬಿಕೆಯ ಪ್ರತೀಕ ನಂದಿನಿ, ರೈತರ ಸಹಕಾರಿ ಸಂಸ್ಥೆಯಾದ ಬಮೂಲ್ ಜತೆ ಒಡಗೂಡುವ ಅವಕಾಶ ನನಗೆ ಅತ್ಯಂತ ಗೌರವದ ವಿಷಯ, ಡಿ.ಕೆ.ಸುರೇಶ್ ಅವರೊಂದಿಗೆ ಬಮೂಲ್ ಹೊಸ ಉತ್ಪನ್ನಗಳ ಕುರಿತು ಸಂವಾದ ನಡೆಸಿದೆ. ಮಾರುಕಟ್ಟೆಗೆ ಬರಲಿರುವ ಹೊಸ ಉತ್ಪನ್ನಗಳ ಬಿಡುಗಡೆಯ ಹಿಂದೆ ಇರುವ ದೃಷ್ಟಿಕೋನ ನಿಜಕ್ಕೂ ಪ್ರೇರಣಾದಾಯಕವಾಗಿತ್ತು ಎಂದು ಹೇಳಿದ್ದಾರೆ.
- D ಸುರೇಶ್ ಸ್ವಾಗತ: ನಂದಿನಿ ಉತ್ಪನ್ನಗಳಿಗೆ ಪ್ರಚಾರ ರಾಯಭಾರಿಯಾಗಿ ಸುಧಾರಾಣಿ ಅಯ್ಕೆಯಾಗಿದ್ದು, ಬಮೂಲ್ ಕುಟುಂಬಕ್ಕೆ ಅವರನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ ಎಂದು ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದ್ದಾರೆ.

## ❖ 7,240 ಕಿ.ಮೀ. ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ: ವೈಷ್ಣವ್

### 7,240 ಕಿ.ಮೀ. ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ: ವೈಷ್ಣವ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 7,240 ಕಿ.ಮೀ. ಉದ್ದದ ರೈಲು ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ಅನುಮೋದನೆ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಬುಧವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, '25 ಹೊಸ ಮಾರ್ಗಗಳ ಹಾಗೂ 40 ಜೋಡಿ ಹಳಿ ಮಾರ್ಗಗಳ ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲಾಗುತ್ತಿದೆ' ಎಂದರು.

'ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗುತ್ತಿದೆ. ಹೀಗಾಗಿ, ಕೆಲವೊಂದು ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಿವೆ. ರೈಲ್ವೆ ಯೋಜನೆಗಳಿಗೆ ಅಗತ್ಯವಿರುವ ಭೂಮಿಗಳ ಪೈಕಿ ಶೇ 63ರಷ್ಟು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇನ್ನೂ ಶೇ 37 ಭೂಮಿಯ ಸ್ವಾಧೀನ ಆಗಬೇಕಿದೆ. ರಾಜ್ಯ ಸರ್ಕಾರ ಸಹಕಾರ ನೀಡಿದರೆ ಈ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬಹುದು' ಎಂದರು.

**ಅಂಕಿ ಅಂಶಗಳು**

**9,064** ಹೆಕ್ಟೇರ್
ರಾಜ್ಯದಲ್ಲಿ ರೈಲ್ವೆ ಯೋಜನೆಗಳಿಗೆ ಬೇಕಿರುವ ಭೂಮಿ

**5,707** ಹೆಕ್ಟೇರ್
ಈವರೆಗೆ ಭೂಸ್ವಾಧೀನ

**3,357** ಹೆಕ್ಟೇರ್
ಇನ್ನಷ್ಟೇ ಭೂಸ್ವಾಧೀನ ಆಗಬೇಕಿದೆ

**ಭೂಸ್ವಾಧೀನದಿಂದ ಯೋಜನೆಗಳ ವಿಳಂಬ (ಹೆಕ್ಟೇರ್‌ಗಳಲ್ಲಿ)**

| ಯೋಜನೆ | ಕಿ.ಮೀ | ಬೇಕಿರುವ ಭೂಮಿ | ಸ್ವಾಧೀನ | ಬಾಕಿ |
|---|---|---|---|---|
| ಶಿವಮೊಗ್ಗ–ರಾಣೆಬೆನ್ನೂರು | 96 | 559 | 226 | 333 |
| ಬೆಳಗಾವಿ– ಧಾರವಾಡ | 73 | 581 | 0 | 581 |
| ಶಿವಮೊಗ್ಗ–ಹರಿಹರ | 79 | 488 | 0 | 488 |
| ವೈಟ್‌ಫೀಲ್ಡ್–ಕೋಲಾರ | 53 | 337 | 0 | 337 |
| ಹಾಸನ–ಬೇಲೂರು | 27 | 206 | 0 | 206 |

## ❖ 25 ಹುಲಿಗಳ ಸೆರೆ: ಎನ್‌ಟಿಸಿಎ ಕಳವಳ

● ಚಿರಂಜೀವಿ ಕುಲಕರ್ಣಿ



ಬೆಂಗಳೂರು: ಕಳೆದ ನಾಲ್ಕು ತಿಂಗಳಲ್ಲಿ ಬಂಡೀಪುರ–ನಾಗರಹೊಳೆ–ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ವ್ಯಾಪ್ತಿಯಲ್ಲಿ 25 ಹುಲಿಗಳನ್ನು ಸೆರೆ ಹಿಡಿದಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ(ಎನ್‌ಟಿಸಿಎ) ಈ ಬಗ್ಗೆ ವಿವರಣೆ ನೀಡುವಂತೆ ರಾಜ್ಯದ ಅರಣ್ಯ ಇಲಾಖೆಗೆ ತಾಕೀತು ಮಾಡಿದೆ.

ಈ ವಿಷಯದ ಕುರಿತು ವಿಸ್ತೃತ ಚರ್ಚೆ ನಡೆಸಿರುವ ಎನ್‌ಟಿಸಿಎ, ಜನವರಿ 27ರಂದು ಮುಖ್ಯ ವನ್ಯಜೀವಿ ಪಾಲಕರಿಗೆ ಪತ್ರ ಬರೆದಿದೆ.

ಎನ್‌ಟಿಸಿಎ ಶಾಸನಬದ್ಧ ಸಂಸ್ಥೆಯಾಗಿದ್ದು, ರಾಜ್ಯಗಳ ಅರಣ್ಯ ಇಲಾಖೆ ಅಥವಾ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಅಧಿಕಾರ ಹೊಂದಿದೆ. ಆ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯ. ಮಾನವ–ಹುಲಿ ಸಂಘರ್ಷದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ವೈಜ್ಞಾನಿಕವಾಗಿ ನಿಭಾಯಿಸಿದ್ದೀರಾ ಎಂಬ ಪ್ರಶ್ನೆಯನ್ನೂ ಕೇಳಿದೆ.

‘ಇತ್ತೀಚಿನ 3–4 ತಿಂಗಳಲ್ಲಿ ಬಂಡೀಪುರ–ನಾಗರಹೊಳೆ ಮತ್ತು ಬಿಆರ್‌ಟಿಯಲ್ಲಿ ಹುಲಿಗಳನ್ನು ಸೆರೆ ಹಿಡಿಯುತ್ತಿರುವ ಪ್ರಕರಣ ಅಸಹಜ ಎಂಬ ರೀತಿಯಲ್ಲಿ ಏರಿಕೆಯಾಗಿದೆ. ಲಭ್ಯವಾಗಿರುವ ಮಾಹಿತಿಯ ಪ್ರಕಾರ 27 ಪ್ರಕರಣಗಳು ವರದಿಯಾಗಿವೆ. ಸೆರೆ ಹಿಡಿಯುವಿಕೆಯ ಪ್ರಕರಣ ಹಠಾತ್ ಏರಿಕೆ ಆಗಿರುವುದು ಸಂಬಂಧಪಟ್ಟ ಎಲ್ಲರ ಗಮನ ಸೆಳೆದಿದೆ’ ಎಂದು ಪತ್ರದಲ್ಲಿ ತಿಳಿಸಿದೆ.

ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪರಿಸರ ಧಾರಣ ಸಾಮರ್ಥ್ಯವನ್ನು ಮೀರಿ ಹುಲಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ರಾಜ್ಯ ಸರ್ಕಾರದ ಸಂಕಥನವನ್ನೂ ಎನ್‌ಟಿಸಿಎ ಪ್ರಶ್ನಿಸಿದೆ. ಈ ಬಗ್ಗೆ ಲಭ್ಯವಿರುವ ವೈಜ್ಞಾನಿಕ ಅಂದಾಜನ್ನೂ ಎನ್‌ಟಿಸಿಎ ಪರಿಶೀಲನೆಗೆ ಒಳಪಡಿಸಿದೆ. ಆ ಪ್ರಕಾರ ಬಂಡೀಪುರದಲ್ಲಿ 110 ಹುಲಿಗಳಿವೆ. ಅಲ್ಲಿ 229 ಹುಲಿಗಳಿಗೆ ಆಶ್ರಯವಾಗುವ ಸಾಮರ್ಥ್ಯ ಹೊಂದಿದೆ. ನಾಗರಹೊಳೆಯಲ್ಲಿ 135 ಹುಲಿಗಳಿದ್ದು, ಅಲ್ಲಿ 170 ಹುಲಿಗಳಿಗೆ ಆಶ್ರಯ ನೀಡಬಹುದು. ಬಿಆರ್‌ಟಿ ಹುಲಿ ಸಂರಕ್ಷಿತದಲ್ಲಿ 29 ಹುಲಿಗಳಿದ್ದು, 81 ಹುಲಿಗಳಿಗೆ ಆಶ್ರಯ ನೀಡುವ ಅವಕಾಶವಿದೆ. ನೆರೆಯ ತಮಿಳುನಾಡಿನ ಮದುಮಲೈನಲ್ಲಿ 58 ಹುಲಿಗಳಿದ್ದು, 92 ಹುಲಿಗಳಿಗೆ ಆಶ್ರಯ ಸಾಮರ್ಥ್ಯವಿದೆ. ಅಚ್ಚರಿ ಎಂದರೆ ಮದುಮಲೈನಲ್ಲಿ ಈ ಅವಧಿಯಲ್ಲಿ ಕೇವಲ ಒಂದು ಹುಲಿಯನ್ನು ಮಾತ್ರ ಸೆರೆಹಿಡಿಯಲಾಗಿದೆ ಎಂದು ಎನ್‌ಟಿಸಿಎ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಿಸಿಸಿಎಫ್ (ಅರಣ್ಯ) ಕುಮಾರ್ ಪುಷ್ಕರ್, ಸಂಘರ್ಷದ ಸನ್ನಿವೇಶವನ್ನು ಆಧರಿಸಿ ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸಲಾಗುತ್ತದೆ. ಪ್ರತಿಯೊಂದು ಕಾರ್ಯಾಚರಣೆ ಕುರಿತು ಎನ್‌ಟಿಸಿಎಗೆ ಮಾಹಿತಿ ನೀಡಲಾಗುತ್ತದೆ. ಮಾನವರ ಮೇಲಿನ ದಾಳಿಯನ್ನು ತಡೆಯುವುದರ ಜತೆಗೆ, ಮಾನವ– ವನ್ಯಜೀವಿ ಸಂಘರ್ಷವನ್ನು ತಗ್ಗಿಸಬೇಕಾಗಿದೆ ಎಂದಿದ್ದಾರೆ.

# 7,240 ಕಿ.ಮೀ. ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ: ವೈಷ್ಣವ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 7,240 ಕಿ.ಮೀ. ಉದ್ದದ ರೈಲು ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ಅನುಮೋದನೆ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಬುಧವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ‘25 ಹೊಸ ಮಾರ್ಗಗಳ ಹಾಗೂ 40 ಜೋಡಿ ಹಳಿ ಮಾರ್ಗಗಳ ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲಾಗುತ್ತಿದೆ’ ಎಂದರು.

‘ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗುತ್ತಿದೆ. ಹೀಗಾಗಿ, ಕೆಲವೊಂದು ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಿವೆ. ರೈಲ್ವೆ ಯೋಜನೆಗಳಿಗೆ ಅಗತ್ಯವಿರುವ ಭೂಮಿಗಳ ಪೈಕಿ ಶೇ 63ರಷ್ಟು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇನ್ನೂ ಶೇ 37 ಭೂಮಿಯ ಸ್ವಾಧೀನ ಆಗಬೇಕಿದೆ. ರಾಜ್ಯ ಸರ್ಕಾರ ಸಹಕಾರ ನೀಡಿದರೆ ಈ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬಹುದು’ ಎಂದರು.

### ಅಂಕಿ ಅಂಶಗಳು

**9,064** ಹೆಕ್ಟೇರ್
ರಾಜ್ಯದಲ್ಲಿ ರೈಲ್ವೆ ಯೋಜನೆಗಳಿಗೆ ಬೇಕಿರುವ ಭೂಮಿ

**5,707** ಹೆಕ್ಟೇರ್
ಈವರೆಗೆ ಭೂಸ್ವಾಧೀನ

**3,357** ಹೆಕ್ಟೇರ್
ಇನ್ನಷ್ಟೇ ಭೂಸ್ವಾಧೀನ ಆಗಬೇಕಿದೆ

### ಭೂಸ್ವಾಧೀನದಿಂದ ಯೋಜನೆಗಳ ವಿಳಂಬ (ಹೆಕ್ಟೇರ್‌ಗಳಲ್ಲಿ)

| ಯೋಜನೆ | ಕಿ.ಮೀ | ಬೇಕಿರುವ ಭೂಮಿ | ಸ್ವಾಧೀನ | ಬಾಕಿ |
|---|---|---|---|---|
| ಶಿವಮೊಗ್ಗ–ರಾಣೆಬೆನ್ನೂರು | 96 | 559 | 226 | 333 |
| ಬೆಳಗಾವಿ– ಧಾರವಾಡ | 73 | 581 | 0 | 581 |
| ಶಿವಮೊಗ್ಗ–ಹರಿಹರ | 79 | 488 | 0 | 488 |
| ವೈಟ್‌ಫೀಲ್ಡ್–ಕೋಲಾರ | 53 | 337 | 0 | 337 |
| ಹಾಸನ–ಬೇಲೂರು | 27 | 206 | 0 | 206 |

Publication Date
12/02/2026

Presented by ಪ್ರಜಾವಾಣಿ

# ಎಐ ದುರ್ಬಳಕೆ ತಡೆಗೆ ನಿಯಮ


**ಕೃತಕ ಬುದ್ಧಿಮತ್ತೆಯ ನೆರವಿನಿಂದ ಸೃಷ್ಟಿಸಲಾದ ವಿಷಯಗಳಿಗೆ (ಕಂಟೆಂಟ್) ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಾಹಿತಿ ತಂತ್ರಜ್ಞಾನ ಕಾಯ್ದೆಯ (2021) ಅಡಿಯಲ್ಲಿ ಬರುವ ನಿಯಮಗಳಿಗೆ ತಿದ್ದುಪಡಿ ಮಾಡಿ, ಹೊಸ ನಿಯಮಗಳನ್ನು ರೂಪಿಸಿದೆ. ಇದೇ 20ರಿಂದ ಜಾರಿಗೆ ಬರಲಿದೆ. ವಿಷಯದ ವರ್ಗೀಕರಣವು ಕಡ್ಡಾಯವಾಗಿದ್ದು, ಆಕ್ಷೇಪಾರ್ಹ ವಿಡಿಯೊ, ಆಡಿಯೊ, ಗ್ರಾಫಿಕ್ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದುಹಾಕಲು ಇದ್ದ ಸಮಯದ ಮಿತಿಯನ್ನು ಕಡಿತಗೊಳಿಸಲಾಗಿದೆ. ಎಐ ದುರ್ಬಳಕೆಯನ್ನು ತಡೆಯಲು ಹೊಸ ನಿಯಮಗಳನ್ನು ರೂಪಿಸಿದ್ದಾಗಿ ಕೇಂದ್ರ ಸರ್ಕಾರ ಹೇಳಿದೆ. ಆದರೆ, ಇದು ಆನ್‌ಲೈನ್ ಸೆನ್ಸಾರ್‌ಶಿಪ್‌ನ ಕ್ರಮವಾಗಿದೆ ಎಂಬ ಆಕ್ಷೇಪವೂ ವ್ಯಕ್ತವಾಗಿದೆ**

ಪ್ರಜಾವಾಣಿ ವಾರ್ತೆ

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್, ಎಕ್ಸ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣ/ಡಿಜಿಟಲ್ ವೇದಿಕೆಗಳಲ್ಲಿ ಪ್ರತಿ ದಿನವೂ ಆಡಿಯೊ, ವಿಡಿಯೊ, ಆಡಿಯೊ–ವಿಡಿಯೊಗಳನ್ನೊಳಗೊಂಡ ವಿಷಯಗಳು (ಕಂಟೆಂಟ್) ಅಪ್‌ಲೋಡ್ ಆಗುತ್ತಲೇ ಇರುತ್ತವೆ. ರಾಜಕೀಯ, ಸಿನಿಮಾ ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ವಾಸ್ತವಿಕ ಆಡಿಯೊ/ವಿಡಿಯೊಗಳ ಜತೆಗೆ ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಿದವೂ ಇತ್ತೀಚೆಗೆ ಗಮನಾರ್ಹ ಸಂಖ್ಯೆಯಲ್ಲಿ ಕಾಣಸಿಗುತ್ತಿವೆ. ಬಹುತೇಕ ಸಂದರ್ಭಗಳಲ್ಲಿ ಯಾವುದು ನೈಜ ಮತ್ತು ಯಾವುದು ಎಐನಿಂದ ಸೃಷ್ಟಿಸಿದ್ದು ಎನ್ನುವುದನ್ನು ಪತ್ತೆಹಚ್ಚುವುದೂ ಕಷ್ಟವಾಗುತ್ತದೆ.

ಶಿಕ್ಷಣ, ಉದ್ಯೋಗ, ಮಾಹಿತಿ ಮತ್ತು ಸಾರ್ವಜನಿಕ ಸೇವೆಗಳನ್ನು ನೀಡುವ ದಿಸೆಯಲ್ಲಿ ಡಿಜಿಟಲ್ ಮಾಧ್ಯಮಗಳು ಉಪಯುಕ್ತವಾಗಿವೆ. ಆದರೆ, ಸಾಮಾಜಿಕ ಜಾಲತಾಣಗಳು ಸೇರಿದಂತೆ ವಿವಿಧ ರೀತಿಯ ಡಿಜಿಟಲ್ ಮಾಧ್ಯಮಗಳಲ್ಲಿ ನಕಲಿ ಖಾತೆಗಳು, ಮಹಿಳೆಯರಂತೆ ಬಿಂಬಿಸಿಕೊಳ್ಳುವುದು, ಸೈಬರ್ ಕಿರುಕುಳ, ಡೀಪ್‌ಫೇಕ್, ಸಲುಗೆಯ–ಆಪ್ತ ಚಿತ್ರಗಳನ್ನು ಒಪ್ಪಿಗೆಯಿಲ್ಲದೇ ಹಂಚಿಕೊಳ್ಳುವುದು ಮುಂತಾದ ಪ್ರವೃತ್ತಿಗಳು ಹೆಚ್ಚುತ್ತಿದ್ದು, ಅವು ಜನರ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಘನತೆ, ಖಾಸಗಿತನ ರಕ್ಷಣೆಗೆ ತೊಡಕಾಗಿ ಪರಿಣಮಿಸಿವೆ. ಇಂಥ ಆಕ್ಷೇಪಾರ್ಹವಾದ, ನಿಂದನಾತ್ಮಕವಾದ ಆಡಿಯೊ, ವಿಡಿಯೊ, ಚಿತ್ರಗಳನ್ನು ತಡೆಯುವ ದಿಸೆಯಲ್ಲಿ ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಹೊಸ ನಿಯಮಗಳನ್ನು ರೂಪಿಸಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಗೆ (2021) ಇದುವರೆಗೆ ಹಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಈಗ ಅದರ ನಿಯಮಗಳಿಗೆ ತಿದ್ದುಪಡಿ ತಂದು, 'ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂತ್ರಗಳು ಮತ್ತು ಡಿಜಿಟಲ್ ಮೀಡಿಯಾ ನೀತಿಸಂಹಿತೆ) ತಿದ್ದುಪಡಿ ನಿಯಮಗಳು–2026' ರೂಪಿಸಿದೆ. ಇದೇ 20ರಿಂದ ಈ ನಿಯಮಗಳು ಜಾರಿಗೆ ಬರಲಿವೆ. ಎಕ್ಸ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್‌ನಂಥ ವೇದಿಕೆಗಳ ಜತೆಗೆ ಅವುಗಳ ಬಳಕೆದಾರರೂ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಯಾವುದೇ ಬಳಕೆದಾರ ನಿಯಮ ಉಲ್ಲಂಘಿಸಿದರೆ, ಮಾಹಿತಿ ತಂತ್ರಜ್ಞಾನ ಕಾಯ್ದೆ–2021, ಭಾರತೀಯ ನ್ಯಾಯ ಸಂಹಿತೆ–2023, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012, ಸ್ಫೋಟಕ ವಸ್ತುಗಳ ಕಾಯ್ದೆ–1908 ಮುಂತಾದ, ಅಸ್ತಿತ್ವದಲ್ಲಿರುವ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.




ಎಐ ಚಿತ್ರ: ಈಶ್ವರ ಬಡಿಗೇರ

## ಪ್ರಮುಖ ನಿಯಮಗಳು

- ಬಳಕೆದಾರನು ಆಡಿಯೊ/ವಿಡಿಯೊ, ಚಿತ್ರ ಎಐನಿಂದ ಸೃಷ್ಟಿಸಿದ್ದೇ ಅಲ್ಲವೇ ಎನ್ನುವುದನ್ನು ಸ್ಪಷ್ಟವಾಗಿ ಕಾಣುವಂತೆ ನಮೂದಿಸಬೇಕು. ವೇದಿಕೆಯು ಅದನ್ನು ಮರೆಮಾಚಬಾರದು, ತೆಗೆದುಹಾಕಬಾರದು. ಬಳಕೆದಾರ ನಮೂದಿಸದೇ ಇದ್ದರೆ ವೇದಿಕೆಯೇ ಆ ಕೆಲಸ ಮಾಡಬೇಕು ಇಲ್ಲವೇ ಅದನ್ನು ತೆಗೆದುಹಾಕಬೇಕು
- ಮಧ್ಯವರ್ತಿಯು (ವೇದಿಕೆ) ಕನಿಷ್ಠ ಮೂರು ತಿಂಗಳಿಗೆ ಒಮ್ಮೆ ಖಾಸಗಿ ನೀತಿ, ಬಳಕೆದಾರ ಒಪ್ಪಂದ ಅಥವಾ ಸೂಕ್ತ ವಿಧಾನದ ಮೂಲಕ ನಿಯಮಗಳ ಬಗ್ಗೆ ಇಂಗ್ಲಿಷ್‌ನಲ್ಲಿ ಅಥವಾ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿರುವ ಯಾವುದೇ ಭಾಷೆಯ ಮೂಲಕ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕು (ಪ್ರಸ್ತುತ ನಿಯಮಗಳ ಅನ್ವಯ, ವರ್ಷಕ್ಕೆ ಒಮ್ಮೆ ಮಾಹಿತಿ ನೀಡಿದರೆ ಸಾಕು)
- ಯಾವುದೇ ಆಡಿಯೊ/ವಿಡಿಯೊ/ಚಿತ್ರ ಆಕ್ಷೇಪಾರ್ಹವಾಗಿದ್ದು, ನಿಯಮ ಉಲ್ಲಂಘಿಸುವಂತಿದ್ದರೆ, ನ್ಯಾಯಾಲಯ/ಸರ್ಕಾರಿ ಆದೇಶದ ಮೂರು ಗಂಟೆಗಳಲ್ಲಿ ಅದನ್ನು ವೇದಿಕೆಯಿಂದ ತೆಗೆಯಬೇಕು. ಪ್ರಸ್ತುತ ಅಂಥ ವಿಷಯಗಳನ್ನು ತೆಗೆಯಲು 36 ಗಂಟೆ ನೀಡಲಾಗುತ್ತಿದೆ
- ಯಾವುದೇ ಪೋಸ್ಟ್/ವಿಷಯ ಆಕ್ಷೇಪಾರ್ಹ ಎಂದು ಸಂಬಂಧಿಸಿದವರು ದೂರು ನೀಡಿದರೆ, ಅದನ್ನು 36 ಗಂಟೆಗಳಲ್ಲಿ ಇತ್ಯರ್ಥಪಡಿಸಿ, ತೆಗೆದುಹಾಕಬೇಕು. ಪ್ರಸ್ತುತ ಈ ಅವಧಿಯು 72 ಗಂಟೆಗಳು
- ಲೈಂಗಿಕ ಕ್ರಿಯೆ/ವರ್ತನೆ/ನಗ್ನತೆ ಬಗ್ಗೆ ಸಂಬಂಧಿಸಿದವರು ದೂರು ನೀಡಿದರೆ, ಅದನ್ನು 2 ಗಂಟೆಗಳಲ್ಲಿ ವೇದಿಕೆಯಿಂದ ತೆಗೆದುಹಾಕಬೇಕು. ಪ್ರಸ್ತುತ ಇದಕ್ಕೆ 24 ಗಂಟೆಗಳವರೆಗೆ ಅವಕಾಶ ಇದೆ
- ಸಂತ್ರಸ್ತರಿಂದ ದೂರು ಪಡೆದ 7 ದಿನಗಳ ಒಳಗಾಗಿ ಸಂಬಂಧಪಟ್ಟ ಅಧಿಕಾರಿಯು ಅದನ್ನು ಪರಿಹರಿಸಬೇಕು. ಪ್ರಸ್ತುತ ದೂರನ್ನು ವಿಲೇವಾರಿ ಮಾಡಲು 15 ದಿನಗಳವರೆವಿಗೂ ಅವಕಾಶವಿದೆ

## ಕೃತಕವಾಗಿ ಸೃಷ್ಟಿಸಿದ ಮಾಹಿತಿ ಎಂದರೆ...

ಪರಿಷ್ಕೃತ ನಿಯಮಗಳ ಅಧಿಸೂಚನೆಯಲ್ಲಿ ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಿದ ವಿಷಯ ಎಂದು ಎಲ್ಲೂ ಉಲ್ಲೇಖಿಸಲಾಗಿಲ್ಲ. ಬದಲಿಗೆ 'ಕೃತಕವಾಗಿ ಸೃಷ್ಟಿಸಿದ ಮಾಹಿತಿ' (ಸಿಂಥೆಟಿಕಲಿ ಜನರೇಟೆಡ್ ಇನ್‌ಫರ್ಮೇಷನ್) ಎಂದು ಹೇಳಲಾಗಿದೆ.

ಅಧಿಸೂಚನೆಯಲ್ಲಿ ಕೃತಕವಾಗಿ ಸೃಷ್ಟಿಸಿದ ಮಾಹಿತಿಯನ್ನು ಈ ರೀತಿ ವ್ಯಾಖ್ಯಾನಿಸಿದೆ: ಕಂಪ್ಯೂಟರ್ ವ್ಯವಸ್ಥೆಯನ್ನು ಬಳಸಿಕೊಂಡು ಕೃತಕವಾಗಿ ಅಥವಾ ಕಂಪ್ಯೂಟಿಂಗ್/ಸೂತ್ರಗಳು/ಗಣನವಿಧಾನದ ಮೂಲಕ (ಆಲ್ಗರಿದಮಿಕಲಿ) ಸೃಷ್ಟಿಸಿದ, ಮಾರ್ಪಡಿಸಿದ ಅಥವಾ ತಿರುಚಿದ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಎರಡನ್ನೂ ಒಳಗೊಂಡ ಮಾಹಿತಿ. ಆ ಮಾಹಿತಿಗಳು ವಾಸ್ತವ, ಅಧಿಕೃತ ಅಥವಾ ನಿಜ ಎಂಬಂತೆ ಬಿಂಬಿತವಾಗಿರುವಂತೆ ಇದ್ದರೆ ಮತ್ತು ಯಾವುದೇ ವ್ಯಕ್ತಿ ನಿಜವಾದ ವ್ಯಕ್ತಿ ಎಂಬಂತೆ ಅಥವಾ ಘಟನೆಯನ್ನು ವಾಸ್ತವ ಜಗತ್ತಿನಲ್ಲಿ ನಡೆದಿರುವ ನೈಜ ಘಟನೆಯಂತೆ ಚಿತ್ರಿಸಲಾಗಿದ್ದರೆ ಅಂತಹದ್ದು ಕೃತಕವಾಗಿ ಸೃಷ್ಟಿಸಿದ ಮಾಹಿತಿಯಾಗುತ್ತದೆ.

ಕಂಪ್ಯೂಟರ್ ವ್ಯವಸ್ಥೆಯ ಮೂಲಕ ಸೃಷ್ಟಿಸಿದ ಮಾಹಿತಿಗಳು ಚಿತ್ರ, ಗ್ರಾಫಿಕ್, ವಿಡಿಯೊ, ಚಲಿಸುತ್ತಾ ಚಿತ್ರೀಕರಿಸಿರುವ ವಿಡಿಯೊ, ಧ್ವನಿ ಮುದ್ರಣ ಅಥವಾ ಬೇರೆ ಯಾವುದೇ ಆಡಿಯೊ, ಆಡಿಯೊ–ವಿಡಿಯೊ ಎರಡನ್ನೂ ಒಳಗೊಂಡ ಅಥವಾ ಆಡಿಯೊ ಇಲ್ಲದೆ ಕೇವಲ ವಿಡಿಯೊ ರೂಪದಲ್ಲಿ ಇರಬಹುದು

## ಯಾವುದಕ್ಕೆಲ್ಲ ವಿನಾಯಿತಿ?

ಒಂದು ವೇಳೆ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಮಾಹಿತಿಗಳು ಕೆಲವು ನಿರ್ದಿಷ್ಟ ಉದ್ದೇಶಗಳ ಕಾರಣಕ್ಕೆ ಸೃಷ್ಟಿಸಿದ್ದರೆ ಅಂತಹ ಮಾಹಿತಿಗಳು 'ಕೃತಕವಾಗಿ ಸೃಷ್ಟಿಸಿದ ಮಾಹಿತಿಗಳು' ಎಂದು ಪರಿಗಣಿತವಾಗುವುದಿಲ್ಲ

- ಸಾಮಾನ್ಯ ಅಥವಾ ಸದುದ್ದೇಶದಿಂದ ಮಾಡಿದ ಎಡಿಟಿಂಗ್, ಇರುವ ಮಾಹಿತಿಯನ್ನು ಸುಧಾರಿಸಲು, ತಾಂತ್ರಿಕ ತಿದ್ದುಪಡಿ, ಬಣ್ಣದ ಹೊಂದಾಣಿಕೆ, ಆಡಿಯೊದಲ್ಲಿರುವ ಅನಗತ್ಯ ಗದ್ದಲವನ್ನು ಕಡಿಮೆ ಮಾಡಲು, ವಿಷಯವನ್ನು ಬದಲಾಯಿಸದ, ನಕಲು ಮಾಡಿದ ಅಥವಾ ಮಾಹಿತಿ, ಸಂದರ್ಭಗಳನ್ನು ತಿದ್ದುಪಡಿ/ತಿರುಚದ ಅಥವಾ ತಪ್ಪಾಗಿ ನಿರೂಪಿಸದ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಮಾಹಿತಿಗಳು
- ಸಾಮಾನ್ಯವಾದ ಅಥವಾ ಒಳ್ಳೆಯ ಉದ್ದೇಶದಿಂದ ಸೃಷ್ಟಿಸಿದ ಮಾಹಿತಿಗಳು ಅಥವಾ ದಾಖಲೆಗಳು, ಪಿಡಿಎಫ್ ದಾಖಲೆಗಳು, ಶೈಕ್ಷಣಿಕ ಅಥವಾ ತರಬೇತಿ ಉದ್ದೇಶದ ವಿಷಯಗಳು, ಸಂಶೋಧನಾ ಫಲಿತಾಂಶಗಳು, ಸಚಿತ್ರ, ಕಲ್ಪಿತ ವಿವರಣೆಗೆ ಬಳಸಿದ ಮಾಹಿತಿಗಳು, ಟೆಂಪ್ಲೇಟ್ ಆಧಾರಿತ ಅಥವಾ ಪರಿಕಲ್ಪನೆ ಆಧಾರಿತ ವಿಷಯಗಳು, ವಿವರಗಳು
- ಆಡಿಯೊ–ವಿಡಿಯೊ ಮಾಹಿತಿಗಳಲ್ಲಿ ಯಾವುದೇ ಭಾಗವನ್ನು ತಿರುಚುವ ಉದ್ದೇಶ ಇಲ್ಲದೇ, ಬಳಕೆಯ ಅವಕಾಶ, ಸ್ಪಷ್ಟತೆ, ಭಾಷಾಂತರ, ವಿವರಣೆ, ಮಾಹಿತಿಗಳ ಹುಡುಕಾಟ ಅಥವಾ ಅನ್ವೇಷಣೆಯನ್ನು ಸುಧಾರಿಸುವುದಕ್ಕಾಗಿ ಕಂಪ್ಯೂಟರ್ ವ್ಯವಸ್ಥೆಯನ್ನು ಬಳಸುವುದಕ್ಕೂ ಈ ನಿಯಮ ಅವಕಾಶ ನೀಡುತ್ತದೆ.

## ಸೆನ್ಸಾರ್‌ಶಿಪ್: ಆಕ್ಷೇಪ



ಪರಿಷ್ಕೃತ ನಿಯಮಗಳಿಗೆ ಆಕ್ಷೇಪವೂ ವ್ಯಕ್ತವಾಗಿದೆ. ಕೇಂದ್ರವು ಡಿಜಿಟಲ್ ಮಾಹಿತಿಗಳನ್ನು ಸೆನ್ಸಾರ್ ಪ್ರಕ್ರಿಯೆಗೆ ಒಳಪಡಿಸಲು ಹೊರಟಿದೆ ಎಂದು ದೂರಲಾಗಿದೆ.

ನಿಯಮಗಳ ಬಗ್ಗೆ ಪ್ರತಿಕ್ರಿಯಿಸಿರುವ ಇಂಟರ್‌ನೆಟ್ ಫ್ರೀಡಂ ಫೌಂಡೇಷನ್, 'ಆಕ್ಷೇಪಾರ್ಹ ಮಾಹಿತಿಗಳನ್ನು ಮೂರು ಗಂಟೆಗಳ ಒಳಗೆ ತೆಗೆದು ಹಾಕಬೇಕು ಎಂದು ಹೇಳಿರುವುದರಿಂದ ಡಿಜಿಟಲ್ ವೇದಿಕೆಗಳಿಗೆ ಆಕ್ಷೇಪಾರ್ಹ ಎಂದು ಹೇಳಲಾದ ಮಾಹಿತಿಗಳನ್ನು ಪರಿಶೀಲನೆಗೆ ಒಳಪಡಿಸುವುದು ಕಷ್ಟವಾಗಬಹುದು. ಹೀಗಾದಲ್ಲಿ ಅವುಗಳು ಸ್ವಯಂಚಾಲಿತವಾಗಿ ಅಂತಹ ವಿಷಯಗಳನ್ನು ತೆಗೆದುಹಾಕುವ ಅಥವಾ ನಿರ್ಬಂಧಿಸುವ ವ್ಯವಸ್ಥೆ ಜಾರಿಗೆ ತರಬಹುದು. ಹಾಗಾದಲ್ಲಿ ಇದು ಸಂವಿಧಾನ ನೀಡಿದ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿದೆ' ಎಂದು ಹೇಳಿದೆ.

ಕೃತಕವಾಗಿ ಸೃಷ್ಟಿಸಿದ ಆಡಿಯೊ–ವಿಡಿಯೊ ಮಾಹಿತಿಗಳನ್ನು ಎಐ ಸೃಷ್ಟಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು ಎಂದು ಸೂಚಿಸಿರುವುದನ್ನು ತಜ್ಞರು ಸ್ವಾಗತಿಸಿದ್ದಾರೆ. ಆದರೆ, ಆಕ್ಷೇಪಾರ್ಹ ವಿಚಾರಗಳನ್ನು ತೆಗೆದು ಹಾಕಲು ನೀಡಿರುವ ಗಡುವನ್ನು 3 ಗಂಟೆಗಳಿಗೆ ಇಳಿಸಿರುವ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಪ್ರಕಟವಾಗಿರುವ ಮಾಹಿತಿಗಳು ತಿರುಚಿದ್ದೇ ಅಥವಾ ಆಕ್ಷೇಪಾರ್ಹವಾಗಿದೆಯೇ ಎಂಬುದನ್ನು ಮನುಷ್ಯರೇ ಪರಿಶೀಲಿಸಬೇಕು. ಆನ್‌ಲೈನ್ ವೇದಿಕೆಗಳಿಗೆ ಈಗ ನೀಡಿರುವ 36 ಗಂಟೆಗಳಲ್ಲೂ ಆ ಕೆಲಸ ಮಾಡಲು ಕಷ್ಟವಾಗುತ್ತಿದೆ. ಹೀಗಿರುವಾಗ 3 ಗಂಟೆಗಳಲ್ಲಿ ತೆಗೆದುಹಾಕುವುದು ಸಾಧ್ಯವಾಗದ ಮಾತು. ಭವಿಷ್ಯದಲ್ಲಿ ಆನ್‌ಲೈನ್ ವೇದಿಕೆಗಳು ಅಂತಹ ಮಾಹಿತಿ ತೆಗೆದುಹಾಕಲು ಸ್ವಯಂಚಾಲಿತ ವ್ಯವಸ್ಥೆ ಜಾರಿಗೆ ತರಬಹುದು. ಇದು ಮಾಹಿತಿಗಳ ಸೆನ್ಸಾರ್‌ಗೆ ಕಾರಣವಾಗಬಹುದು' ಎಂದು ಅವರು ಎಚ್ಚರಿಸಿದ್ದಾರೆ.

Publication Date
12/02/2026

Presented by ಪ್ರಜಾವಾಣಿ

# ರಾಷ್ಟ್ರಗೀತೆಗೂ ಮುನ್ನ ಹಾಡಲು ಆದೇಶ

# ‘ವಂದೇ ಮಾತರಂ’ನ ಎಲ್ಲ 6 ಚರಣ ಹಾಡುವುದು ಕಡ್ಡಾಯ

ಪ್ರಜಾವಾಣಿ ವಾರ್ತೆ/ಪಿಟಿಐ



**ನವದೆಹಲಿ:** ಎಲ್ಲ ಸರ್ಕಾರಿ ಕಾರ್ಯಕ್ರಮಗಳಲ್ಲಿ ‘ವಂದೇ ಮಾತರಂ’ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ. ರಾಷ್ಟ್ರ ಗೀತೆಯೊಂದಿಗೆ ಹಾಡುವುದಿದ್ದಲ್ಲಿ ಮೊದಲಿಗೆ ‘ವಂದೇ ಮಾತರಂ’ ಹಾಡಬೇಕು ಎಂದು ಗೃಹ ಸಚಿವಾಲಯ ಸೂಚಿಸಿದೆ.

‘ವಂದೇ ಮಾತರಂ’ ಹಾಡುವುದಕ್ಕೆ ಮತ್ತು ನುಡಿಸುವುದಕ್ಕೆ ಸಂಬಂಧಿಸಿದಂತೆ ಸಚಿವಾಲಯವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಸಚಿವಾಲಯವು ಜನವರಿ 28ರಂದು ಈ ಸಂಬಂಧ ಆದೇಶ ಹೊರಡಿಸಿದೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಮತ್ತು ರಾಜ್ಯಪಾಲರು ಆಗಮಿಸುವ ವೇಳೆ ಇಲ್ಲವೇ ಕಾಯಕ್ರಮ ಮುಗಿಸಿ ನಿರ್ಗಮಿಸುವ ವೇಳೆ, ಆಕಾಶವಾಣಿ ಮತ್ತು ಟಿ.ವಿಗಳ ಮೂಲಕ ದೇಶವನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಭಾಷಣ ಮಾಡುವುದಕ್ಕೂ ಮೊದಲು ಹಾಗೂ ನಂತರ, ರಾಷ್ಟ್ರ ಧ್ವಜಾರೋಹಣ ಮಾಡುವ ವೇಳೆ ‘ವಂದೇ ಮಾತರಂ’ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾವ ಯಾವ ಸಂದರ್ಭಗಳಲ್ಲಿ ‘ವಂದೇ ಮಾತರಂ’ ಗೀತೆಯನ್ನು ಹಾಡಬೇಕು ಅಥವಾ ಇದನ್ನು ಹಾಡಬೇಕಾದ ಕಾರ್ಯಕ್ರಮಗಳ ಪಟ್ಟಿಯನ್ನು ಒದಗಿಸಲು ಸಾಧ್ಯ ಇಲ್ಲ. ರಾಷ್ಟ್ರ ಗೀತೆಯನ್ನು ಹಾಡುವ ಸಂದರ್ಭಗಳಲ್ಲೆಲ್ಲಾ ‘ವಂದೇ ಮಾತರಂ’ನ ಅಧಿಕೃತ ಶೈಲಿಯಲ್ಲಿ ಹಾಡಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

‘ವಂದೇ ಮಾತರಂ’ ಗೀತೆಗೆ 150 ವರ್ಷ ತುಂಬಿದ ಕಾರಣಕ್ಕೆ ಕಳೆದ ವರ್ಷ ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ವ್ಯಾಪಕ ಚರ್ಚೆಗಳು ನಡೆದಿದ್ದವು. ಈಗ, ‘ವಂದೇ ಮಾತರಂ’ ಗೀತೆಯನ್ನು ಪೂರ್ಣವಾಗಿ ಹಾಡುವುದಕ್ಕೆ ಸಂಬಂಧಿಸಿ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಕೈಗೊಂಡಿದ್ದ ನಿರ್ಧಾರದಂತೆ ಪ್ರಸ್ತುತ, ‘ವಂದೇ ಮಾತರಂ’ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿದೆ. ಈ ಗೀತೆ ಕುರಿತು ಸಂವಿಧಾನ ರಚನಾ ಸಭೆಯಲ್ಲಿಯೂ ಚರ್ಚೆ ನಡೆದಿತ್ತು. ಇದರಲ್ಲಿ ‘ಕೋಮುವಾದಿ’ ಅಂಶಗಳಿವೆ ಎಂದು ಒಂದು ವರ್ಗದ ಜನರಿಂದ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ, ಈ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವ ಕುರಿತು ಸಭೆಯಲ್ಲಿಯೂ ಆಗ ನಿರ್ಣಯ ಕೈಗೊಳ್ಳಲಾಗಿತ್ತು.

## ಆದೇಶದ ಪ್ರಮುಖ ಅಂಶಗಳು

- ‘ವಂದೇ ಮಾತರಂ’ ಅನ್ನು ಅಧಿಕೃತ ಶೈಲಿಯಲ್ಲಿ ಹಾಡುವುದಕ್ಕೆ ಅಂದಾಜು 3 ನಿಮಿಷ 10 ಸೆಕೆಂಡುಗಳು ಬೇಕು. ಈ ಗೀತೆಯನ್ನು ಹಾಡುವ/ನುಡಿಸುವ ವೇಳೆ ಸಭಿಕರು/ಪ್ರೇಕ್ಷಕರು ಎದ್ದು ನಿಂತು ಗೌರವ ಸಲ್ಲಿಸಬೇಕು
- ಯಾವುದೇ ನ್ಯೂಸ್‌ರೀಲ್ ಅಥವಾ ಸಾಕ್ಷ್ಯಚಿತ್ರ ಇಲ್ಲವೇ ಚಲನಚಿತ್ರದ ಪ್ರದರ್ಶನದ ವೇಳೆ ‘ವಂದೇ ಮಾತರಂ’ ಗೀತೆಯನ್ನು ಬಿತ್ತರಿಸುತ್ತಿದ್ದರೆ, ಪ್ರೇಕ್ಷಕರು ನಿಲ್ಲುವ ಅಗತ್ಯ ಇಲ್ಲ. ಈ ರೀತಿ ಮಾಡುವುದರಿಂದ ಚಿತ್ರದ ಪ್ರದರ್ಶನಕ್ಕೆ ಅಡ್ಡಿಯನ್ನುಂಟು ಮಾಡಿದಂತಾಗಲಿದೆ. ಅಲ್ಲದೇ, ಈ ಗೀತೆಗೆ ಗೌರವ ತರುವುದಕ್ಕಿಂತ ಗೊಂದಲಕ್ಕೆ ಕಾರಣವಾಗುವುದು
- ರಾಷ್ಟ್ರ ಗೀತೆ ಮತ್ತು ‘ವಂದೇ ಮಾತರಂ’ ನುಡಿಸುವ/ಹಾಡುವ ವಿಚಾರ ಬಂದಾಗ, ಮೊದಲಿಗೆ ‘ವಂದೇ ಮಾತರಂ’ ಹಾಡಬೇಕು ಇಲ್ಲವೇ ನುಡಿಸಬೇಕು
- ‘ವಂದೇ ಮಾತರಂ’ ಹಾಡುವುದರೊಂದಿಗೆ ಶಾಲಾ ಚಟುವಟಿಕೆಗಳು ಆರಂಭಿಸಬೇಕು. ಶಾಲೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ರಾಷ್ಟ್ರ ಗೀತೆ ಮತ್ತು ‘ವಂದೇ ಮಾತರಂ’ ಹಾಡುವುದನ್ನು ಜನಪ್ರಿಯಗೊಳಿಸುವುದಕ್ಕೆ ಶಾಲಾ ಆಡಳಿತಗಳು ಕ್ರಮ ತೆಗೆದುಕೊಳ್ಳಬೇಕು
- ಸಚಿವರು ಪಾಲ್ಗೊಳ್ಳುವ ಸಮಾರಂಭಗಳಲ್ಲಿ ಕೂಡ ‘ವಂದೇ ಮಾತರಂ’ ಹಾಡುವುದಕ್ಕೆ ಒತ್ತು ನೀಡಬೇಕು. ಇಂತಹ ಕಾರ್ಯಕ್ರಮಗಳಲ್ಲಿ ಸಾಮೂಹಿಕವಾಗಿ ಹಾಡುವುದು ಅಪೇಕ್ಷಣೀಯ
- ಸಭಾಂಗಣದಂತಹ ಸ್ಥಳಗಳಲ್ಲಿ ಎಲ್ಲರೂ ಒಟ್ಟಿಗೆ ಹಾಡುವುದಕ್ಕೆ ಅನುಕೂಲವಾಗುವಂತೆ ಧ್ವನಿವರ್ಧಕ ವ್ಯವಸ್ಥೆ ಇರಬೇಕು. ಅಗತ್ಯ ಕಂಡುಬಂದಲ್ಲಿ, ‘ವಂದೇ ಮಾತರಂ’ ಗೀತೆಯ ಮುದ್ರಿತ ಪ್ರತಿಗಳನ್ನು ಸಭಿಕರಿಗೆ/ಪ್ರೇಕ್ಷಕರಿಗೆ ಹಂಚಬೇಕು
- ತಾಯ್ನಾಡಿಗೆ ಗೌರವ ತೋರುವುದಕ್ಕಾಗಿ ಹಾಗೂ ಸಮರ್ಪಕ ಶಿಷ್ಟಾಚಾರ ಪಾಲನೆಯೊಂದಿಗೆ ‘ವಂದೇ ಮಾತರಂ’ ಅನ್ನು ಸಾಮೂಹಿಕವಾಗಿ ಹಾಡಬಹುದು. ಈ ವೇಳೆ, ಅದರ ಘನತೆಗೆ ಚ್ಯುತಿಯಾಗದಂತೆ ನೋಡಿಕೊಳ್ಳಬೇಕು

Publication Date
12/02/2026

Presented by ಪ್ರಜಾವಾಣಿ
IAS/KAS Academy

# ‘ದ್ವಿದಳ ಧಾನ್ಯ’ ಕೈಬಿಟ್ಟ ಅಮೆರಿಕ

## ಭಾರತದೊಂದಿಗಿನ ವ್ಯಾಪಾರ ಒಪ್ಪಂದ: ಪರಿಷ್ಕೃತ ಫ್ಯಾಕ್ಟ್ ಶೀಟ್ ಪ್ರಕಟ

ಪ್ರಜಾವಾಣಿ ವಾರ್ತೆ/ ಪಿಟಿಐ



**ವಾಷಿಂಗ್ಟನ್ / ನವದೆಹಲಿ:** ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದಂತೆ ಟ್ರಂಪ್ ಆಡಳಿತವು ಮಂಗಳವಾರ, ಒಪ್ಪಂದದ ರೂಪುರೇಷೆ ಒಳಗೊಂಡ ಪರಿಷ್ಕೃತ ಫ್ಯಾಕ್ಟ್‌ಶೀಟ್ ಪ್ರಕಟಿಸಿದೆ.

ಸುಂಕ ಕಡಿತಗೊಳಿಸಿ ಅಥವಾ ಸುಂಕ ರಹಿತವಾಗಿ ಭಾರತವು ಆಮದು ಮಾಡಿಕೊಳ್ಳಲಿದೆ ಎಂದು ಅಮೆರಿಕ ಹೇಳಿದ್ದ ಕೃಷಿ ಉತ್ಪನ್ನಗಳ ಪಟ್ಟಿಯಲ್ಲಿ ‘ದ್ವಿದಳ ಧಾನ್ಯ’ವನ್ನು ಕೈಬಿಡಲಾಗಿದೆ.

ಫೆಬ್ರುವರಿ 9ರಂದು ಶ್ವೇತಭವನ ಪ್ರಕಟಿಸಿದ್ದ ಫ್ಯಾಕ್ಟ್‌ಶೀಟ್‌ನಲ್ಲಿ, ಅಮೆರಿಕದಿಂದ ಸುಂಕ ಕಡಿತವಾಗಿ ಅಥವಾ ಸುಂಕ ರಹಿತವಾಗಿ ಭಾರತದ ಮಾರುಕಟ್ಟೆ ಪ್ರವೇಶಿಸಲಿರುವ ಕೃಷಿ ಉತ್ಪನ್ನಗಳಲ್ಲಿ ಮುಖ್ಯವಾಗಿ ‘ದ್ವಿದಳ ಧಾನ್ಯ’ವನ್ನು ಉಲ್ಲೇಖಿಸಲಾಗಿತ್ತು.

ಪರಿಷ್ಕೃತ ಫ್ಯಾಕ್ಟ್‌ಶೀಟ್‌ನಲ್ಲಿ ಡಿಸ್ಟಿಲರ್ಸ್ ಧಾನ್ಯಗಳು (ಡಿಡಿಜಿಎಸ್), ಕೆಂಪು ಜೋಳ, ಡ್ರೈಫ್ರೂಟ್‌ಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಮದ್ಯವನ್ನು ಹಾಗೆಯೇ ಉಳಿಸಿಕೊಂಡು, ‘ದ್ವಿದಳ ಧಾನ್ಯ’ ಮತ್ತು ‘ಇತರ ಕೃಷಿ ಉತ್ಪನ್ನ’ಗಳನ್ನು ತೆಗೆದುಹಾಕಲಾಗಿದೆ. ಜತೆಗೆ, ಈ ಉತ್ಪನ್ನಗಳನ್ನು ಖರೀದಿಸಲು ಭಾರತ ‘ಬದ್ಧ’ವಾಗಿದೆ ಎಂಬ ಪದವನ್ನು ಕೈಬಿಟ್ಟು, ಖರೀದಿಸಲು ‘ಬಯಸಿದೆ’ ಎಂದು ಬದಲಿಸಲಾಗಿದೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಫ್ಯಾಕ್ಟ್ ಶೀಟ್ ಅನ್ನು ಶ್ವೇತಭವನ ಪ್ರಕಟಿಸಿತ್ತು. ‘ಭಾರತವು ಅಮೆರಿಕದಿಂದ ಮುಂದಿನ 5 ವರ್ಷಗಳ ಅವಧಿಗೆ, ಇಂಧನ, ವಿಮಾನ ಮತ್ತು ವಿಮಾನದ ಬಿಡಿಭಾಗಗಳು, ಅಮೂಲ್ಯ ಲೋಹಗಳು, ಸಾಫ್ಟ್‌ವೇರ್, ಹಾರ್ಡ್‌ವೇರ್, ಡಿಜಿಟಲ್ ಉಪಕರಣಗಳು, ಕಲ್ಲಿದ್ದಲನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದೆ’ ಎಂದು ಉಭಯ ದೇಶಗಳ ಜಂಟಿ ಪ್ರಕಟಣೆ ತಿಳಿಸಿತ್ತು.

ಆದರೆ, ಪರಿಷ್ಕೃತ ಫ್ಯಾಕ್ಟ್‌ಶೀಟ್ ನಲ್ಲಿ, ಅಮೆರಿಕದಿಂದ ಇಂಧನ, ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ, ಕಲ್ಲಿದ್ದಲು, ಕೃಷಿ ಮತ್ತು ಇತರೆ ವಲಯಗಳ ಉತ್ಪನ್ನಗಳು ಸೇರಿ ಒಟ್ಟು 500 ಬಿಲಿಯನ್ ಡಾಲರ್‌ಗಿಂತ (ಸರಿಸುಮಾರು ₹45.28 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ಸರಕುಗಳನ್ನು ಖರೀದಿಸಲು ಭಾರತ ಉದ್ದೇಶಿಸಿದೆ. ಎಲ್ಲ ಕೈಗಾರಿಕಾ ಸರಕುಗಳು, ವಿಶಾಲ ಶ್ರೇಣಿಯ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಭಾರತ ಕಡಿಮೆ ಮಾಡಬಹುದು ಅಥವಾ ತೆಗೆದುಹಾಕಬಹುದು ಎಂದು ಹೇಳಲಾಗಿದೆ. ಅಂತಿಮ ಒಪ್ಪಂದದಲ್ಲಿ ಅಮೆರಿಕವು ಭಾರತಕ್ಕೆ ಸುಂಕ ರಹಿತವಾಗಿ ರಫ್ತು ಮಾಡುವ ಸರಕುಗಳ ಪಟ್ಟಿಯನ್ನು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

### ‘ಸೀಮಿತಗೊಳಿಸುತ್ತೇವೆ’

‘ಅಮೆರಿಕದ ಕೃಷಿ ಉತ್ಪನ್ನಗಳ ಭಾರತ ಮಾರುಕಟ್ಟೆ ಪ್ರವೇಶವನ್ನು ಸೀಮಿತಗೊಳಿಸುತ್ತೇವೆ. ಅದಕ್ಕಾಗಿ, ಸುಂಕ ನಿರ್ಧರಿಸುವಾಗ ನಮ್ಮದೇ ಕಾರ್ಯವಿಧಾನ ಬಳಸುತ್ತೇವೆ. ಹಾಗಾಗಿ ಇದು ನಮ್ಮ ಕೃಷಿಕರ ಮೇಲೆ ಪರಿಣಾಮ ಬೀರುವುದಿಲ್ಲ’ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ.

ಭಾರತ–ಅಮೆರಿಕ ನಡುವಿನ ಅಂತಿಮ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್ ಅಂತ್ಯದ ವೇಳೆಗೆ ಸಹಿ ಹಾಕುವ ಸಾಧ್ಯತೆ ಇದೆ ಎಂದಿದ್ದಾರೆ.

### ನಕ್ಷೆ ಅಳಿಸಿ ಹಾಕಿದ ಯುಎಸ್‌ಟಿಆರ್

ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಸೇರಿದಂತೆ ಜಮ್ಮು ಮತ್ತು ಕಾಶ್ಮೀರದ ಸಂಪೂರ್ಣ ಪ್ರದೇಶ ಹಾಗೂ ಅಕ್ಸಾಯ್ ಚಿನ್ ಅನ್ನು ಭಾರತದ ಭಾಗವಾಗಿ ತೋರಿಸಿದ ನಕ್ಷೆಯನ್ನು ಅಮೆರಿಕದ ವ್ಯಾಪಾರ ಪ್ರತಿನಿಧಿ ಕಚೇರಿ (ಯುಎಸ್‌ಟಿಆರ್) ‘ಎಕ್ಸ್’ ಪೋಸ್ಟ್‌ನಿಂದ ತೆಗೆದುಹಾಕಿದೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ, ಯುಎಸ್‌ಟಿಆರ್ ಈ ನಕ್ಷೆಯೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಒಪ್ಪಂದ ಮಾಹಿತಿ ಹಂಚಿಕೊಂಡಿತ್ತು. ಇದೀಗ ನಕ್ಷೆಯನ್ನು ಯುಎಸ್‌ಟಿಆರ್‌ನ ‘ಎಕ್ಸ್’ ಹ್ಯಾಂಡಲ್‌ನಿಂದ ಅಳಿಸಿ ಹಾಕಲಾಗಿದೆ.

ಈ ಹಿಂದೆಯೆಲ್ಲಾ, ಪಿಒಕೆ ಮತ್ತು ಅಕ್ಸಾಯ್ ಚಿನ್ ಪ್ರದೇಶವನ್ನು ಪ್ರತ್ಯೇಕವಾಗಿ ತೋರಿಸುವ ರೇಖೆಯೊಂದಿಗೆ ಭಾರತದ ನಕ್ಷೆಯನ್ನು ಪ್ರಕಟಿಸಿತ್ತು.

Publication Date
12/02/2026

Presented by ಪ್ರಜಾವಾಣಿ

# ಎಂಎಸ್‌ಎಂಇ ಉದ್ದಿಮೆಗಳಿಗೆ ಚಿನ್ನದ ಸಾಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಎಸ್‌ಎಂಇ ವಲಯದ ಉದ್ಯಮಗಳಿಗಾಗಿ ಎಕ್ಸಿಸ್ ಬ್ಯಾಂಕ್ ಚಿನ್ನದ ಸಾಲ ಯೋಜನೆ ಆರಂಭಿಸಿದೆ. ಸಣ್ಣ ಉದ್ದಿಮೆಗಳು ತಮ್ಮಲ್ಲಿನ ಚಿನ್ನವನ್ನು ಆಧಾರವಾಗಿ ಬಳಸಿ ಈ ಯೋಜನೆಯ ಅಡಿ ಒ.ಡಿ. ಸೌಲಭ್ಯ ಪಡೆಯಬಹುದು.

ಅತ್ಯಂತ ಕಡಿಮೆ ದಾಖಲೆಗಳನ್ನು ಪಡೆದು ಈ ಸಾಲ ನೀಡಲಾಗುತ್ತದೆ. ಅರ್ಹ ಗ್ರಾಹಕರು ಒಂದೇ ದಿನದಲ್ಲಿ ಸಾಲ ಪಡೆದುಕೊಳ್ಳಬಹುದು, ಹಣವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ. ಕನಿಷ್ಠ ₹50 ಸಾವಿರದಿಂದ ₹1 ಕೋಟಿಯವರೆಗೆ ಸಾಲ ನೀಡಲಾಗುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

Publication Date
12/02/2026

Presented by ಪ್ರಜಾವಾಣಿ

## ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಚಿವೆ ನಿರ್ಮಲಾ

# 2026–27ರಲ್ಲಿ ₹53 ಲಕ್ಷ ಕೋಟಿ ವೆಚ್ಚ

ನವದೆಹಲಿ (ಪಿಟಿಐ): 2026–27ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ ಆಗುವ ವೆಚ್ಚಗಳ ಒಟ್ಟು ಮೊತ್ತವು ₹53.47 ಲಕ್ಷ ಕೋಟಿಯಾಗಲಿದೆ ಎಂಬ ಅಂದಾಜು ಮಾಡಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ ಬುಧವಾರ ತಿಳಿಸಿದರು.

ಇದು ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಹಣಕಾಸು ವರ್ಷದಲ್ಲಿನ ವೆಚ್ಚಕ್ಕೆ ಹೋಲಿಸಿದರೆ ಶೇ 7.7ರಷ್ಟು ಹೆಚ್ಚು.

ಪರಿಷ್ಕೃತ ಅಂದಾಜಿನ ಪ್ರಕಾರ ಪ್ರಸಕ್ತ ಹಣಕಾಸು ವರ್ಷದ ಬಜೆಟ್ ಗಾತ್ರವು ₹49.64 ಲಕ್ಷ ಕೋಟಿ. ಇದು 2025ರ ಫೆಬ್ರುವರಿಯಲ್ಲಿ ಮಾಡಿದ್ದ ಅಂದಾಜು ಮೊತ್ತವಾದ ₹50.65 ಲಕ್ಷ ಕೋಟಿಗೆ ಹೋಲಿಸಿದರೆ ಕಡಿಮೆ. 2024–25ನೇ ಸಾಲಿನಲ್ಲಿ ₹46.52 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು.

2026–27ನೇ ಸಾಲಿನ ವೆಚ್ಚಗಳ ಅಂದಾಜು ಕೇಂದ್ರ ಸರ್ಕಾರದ ತೆರಿಗೆ ವರಮಾನಗಳಿಗಿಂತ ಹೆಚ್ಚು ಎಂದು ನಿರ್ಮಲಾ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವ ಸಂದರ್ಭದಲ್ಲಿ ತಿಳಿಸಿದರು. ತೆರಿಗೆ ವರಮಾನದ ಮೂಲಕ ಒಟ್ಟು ₹44.04 ಲಕ್ಷ ಕೋಟಿ ಸಂಗ್ರಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಈ ಬಾರಿ ಬಜೆಟ್‌ನಲ್ಲಿ ಬಂಡವಾಳ ವೆಚ್ಚಗಳಿಗೆ ನಿಗದಿ ಮಾಡಿರುವ ₹12.2 ಲಕ್ಷ ಕೋಟಿಯು ಈವರೆಗಿನ ಅತಿಹೆಚ್ಚಿನ ಮೊತ್ತ ಎಂದರು.

2026–27ರಲ್ಲಿ ವಿತ್ತೀಯ ಕೊರತೆಯು ₹16.95 ಲಕ್ಷ ಕೋಟಿ ಆಗಲಿದೆ ಎಂದು ಅಂದಾಜು ಮಾಡಲಾಗಿದೆ. ಮಾರುಕಟ್ಟೆಯಿಂದ ಸಾಲ ಪಡೆಯುವ ಮೂಲಕ ₹11.7 ಲಕ್ಷ ಕೋಟಿ ಸಂಗ್ರಹಿಸಲಾಗುತ್ತದೆ. ಇನ್ನುಳಿದ ಮೊತ್ತವು ಸಣ್ಣ ಉಳಿತಾಯ ಯೋಜನೆಗಳಿಂದ ಹಾಗೂ ಇತರ ಮೂಲಗಳಿಂದ ಬರಲಿದೆ.

Publication Date
12/02/2026

Presented by ಪ್ರಜಾವಾಣಿ

## ಭಾರತದ ಪದಕಗಳ ಸಂಖ್ಯೆ 75ಕ್ಕೆ ಏರಿಕೆ

# ಏಷ್ಯನ್ ಶೂಟಿಂಗ್: ಅನೀಶ್‌ಗೆ ಕಂಚು

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅನೀಶ್ ಭನ್ವಾಲಾ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್ ಪುರುಷರ 25 ಮೀಟರ್ ರ್‍ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು.

ಕಜಾಕಸ್ತಾನದ ಶೂಟರ್‌ಗಳು ಸ್ಪರ್ಧೆಯ ಎಂಟನೇ ದಿನವಾದ ಬುಧವಾರ ನಾಲ್ಕು ಚಿನ್ನದ ಪದಕಗಳೊಂದಿಗೆ ಪ್ರಾಬಲ್ಯ ಮೆರೆದರು. ಹರಿಯಾಣದ 23 ವರ್ಷದ ಅನೀಶ್ ಕೂಟದಲ್ಲಿ ಮೂರನೇ ಪದಕ ಗೆದ್ದರು.



ಕಂಚು ಗೆದ್ದ ಅನೀಶ್ ಭನ್ವಾಲಾ

ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನ ಗಳಿಸಿದ್ದ ಅನೀಶ್ (23) ಫೈನಲ್‌ನಲ್ಲಿ ನಿಖರ ಗುರಿಯಿಟ್ಟು ಮೂರನೇ ಸ್ಥಾನ ಪಡೆದರು. ವಿಶ್ವಕಪ್ ಚಾಂಪಿಯನ್ ಜಪಾನಿನ ಡೈ ಯೋಶಿಯೋಕಾ (31) ವಿಶ್ವ ಮತ್ತು ಏಷ್ಯನ್ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು. ಮಾಜಿ ಚಾಂಪಿಯನ್ ಕಜಾಕಸ್ತಾನದ ನಿಕಿತಾ ಚಿರ್ಯುಕಿನ್ (28) ಬೆಳ್ಳಿ ತಮ್ಮದಾಗಿಸಿಕೊಂಡರು.

ಇದಕ್ಕೂ ಮೊದಲು ಕಜಾಕಸ್ತಾನದ ರೈಫಲ್ ಶೂಟರ್ ಇಸ್ಲಾಂ ಸತ್ಪಾಯೆವ್ (622.5) ಅವರು 50 ಮೀ. ರೈಫಲ್ ಪ್ರೋನ್ ಪುರುಷರ ಸ್ಪರ್ಧೆಗಳಲ್ಲಿ ಅವಳಿ ಚಿನ್ನದ ಸಾಧನೆ ಮಾಡಿದರು. ಅವರು ವೈಯಕ್ತಿಕ ಮತ್ತು ತಂಡ ವಿಭಾಗದಲ್ಲಿ ಸ್ವರ್ಣ ಗೆದ್ದರು. ವೈಯಕ್ತಿಕ ಸ್ಪರ್ಧೆಯಲ್ಲಿ ಅವರದೇ ದೇಶದ ನಿಕಿತಾ ಶಕ್ತೋರಿನ್ (622.5), ಭಾರತದ ಬಾಬು ಸಿಂಗ್ ಪನ್ವಾರ್ (621.3) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪನ್ವಾರ್ ಅವರು ಸಮರವೀರ್ ಸಿಂಗ್ ಮತ್ತು ಸರ್ತಾಜ್ ಸಿಂಗ್ ತಿವಾನಾ ಅವರೊಂದಿಗೆ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಜೂನಿಯರ್ ಪುರುಷರ 50 ಮೀ. ರೈಫಲ್ ಪ್ರೋನ್ (ಅಂಗಾತ ಸ್ಥಿತಿಯಲ್ಲಿ ಶೂಟ್ ಮಾಡುವ) ಸ್ಪರ್ಧೆಯಲ್ಲಿ ಅಡ್ರಿಯನ್ ಕರ್ಮಾಕರ್ ಚಿನ್ನದ ಸಾಧನೆ ಮೆರೆದರೆ, 25 ಮೀ. ಆರ್‌ಎಫ್‌ಪಿ ಸ್ಪರ್ಧೆಯಲ್ಲಿ ಆತಿಥೇಯ ತಂಡ ಸ್ವರ್ಣ ಗೆದ್ದಿತು. ಇನ್ನೂ ಎರಡು ದಿನಗಳ ಸ್ಪರ್ಧೆಗಳು ಬಾಕಿ ಇರುವಾಗ ಭಾರತ 75 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಅದರಲ್ಲಿ 41 ಚಿನ್ನ, 19 ಬೆಳ್ಳಿ ಮತ್ತು 15 ಕಂಚು ಒಳಗೊಂಡಿವೆ.

Publication Date
12/02/2026

Presented by ಪ್ರಜಾವಾಣಿ

## ❖ 114 ರಫೇಲ್ ಖರೀದಿಗೆ ಅಸ್ತು

**ಸಂದರ್ಭ: ದೇಶದ ರಕ್ಷಣಾ ಪಡೆಗಳ ಯುದ್ಧ ಸನ್ನದ್ಧತೆ ವೃದ್ಧಿಸುವ ನಿಟ್ಟಿನಲ್ಲಿ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವುದಕ್ಕೆ ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದೆ.**

- ಫ್ರಾನ್ಸ್‌ನ ಡಾಸೊ ಏವಿಯೇಷನ್ ಕಂಪನಿ ತಯಾರಿಸುವ ಈ ಯುದ್ಧ 4 ವಿಮಾನಗಳನ್ನು ಖರೀದಿಸುವ ಪ್ರಸ್ತಾವಕ್ಕೆ ಬಹಳ ವರ್ಷಗಳಿಂದ ಅನುಮೋದನೆ ಸಿಕ್ಕಿರಲಿಲ್ಲ. ಈಗ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಪರಿಷತ್ತು (ಡಿಎಸಿ) ಈ ಖರೀದಿಗೆ ಅನುಮೋದನೆ ನೀಡಿದೆ. ಪ್ರಸ್ತಾವಕ್ಕೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಅಂತಿಮ ಮುದ್ರೆ ಒತ್ತುವುದು ಬಾಕಿ ಇದೆ.

**<u>'ರಕ್ಷಣೆ, ದಾಳಿ ಸಾಮರ್ಥ್ಯ ಹೆಚ್ಚಳ'</u>**

- 'ಬಹು ಕಾರ್ಯ ಯುದ್ಧ-ವಿಮಾನ'ವಾದ (ಎಂಆರ್‌ಎಫ್‌ಎ) ರಫೇಲ್ ಜೊತೆಗೆ, ಕ್ಷಿಪಣಿ ವ್ಯವಸ್ಥೆಗಳು ಹಾಗೂ ಎಎಸ್-ಎಚ್‌ಎಪಿಎಸ್(ಏ. ರ್-ಶಿಪ್ ಬೇಸ್ಡ್ ಹೈ ಅಲ್ಟಿಟ್ಯೂಡ್ ಸೂಡೊ ಸೆಟಲೈಟ್) ವ್ಯವಸ್ಥೆ ಖರೀದಿಗೆ ಡಿಎಸಿ ಅನುಮೋದಿಸಿದೆ. ಇವುಗಳನ್ನು ಹೊಂದುವುದರಿಂದ ವಾಯುಪ್ರದೇಶ ರಕ್ಷಣೆ ವಿಚಾರದಲ್ಲಿ ಪ್ರಾಬಲ್ಯ ಸಾಧಿಸಲು ವಾಯುಪಡೆಗೆ ಸಾಧ್ಯವಾಗಲಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.
- 'ಬಹುತೇಕ ವಿಮಾನಗಳನ್ನು ರಫೇಲ್ ಯುದ್ಧ ಭಾರತದಲ್ಲಿಯೇ ತಯಾರಿಸಲಾಗುತ್ತದೆ. ಕ್ಷಿಪಣಿ ವ್ಯವಸ್ಥೆಗಳು ನೆಲದ ಮುಖಾಂತರ ನಡೆಯುವ ದಾಳಿಯನ್ನು ತಡೆಗಟ್ಟುವಲ್ಲಿನ ಸನ್ನದ್ಧತೆ ಯನ್ನು ಹೆಚ್ಚಿಸಲಿವೆ. ಈ ಅಯುಧಗಳು ಅತ್ಯಂತ ನಿಖರ ಹಾಗೂ ಆಳವಾಗಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ' ಎಂದು ಹೇಳಿದೆ.
- 'ಎಎಸ್-ಎಚ್‌ಎಪಿಎಸ್‌ಗಳನ್ನು ಬೇಹುಗಾರಿಕೆ, ಕಣ್ಗಾವಲು, ಮಿಲಿಟರಿ ಸಂವಹನ ಹಾಗೂ ದೂರಸಂವೇದಿ ಕಾರ್ಯಕ್ಕೆ ಬಳಸಿಕೊಳ್ಳಲಾಗುವುದು ಎಂದು ತಿಳಿಸಿದೆ. ಸೇನೆಗೆ 'ವೈಭವ್' ಎಂಬ ಟ್ಯಾಂಕ್ ನಿರೋಧಕ ಸಾಧನಗಳನ್ನು, ಟಿ 72 ಟ್ಯಾಂಕ್‌ಗಳು, ಇನ್‌ಫ್ಯಾಂಟ್ರಿ ಕಂಬ್ಯಾಟ್ ವೆಹಿಕಲ್(ಬಿಎಂಪಿ 2) ಹಾಗೂ ಎಆರ್‌ವಿಯಂತಹ ಅತ್ಯಾಧುನಿಕ ಆಯುಧಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.
- ಶತ್ರು ಪಾಳಯದ ಟ್ಯಾಂಕ್‌ಗಳು ಮುನ್ನುಗ್ಗುವುದಕ್ಕೆ ಪ್ರತಿರೋಧ ಒಡ್ಡುವುದಕ್ಕೆ 'ವೈಭವ್' ಸಾಧನಗಳನ್ನು ಬಳಸಲಾಗುತ್ತದೆ. ಇನ್ನು ಎಆರ್‌ವಿ, ಟಿ-72 ಟ್ಯಾಂಕ್ ಹಾಗೂ ಬಿಎಂಪಿ-2 ಶಸ್ತ್ರಾಸ್ತ್ರಗಳು ಸೇನೆಯ ಕಾರ್ಯಾಚರಣೆಗೆ ಬಲ ತುಂಬಲಿವೆ ಎಂದು ಸಚಿವಾಲಯ ತಿಳಿಸಿದೆ.
- ಭಾರತೀಯ ನೌಕಾಪಡೆಗೆ, ವಿದ್ಯುತ್ ಉತ್ಪಾದನೆಗೆ ನೆರವಾಗಬಲ್ಲ ಎಂಡಬ್ಲು ಮರೀನ್ ಗ್ಯಾಸ್ ಟರ್ಬೈನ್ ಅಧಾರಿತ 4 ಜನರೇಟರ್‌ಗಳು, ಪಿ8ಐ ಯುದ್ಧವಿಮಾನ ಖರೀದಿಗೂ ಡಿಎಸಿ ಅನುಮೋದಿಸಿದೆ. ಈ ಜನರೇಟರ್‌ಗಳ ಸೇರ್ಪಡೆಯಿಂದ ವಿದ್ಯುತ್ ಉತ್ಪಾದನೆ ಯಲ್ಲಿ ಸ್ವಾಲಂಬನೆ ಸಾಧ್ಯವಾಗಲಿದ್ದು, ವಿದೇಶಿ ತಯಾರಕರ ರಕರ ಮೇಲಿನ ಅವಲಂಬನೆಯೂ ಕಡಿಮೆಯಾಗಲಿದೆ ಎಂದು ಹೇಳಿದೆ. ಯುದ್ಧತಂತ್ರದ ವಿಚಾರದಲ್ಲಿ 'ಪಿ8ಐ' ಯುದ್ಧವಿಮಾನ ನಿರ್ಣಾಯಕ ಪಾತ್ರ ವಹಿಸಲಿದೆ ಎಂದೂ ಸಚಿವಾಲಯ ತಿಳಿಸಿದೆ.

## ❖ 8 ಡಾರ್ನಿಯರ್ ಖರೀದಿ: ಎಚ್‌ಎಎಲ್ ಜೊತೆ ಒಪ್ಪಂದ

- ಭಾರತೀಯ ಕರಾವಳಿ ರಕ್ಷಣಾ ಪಡೆಗೆ (ಐಸಿಜಿ) ₹2.300ಕೋಟಿಗೂ ಅಧಿಕ ವೆಚ್ಚದಲ್ಲಿ ಡಾರ್ನಿಯರ್-228 ಯುದ್ಧವಿಮಾನಗಳನ್ನು ಖರೀದಿಸಲು ಸಾರ್ವಜನಿಕ ವಲಯದ ಪ್ರಮುಖ ಕಂಪನಿ ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ (ಎಚ್.ಎಎಲ್) ಜೊತೆ ರಕ್ಷಣಾ ಸಚಿವಾಲಯಗುರುವಾರ ಒಪ್ಪಂದಕ್ಕೆ ಸಹಿ ಹಾಕಿದೆ.
- ದೇಶದ ಕರಾವಳಿ ಉದ್ದಕ್ಕೂ ಕಣ್ಗಾವಲು ಹಾಗೂ ರಕ್ಷಣಾ ಕಾರ್ಯಕ್ಕಾಗಿ 35ಕ್ಕೂ ಅಧಿಕ ಡಾರ್ನಿಯರ್ ಯುದ್ಧವಿಮಾನಗಳನ್ನು ಐಸಿಜಿ ನಿಯೋಜಿಸಿದೆ

Dr. Rajkumar IAS/KAS Academy

## ❖ ಕೈಗಾರಿಕಾ ಸಂಬಂಧ ಸಂಹಿತೆ ಮಸೂದೆ ಅಂಗೀಕಾರ

**ಸಂದರ್ಭ: ಕೈಗಾರಿಕಾ ಸಂಬಂಧ ಸಂಹಿತೆ (ತಿದ್ದುಪಡಿ) ಮಸೂದೆ- 2026 ಅನ್ನು ಸಂಸತ್ತಿನ ಉಭಯ ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಂಗೀಕಾರವಾಯಿತು.**

- 2020ರ ಕೈಗಾರಿಕಾ ಸಂಬಂಧ ಸಂಹಿತೆಯಿಂದ ಬದಲಾಯಿಸಲಾದ ಕೆಲ ಕಾನೂನುಗಳ ನಿರಂತರತೆ ಕುರಿತು ಭವಿಷ್ಯದಲ್ಲಿ ಅನಗತ್ಯ ತೊಡಕುಗಳು ಉಂಟಾಗುವುದನ್ನು ತಪ್ಪಿಸಲು ಈ ಮಸೂದೆ ನೆರವಾಗುತ್ತದೆ ಎಂದು ಕಾರ್ಮಿಕ ಸಚಿವ ಮನುಖ್ ಮಾಂಡವಿಯಾ ತಿಳಿಸಿದರು.
- ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಈ ಮಸೂದೆ ಅಂಗೀಕಾರವಾಯಿತು.

## ❖ ಜನವರಿಯಲ್ಲಿ ಹಣದುಬ್ಬರ ಶೇ 2.75

### ಹಣದುಬ್ಬರ ಅಳೆಯಲು 2024 ಅನ್ನು ಮೂಲ ವರ್ಷ ಆಗಿಸಿಕೊಂಡ ಹೊಸ ಕ್ರಮ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇಕಡ 2.75ರಷ್ಟು ಆಗಿದೆ. ಈ ಬಾರಿಯಿಂದ ಸೂಚ್ಯಂಕಕ್ಕೆ 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಳ್ಳಲಾಗುತ್ತದೆ.



ಚಿಲ್ಲರೆ ಹಣದುಬ್ಬರ ಅಳೆಯಲು 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿಸಿಕೊಂಡ ಹೊಸ ಕ್ರಮವನ್ನು ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಗುರುವಾರ ಅನಾವರಣ ಮಾಡಿದೆ. ಇದರಲ್ಲಿ ಸರಕುಗಳ ಸಂಖ್ಯೆಯನ್ನು 259ರಿಂದ 308ಕ್ಕೆ ಹೆಚ್ಚಿಸಲಾಗಿದೆ, ಸೇವೆಗಳ ಸಂಖ್ಯೆಯನ್ನು 40ರಿಂದ 50ಕ್ಕೆ ಜಾಸ್ತಿ ಮಾಡಲಾಗಿದೆ.

ಜನವರಿಯಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣ ಶೇ 2.13ರಷ್ಟು, ಮನೆಗಳ ಬೆಲೆ ಏರಿಕೆಯು ಶೇ 2.05ರಷ್ಟು ಇತ್ತು. 2012 ಅನ್ನು ಮೂಲ ವರ್ಷವನ್ನಾಗಿ ಇರಿಸಿಕೊಂಡಿದ್ದ ಹಳೆಯ ಕ್ರಮದಲ್ಲಿ ಕಳೆದ ವರ್ಷದ ಜನವರಿಯ ಹಣದುಬ್ಬರ ಪ್ರಮಾಣ ಶೇ 4.26 ಹಾಗೂ ಡಿಸೆಂಬರ್‌ನಲ್ಲಿ ಶೇ 1.33ರಷ್ಟಿತ್ತು.

ಜನವರಿಯಲ್ಲಿ ಹಣದುಬ್ಬರ ಪ್ರಮಾಣವು ಗ್ರಾಮಾಂತರ ಪ್ರದೇಶಗಳಲ್ಲಿ ಶೇ 2.73ರಷ್ಟು, ನಗರ ಪ್ರದೇಶಗಳಲ್ಲಿ ಶೇ 2.77ರಷ್ಟು ಇತ್ತು.

ಹೊಸ ಕ್ರಮದಲ್ಲಿ ಗ್ರಾಮೀಣ ಪ್ರದೇಶಗಳ ಮನೆ ದರ, ಆನ್‌ಲೈನ್ ಮಾಧ್ಯಮ ಸೇವೆಗಳು ಮತ್ತು ಒಟಿಟಿ ಸ್ಟ್ರೀಮಿಂಗ್ ಸೇವೆಗಳು, ಮೌಲ್ಯವರ್ಧಿತ ಡೇರಿ ಉತ್ಪನ್ನಗಳು, ಬಾರ್ಲಿ ಹಾಗೂ ಅದರ ಉತ್ಪನ್ನಗಳು, ಪೆನ್‌ಡ್ರೈವ್ ಮತ್ತು ಎಕ್ಸ್‌ಟರ್ನಲ್ ಹಾರ್ಡ್‌ಡಿಸ್ಕ್‌ನಂತಹ ಉತ್ಪನ್ನಗಳನ್ನು ಸೇರ್ಪಡೆ ಮಾಡಲಾಗಿದೆ.

ವಿಸಿಆರ್, ವಿಸಿಡಿ ಮತ್ತು ಡಿವಿಡಿ ಪ್ಲೇಯರ್‌ಗಳು; ರೇಡಿಯೊ, ಟೇಪ್ ರೆಕಾರ್ಡರ್, ಸಿಡಿ/ಡಿವಿಡಿ ಕ್ಯಾಸೆಟ್‌ಗಳನ್ನು ಕೈಬಿಡಲಾಗಿದೆ.

ಬೇರೆ ಬೇರೆ ಉತ್ಪನ್ನಗಳಿಗೆ ಸೂಚ್ಯಂಕದಲ್ಲಿ ನೀಡಿರುವ ಪ್ರಾಧಾನ್ಯವನ್ನು 2023-24ರ ಕುಟುಂಬಗಳ ಗ್ರಾಹಕ ವೆಚ್ಚ ಸಮೀಕ್ಷೆಯನ್ನು ಆಧರಿಸಿ ಬದಲಾಯಿಸಲಾಗಿದೆ. 2012ರ ಕ್ರಮದಲ್ಲಿ ಆಹಾರ ಮತ್ತು ಪಾನೀಯಗಳಿಗೆ ಶೇ 45.86ರಷ್ಟು ಪಾಲು ಇತ್ತು. ಅದನ್ನು ಈಗ ಶೇ 36.75ಕ್ಕೆ ಇಳಿಕೆ ಮಾಡಲಾಗಿದೆ.

#### ದತ್ತಾಂಶ ಗುಣಮಟ್ಟ ಸುಧಾರಣೆ: ನಾಗೇಶ್ವರನ್

2024ನೇ ಇಸವಿಯನ್ನು ಮೂಲವರ್ಷವನ್ನಾಗಿ ಇರಿಸಿಕೊಂಡಿರುವ ಹೊಸ ಸಿಪಿಐ ಸೂಚ್ಯಂಕವು ಹಣಕಾಸು ಮತ್ತು ವಿತ್ತೀಯ ನೀತಿ ರೂಪಿಸಲು ಬಳಸುವ ದತ್ತಾಂಶಗಳ ಗುಣಮಟ್ಟ ಸುಧಾರಿಸುತ್ತದೆ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಹೊಸ ಕ್ರಮವು ಸೇವಾ ಮಾರುಕಟ್ಟೆ ಹಾಗೂ ಡಿಜಿಟಲ್ ಮಾರುಕಟ್ಟೆಯನ್ನು ಹೆಚ್ಚು ವ್ಯಾಪಕವಾಗಿ ಒಳಗೊಂಡಿದೆ. ಇದು ಜನರ ನೈಜ ಆದಾಯ ಮತ್ತು ಖರೀದಿ ಚಿತ್ರಣವನ್ನು ತಿಳಿಯಲು ನೀತಿ ನಿರೂಪಕರಿಗೆ ಹೆಚ್ಚು ನಿಖರವಾದ ಆಧಾರವನ್ನು ಒದಗಿಸುತ್ತದೆ ಎಂದು ಅವರು ಹೇಳಿದ್ದಾರೆ.

ಹಣಕಾಸಿನ ನೀತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಆರ್‌ಬಿಐ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ.

Publication Date 13/02/2026

Presented by

## ❖ 'ಜವಳಿ ಉತ್ಪನ್ನ : ಅಮೆರಿಕದಲ್ಲಿ ಶೂನ್ಯ ಸುಂಕ'

ನವದೆಹಲಿ (ಪಿಟಿಐ): 'ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಭಾರತಕ್ಕೆ, ಬಾಂಗ್ಲಾದೇಶದ ಜವಳಿ ಉತ್ಪನ್ನ-ಗಳಿಗೆ ಸಿಕ್ಕಂತಹ ಪ್ರಯೋಜನವೇ ಸಿಗಲಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.



ಪೀಯೂಷ್ ಗೋಯಲ್

ಅಮೆರಿಕವು, ಬಾಂಗ್ಲಾದೇಶದ ಸರಕುಗಳ ಮೇಲಿನ ಪ್ರತಿಸುಂಕವನ್ನು ಶೇ 19ಕ್ಕೆ ಇಳಿಸಲಿದೆ. ಆದರೆ, ಅಮೆರಿಕದ ಹತ್ತಿ ಬಳಸಿ, ಯಂತ್ರಗಳ ನೆರವಿಲ್ಲದೆ ಸಿದ್ಧಪಡಿಸಿದ ನೂಲಿನಿಂದ ತಯಾರಿಸಿದ ಜವಳಿ ಉತ್ಪನ್ನಗಳಿಗೆ ಮಾತ್ರ ಶೂನ್ಯ ಸುಂಕ ವಿಧಿಸಲಿದೆ. ಈಗ ಬಾಂಗ್ಲಾದೇಶದ ಜವಳಿ ಉತ್ಪನ್ನಕ್ಕೆ ಅಮೆರಿಕದಲ್ಲಿ ಶೇ 31ರಷ್ಟು ಸುಂಕ (ಅತ್ಯಂತ ನೆಚ್ಚಿನ ರಾಷ್ಟ್ರವೆಂಬ ಕಾರಣಕ್ಕೆ ಶೇ 12ರಷ್ಟು ಸುಂಕ ಮತ್ತು ಪ್ರತಿಸುಂಕದ ರೂಪದಲ್ಲಿ ಶೇ 19ರಷ್ಟು ಸುಂಕ) ಇದೆ. ಬಾಂಗ್ಲಾದೇಶವು ಅಮೆರಿಕದ ನೂಲು ಬಳಸಿದರೆ ಸುಂಕವು ಶೇ 12ಕ್ಕೆ ಇಳಿಕೆ ಆಗಲಿದೆ.

ಅಮೆರಿಕ-ಭಾರತದ ಅಂತಿಮ ವ್ಯಾಪಾರ ಒಪ್ಪಂದದಲ್ಲಿ ಬಾಂಗ್ಲಾದೇಶವು ಪಡೆದ ಪ್ರಯೋಜನವನ್ನೇ ಭಾರತವು ಸಹ ಪಡೆಯಲಿದೆ ಎಂದು ಗೋಯಲ್ ಹೇಳಿದ್ದಾರೆ.

ಭಾರತದ ಕಂಪನಿಗಳು ಅಮೆರಿಕದಿಂದ ನೂಲು ಮತ್ತು ಹತ್ತಿಯನ್ನು ಖರೀದಿಸಿ, ಉತ್ಪನ್ನಗಳನ್ನು ತಯಾರಿಸಿ ಅಮೆರಿಕಕ್ಕೆ ರಫ್ತು ಮಾಡಿದರೆ, ಅಮೆರಿಕದಲ್ಲಿ ಶೂನ್ಯ ಸುಂಕದ ಪ್ರಯೋಜನ ದೊರೆಯಲಿದೆ ಎಂದು ಹೇಳಿದ್ದಾರೆ.

ಇದು ದೇಶದ ಹತ್ತಿ ಬೆಳೆಗಾರರ ಮೇಲೆ ಯಾವುದೇ ಪರಿಣಾಮ ಬೀರದು ಎಂದು ತಿಳಿಸಿದ್ದಾರೆ.

#### 'ಭಾರತದೊಂದಿಗಿನ ಒಪ್ಪಂದ ಐತಿಹಾಸಿಕ'

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತದೊಂದಿಗೆ ಮಾಡಿಕೊಂಡ ವ್ಯಾಪಾರ ಒಪ್ಪಂದವು ಐತಿಹಾಸಿಕವಾದುದು. ಭಾರತವೂ ಸೇರಿ ವ್ಯಾಪಾರ ಒಪ್ಪಂದ ಮಾಡಿಕೊಂಡ ಇತರ ಹಲವು ದೇಶಗಳಿಗೆ ಅಮೆರಿಕವು ಭಾರಿ ಪ್ರಮಾಣದ ಕಲ್ಲಿದ್ದಲನ್ನು ರಫ್ತು ಮಾಡಲಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದರು.

'ಚಾಂಪಿಯನ್ ಆಫ್ ಕೋಲ್' ಎಂಬ ಹೆಸರಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ನಮ್ಮ ನಾಯಕತ್ವದಲ್ಲಿ ಅಮೆರಿಕವು ಹೆಚ್ಚಿನ ಪ್ರಮಾಣದ ಇಂಧನ ರಫ್ತು ಮಾಡುವ ದೇಶವಾಗಿ ಹೊರಹೊಮ್ಮಲಿದೆ. ಜಪಾನ್, ಕೊರಿಯಾ, ಭಾರತ ಮತ್ತು ಇತರ ದೇಶಗಳಿಗೆ ನಮ್ಮ ಕಲ್ಲಿದ್ದಲನ್ನು ಭಾರಿ ಪ್ರಮಾಣದಲ್ಲಿ ರಫ್ತು ಮಾಡಲಿದ್ದೇವೆ' ಎಂದರು.

'ನಾವು ಈಗ ಜಗತ್ತಿನ ಎಲ್ಲೆಡೆಗೂ ಕಲ್ಲಿದ್ದಲು ರಫ್ತು ಮಾಡುತ್ತೇವೆ. ನಮ್ಮ ಕಲ್ಲಿದ್ದಲಿನ ಗುಣಮಟ್ಟವು ಬೇರೆ ದೇಶಗಳ ಕಲ್ಲಿದ್ದಲಿನ ಗುಣಮಟ್ಟಕ್ಕಿಂತ ಅತ್ಯುತ್ತಮವಾಗಿರಲಿದೆ' ಎಂದರು.

## ❖ ಟ್ರಂಪ್ 'ಶಾಂತಿ ಮಂಡಳಿ' ಸೇರಿದ ಇಸ್ರೇಲ್

ವಾಷಿಂಗ್ಟನ್ (ಪಿಟಿಐ): ಗಾಜಾ ಆಡಳಿತದ ಮೇಲ್ವಿಚಾರಣೆ ನಡೆಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸ್ಥಾಪಿಸಿರುವ 'ಶಾಂತಿ ಮಂಡಳಿ'ಗೆ ಇಸ್ರೇಲ್ ಸೇರ್ಪಡೆಗೊಂಡಿದೆ ಎಂದು ಅಲ್ಲಿನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಬುಧವಾರ ಹೇಳಿದರು.

ವಾಷಿಂಗ್ಟನ್‌ಗೆ ಭೇಟಿ ನೀಡಿದ್ದ ನೆತನ್ಯಾಹು ಅವರು ಟ್ರಂಪ್ ಹಾಗೂ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ಮಾತುಕತೆ ನಡೆಸಿದರು. 'ಶಾಂತಿ ಮಂಡಳಿ'ಯ ಸದಸ್ಯನಾಗಿ ಇಸ್ರೇಲ್‌ನ ಸೇರ್ಪಡೆಗೆ ಸಹಿ ಮಾಡಿದ್ದೇನೆ' ಎಂದು ನೆತನ್ಯಾಹು ಈ ವೇಳೆ ತಿಳಿಸಿದರು.

ಹಮಾಸ್ – ಇಸ್ರೇಲ್ ಕದನ ವಿರಾಮ ಒಪ್ಪಂದದ 2ನೇ ಹಂತದ ಅನ್ವಯ ರೂಪಿಸಲಾಗಿರುವ 'ಗಾಜಾ ಶಾಂತಿ ಮಂಡಳಿ' ಸೇರಲು ವಿವಿಧ ದೇಶಗಳ ನಾಯಕರಿಗೆ ಟ್ರಂಪ್ ಆಹ್ವಾನ ನೀಡಿದ್ದರು. ಪಾಕಿಸ್ತಾನ, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್ ಸೇರಿ ಹಲವು ರಾಷ್ಟ್ರಗಳು ಈ ಮಂಡಳಿ ಸೇರಿವೆ.

ಗಾಜಾ ಪುನರ್‌ನಿರ್ಮಾಣದ ಕುರಿತು ಚರ್ಚಿಸಲು ಫೆ.19ರಂದು ಮಂಡಳಿಯ ಸದಸ್ಯ ರಾಷ್ಟ್ರಗಳು ಮೊದಲ ಸಭೆ ಸೇರಲಿವೆ.

ಹಮಾಸ್ – ಇಸ್ರೇಲ್ ನಡುವಿನ ಯುದ್ಧದಲ್ಲಿ ಈವರೆಗೆ 72 ಸಾವಿರಕ್ಕೂ ಅಧಿಕ ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

## ❖ ಏಷ್ಯನ್ ಶೂಟಿಂಗ್: ಮುಂದುವರಿದ ಭಾರತದ ಪ್ರಾಬಲ್ಯ: ಐಶ್ವರಿಗೆ ಸ್ವರ್ಣ; ನೀರಜ್‌ಗೆ ರಜತ

**ಸಂದರ್ಭ: ಭಾರತದ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್ ಷಿಪ್‌ನ ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಗುರುವಾರ ಸ್ವರ್ಣಕ್ಕೆ ಗುರಿಯಿಟ್ಟರು. ಅವರು ಫೈನಲ್ ಸುತ್ತಿನಲ್ಲಿ 362 ಅಂಕ ಸಂಪಾದಿಸಿ ವಿಶ್ವದಾಖಲೆಯನ್ನೂ ಸ್ಥಾಪಿಸಿದರು.**

- ತೋಮರ್ ಅವರಿಗೆ ನಿಕಟ ಪೈಪೋಟಿ ಒಡ್ಡಿದ ನೀರಜ್ ಕುಮಾರ್ (31.8) ಬೆಳ್ಳಿ ಪದಕ ಗೆದ್ದರೆ, ಅಖಿಲ್ ಬೊರಾಣ್ (343.5) ಕಂಚು ತಮ್ಮದಾಗಿಸಿಕೊಂಡರು. ಆ ಮೂಲಕ ಭಾರತದ ಶೂಟರ್‌ಗಳು ಸ್ಪರ್ಧೆಯ ಮೂರೂ ಪದಕಗಳನ್ನು ಜಯಿಸಿ, ಪಾರಮ್ಯ ಮೆರೆದರು.
- ಫೈನಲ್‌ಗೆ ಮುನ್ನ ನಡೆದ ಅರ್ಹತಾ ಸುತ್ತಿನಲ್ಲಿ ನೀರಜ್ (593) ಅಗ್ರಸ್ಥಾನ ಪಡೆದಿದ್ದರು. ಮಹಾರಾಷ್ಟ್ರದ ರುದ್ರಾಂಕ್ ಪಾಟೀಲ್ (591) ಎರಡನೇ ಸ್ಥಾನ ಪಡೆದರಾದರೂ ಅವರು ರಾಂಕಿಂಗ್ ಪಾಯಿಂಟ್ಸ್‌ಗಾಗಿ ಮಾತ್ರ ಸ್ಪರ್ಧಿಸಿದ್ದರು. ತೋಮರ್ ಹಾಗೂ ನಿಖಿಲ್ ತಲಾ 588 ಪಾಯಿಂಟ್ಸ್ ಪಡೆದು ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು. ನೀರಜ್, ತೋಮರ್ ಮತ್ತು ನಿಖಿಲ್ ಜೋಡಿಗೆ (1,769 ಅಂಕ) ಟೀಮ್ ವಿಭಾಗದಲ್ಲಿಯೂ ಚಿನ್ನದ ಪದಕ ಒಲಿಯಿತು. ಜಪಾನ್ (1,754) ಹಾಗೂ ಕಜಾಕಸ್ತಾನ (1,748) ತಂಡಗಳು ಕ್ರಮವಾಗಿ ರಜತ ಹಾಗೂ ಕಂಚು ಜಯಿಸಿದವು.
- ಒಲಿಂಪಿಯನ್ ಜಾಯ್‌ದೀಪ್ ಕರ್ಮಾಕರ್ ಅವರ ಪುತ್ರ ಅದ್ರಿಯಾನ್ ಜೂನಿಯರ್ ವಿಭಾಗದಲ್ಲಿ ಸ್ವರ್ಣ ಗೆದ್ದುಕೊಂಡರು. ಫೈನಲ್ ಸುತ್ತಿನಲ್ಲಿ 353.2 ಅಂಕ ಸಂಪಾದಿಸಿ ವಿಶ್ವ ಜೂನಿಯರ್ ದಾಖಲೆ ಹಾಗೂ ಏಷ್ಯನ್ ಜೂನಿಯರ್ ದಾಖಲೆಯನ್ನು ನಿರ್ಮಿಸಿದರು. ಕಜಾಕಸ್ತಾನದ ಕಿಮ್ ಡಿಮಿಟ್ರಿ (348.5) ರಜತ ಗೆದ್ದರೆ, ಭಾರತದ ಮಾನವೇಂದ್ರ ಸಿಂಗ್ ಶೇಖಾವತ್ (338.6) ಕಂಚು ತಮ್ಮದಾಗಿಸಿಕೊಂಡರು.
- ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಶುಕ್ರವಾರ ಮಹಿಳೆಯರ 50 ಮೀ ರೈಫಲ್ ಪ್ರೋನ್ ಹಾಗೂ ಪುರುಷರ 25 ಮೀ. ಸೆಂಟರ್ ಫೈರ್ ಪಿಸ್ತೂಲ್ ಸ್ಪರ್ಧೆಗಳು ನಡೆಯಲಿವೆ. ಭಾರತವು ಈವರೆಗೆ 38 ಚಿನ್ನ ಸೇರಿ 70 ಪದಕ ಗೆದ್ದಿದ್ದು ಪದಕ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. ಉಜ್ಬೇಕಿಸ್ತಾನ (4 ಪದಕ: 3 ಚಿನ್ನ ಜಯಿಸಿದ್ದು ಎರಡನೇ ಸ್ಥಾನದಲ್ಲಿದೆ.

## ❖ 'ಮದುವೆ, ಮತಾಂತರದಿಂದ ಜಾತಿ ಬದಲಾಗದು'

**ಸಂದರ್ಭ: ವ್ಯಕ್ತಿಯೊಬ್ಬನ ಜಾತಿಯು ಜನನದಿಂದಲೇ ನಿರ್ಧಾರ ವಾಗಿರುತ್ತದೆ. ಮದುವೆ ಅಥವಾ ಮತಾಂತರದ ಬಳಿಕವೂ ಅದು ಬದಲಾ-ಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.**

- ಒಂದು ವೇಳೆ, ಒಬ್ಬ ಮಹಿಳೆ ಬೇರೆ ಜಾತಿ ವ್ಯಕ್ತಿಯನ್ನು ಮದುವೆಯಾದಲ್ಲಿ ಆಕೆಯ ಮೂಲ ಜಾತಿ ರದ್ದುಗೊಂಡಿದೆ ಎಂಬುದಾಗಿ ಪರಿಗಣಿಸುವಂತಿಲ್ಲ ಎಂದು ನ್ಯಾಯಮೂರ್ತಿ ಅನಿಲ ಕುಮಾರ್ ಅವರ ಏಕಸದಸ್ಯ ಪೀಠ ಸ್ಪಷ್ಟಪಡಿಸಿದೆ.
- ಪರಿಶಿಷ್ಟ ಜಾತಿ/ಪಂಗಡ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆ ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳು ತಮ್ಮ ವಿರುದ್ಧ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿ
- ಜಿಲ್ಲಾ ನ್ಯಾಯಾಲಯ ನೀಡಿರುವ ಸಮನ್ಸ್ ಪ್ರಶ್ನಿಸಿ ದಿನೇಶ್ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ, ಪೀಠ ಈ ಮಾತು ಹೇಳಿದೆ.
- 'ಅರ್ಜಿದಾರರು (ದಿನೇಶ್ ಹಾಗೂ ಇತರರು) ನನ್ನ ಮೇಲೆ ಹಲ್ಲೆ ಮಾಡಿದ್ದಲ್ಲದೇ, ಜಾತಿ ಹೆಸರು ತೆಗೆದುಕೊಂಡು ನನ್ನನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ' ಎಂದು ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆ ನೀಡಿದ ದೂರಿನ ಅನ್ವಯ ಈ ಪ್ರಕರಣ ದಾಖಲಿಸಲಾಗಿದೆ.
- ಅರ್ಜಿದಾರರ ವಾದ: ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯು ಪಶ್ಚಿಮ ಬಂಗಾಳದವರು. ಜಾಟ್ ಸಮುದಾಯಕ್ಕೆ ಸೇರಿದ ವ್ಯಕ್ತಿಯನ್ನು ಮದುವೆ ಮಾಡಿ ಕೊಂಡಿದ್ದಾರೆ. ಹೀಗಾಗಿ, ತನ್ನ ಮೂಲ ಜಾತಿಯಿಂದಾಗಿ ಸಿಗುವ ಪ್ರಯೋಜನ ಪಡೆಯಲು ಆಕೆ ಅರ್ಹಳಲ್ಲ ಎಂಬುದು ಅರ್ಜಿದಾರರ ವಾದ.
- 'ಪ್ರಬಲ ಜಾತಿಯ ವ್ಯಕ್ತಿಯನ್ನು ಮದುವೆಯಾಗಿರುವ ಕಾರಣ ಆಕೆಯು 'ಪರಿಶಿಷ್ಟ ಜಾತಿ' ಸ್ಥಾನಮಾನ ಕಳೆದು-ಕೊಂಡಿದ್ದಾಳೆ.ಎಸ್‌ಸಿ/ಎಸ್‌ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಯಡಿ ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣಗಳು ಸಮರ್ಥನೀಯವಲ್ಲ aarte ಅವುಗಳನ್ನು ವಜಾಗೊಳಿಸಬೇಕು' ಎಂದು ದಿನೇಶ್ ಹಾಗೂ ಇತರರು ಹೈಕೋರ್ಟ್‌ಗೆ ಮೇಲ್ಮನವಿಸಲ್ಲಿಸಿದ್ದರು.
- 200 'ಆಕೆ ಬೇರೆ ಜಾತಿಯ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ. ಅಂಶವು ಅರ್ಜಿದಾರರ ವಿರುದ್ಧ ಆಕೆ ದಾಖಲಿಸಿರುವ ಪ್ರಕರಣ ಕೈಬಿಡುವುದಕ್ಕೆ ಆಧಾರವಾಗದು ಎಂದು ಹೇಳಿದೆ ಹೈಕೋರ್ಟ್. ಮೇಲ್ಮನವಿಯನ್ನು ವಜಾಗೊಳಿಸಿದೆ.



### ಕಾನೂನು ಸಚಿವಾಲಯವು ಲೋಕಸಭೆಗೆ ನೀಡಿದ ಮಾಹಿತಿ

# ನ್ಯಾಯಮೂರ್ತಿಗಳ ವಿರುದ್ಧ 8,630 ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾಲಿ ನ್ಯಾಯಾಧೀಶರು/ನ್ಯಾಯಮೂರ್ತಿಗಳ ವಿರುದ್ಧ ಭಾರತದ ಮುಖ್ಯ ನ್ಯಾಯಮೂರ್ತಿಗಳ ಕಚೇರಿಗೆ (ಸಿಜೆಐ) 2016ರಿಂದ ಇಲ್ಲಿಯವರೆಗೆ 8,630 ದೂರುಗಳು ಬಂದಿವೆ ಎಂದು ಕೇಂದ್ರ ಕಾನೂನು ಸಚಿವಾಲಯವು ಲೋಕಸಭೆಯಲ್ಲಿ ಶುಕ್ರವಾರ ಬಹಿರಂಗಪಡಿಸಿದೆ.


ಲೋಕಸಭೆಯಲ್ಲಿ ಶುಕ್ರವಾರ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಡಿಎಂಕೆ ಸಂಸದ ಮಾಥೇಶ್ವರನ್ ವಿ.ಎಸ್ ಕೇಳಿದ ಪ್ರಶ್ನೆಗೆ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಈ ಉತ್ತರ ನೀಡಿದರು.

ಹೈಕೋರ್ಟ್‌ಗಳು ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ವಿರುದ್ಧ ಸಲ್ಲಿಕೆಯಾಗಿರುವ ಭ್ರಷ್ಟಾಚಾರ, ಲೈಂಗಿಕ ದುರ್ನಡತೆ ಅಥವಾ ಇತರ ಗಂಭೀರ ಅನುಚಿತ ವರ್ತನೆಗೆ ಸಂಬಂಧಿಸಿದ ದೂರುಗಳ ಬಗ್ಗೆ ವಿವರ ನೀಡುವಂತೆ ಸಂಸದರು ಪ್ರಶ್ನೆ ಕೇಳಿದರು.



ಈ ದೂರುಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಮಾಥೇಶ್ವರನ್ ಕೇಳಿದರು. ಆದಾಗ್ಯೂ, ಇದಕ್ಕೆ ಸಚಿವರು ಉತ್ತರ ನೀಡಿಲ್ಲ. ಈ ದೂರುಗಳ ಆಧಾರದಲ್ಲಿ ಕೈಗೊಂಡಿರುವ ಕ್ರಮಗಳ ದಾಖಲೆಗಳು ಏಕೆ ಇಲ್ಲ ಎಂಬುದನ್ನೂ ಸಚಿವರು ಬಹಿರಂಗಪಡಿಸಿಲ್ಲ.

ಉನ್ನತ ನ್ಯಾಯಾಲಯದ ಆಂತರಿಕ ಕಾರ್ಯವಿಧಾನದ ಪ್ರಕಾರ, ನ್ಯಾಯಾಧೀಶರ ವಿರುದ್ಧ ದೂರುಗಳನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಸ್ವೀಕರಿಸುತ್ತಾರೆ. ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮೇಲ್ವಿಚಾರಣಾ ವ್ಯವಸ್ಥೆ ಮೂಲಕ ಅಥವಾ ಯಾವುದೇ ಇತರ ರೂಪದಲ್ಲಿ ಸ್ವೀಕರಿಸಿದ ದೂರುಗಳನ್ನು ಸಿಜೆಐ ಅಥವಾ ಸಂಬಂಧಪಟ್ಟ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ರವಾನಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.




# ಪ್ರಧಾನಿ ಕಚೇರಿ ಈಗ 'ಸೇವಾ ತೀರ್ಥ'

## 95 ವರ್ಷದ ಬಳಿಕ ಪಿಎಂಒ ಸ್ಥಳಾಂತರ
## ಮಹಿಳೆ, ರೈತರ ಕಲ್ಯಾಣಕ್ಕೆ ಹಲವು ನಿರ್ಣಯ

ನವದೆಹಲಿ(ಪಿಟಿಐ): ಪ್ರಧಾನ ಮಂತ್ರಿ ಕಚೇರಿಯನ್ನು(ಪಿಎಂಒ) ನೂತನ ಕಟ್ಟಡ 'ಸೇವಾ ತೀರ್ಥ'ಕ್ಕೆ ಶುಕ್ರವಾರ ಸ್ಥಳಾಂತರಗೊಳಿಸಲಾಯಿತು. ಇನ್ನು ಮುಂದೆ 'ಪ್ರಧಾನ ಮಂತ್ರಿ ಕಚೇರಿ' ಯನ್ನು 'ಸೇವಾ ತೀರ್ಥ' ಎಂದೇ ಕರೆಯಲಾಗುತ್ತದೆ.

ಈ ಮೊದಲು ರಾಷ್ಟ್ರಪತಿ ಭವನ ಬಳಿಯ ಸೌತ್ ಬ್ಲಾಕ್‌ನಲ್ಲಿ ಈ ಕಚೇರಿ ಇತ್ತು. 95 ವರ್ಷಗಳ ನಂತರ ಪಿಎಂಒ ಸ್ಥಳಾಂತರಗೊಳಿಸಿದಂತಾಗಿದೆ.

ಕೇಂದ್ರೀಯ ಸಚಿವಾಲಯ ಎರಡು ಕಟ್ಟಡ ಹೊಂದಿದ್ದು, ಇವನ್ನು 'ಕರ್ತವ್ಯ ಭವನ 1' ಹಾಗೂ 'ಕರ್ತವ್ಯ ಭವನ 2' ಎಂಬುದಾಗಿ ಕರೆಯಲಾಗುತ್ತದೆ.

1931ರ ಫೆಬ್ರುವರಿ 13ರಂದು ನವದೆಹಲಿಯನ್ನು ಭಾರತದ ರಾಜಧಾನಿಯಾಗಿ ಘೋಷಿಸಲಾಗಿತ್ತು. 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವಸಾಹತುಶಾಹಿ ಕಾಲದ ಪ್ರತೀಕಗಳನ್ನು ಬದಲಾಯಿಸಿ, ದೇಸಿತನಕ್ಕೆ ಒತ್ತು ನೀಡುತ್ತಿರುವ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಮನೋಹರ ಲಾಲ್ ಖಟ್ಟರ್, ಜಿತೇಂದ್ರ ಸಿಂಗ್ ಹಾಗೂ ಪಿಎಂಒದ ಉನ್ನತ ಅಧಿಕಾರಿಗಳಿದ್ದ ವಾಹನಗಳು ಸೌತ್ ಬ್ಲಾಕ್‌ನಿಂದ ಹೊರಟು 'ಸೇವಾ ತೀರ್ಥ' ತಲುಪಿದವು.

ನೂತನ ಕಚೇರಿಯಲ್ಲಿ ಪಿಎಂಒ, ರಾಷ್ಟ್ರೀಯ ಭದ್ರತಾ ಪರಿಷತ್ತಿನ ಸಚಿವಾಲಯ ಹಾಗೂ ಸಂಪುಟ ಸಚಿವಾಲಯ ಕಚೇರಿಗಳನ್ನು ಮೋದಿ ಉದ್ಘಾಟಿಸಿದರು.

ನೂತನ ಕಚೇರಿಗೆ ಪ್ರವೇಶಿಸಿದ ಬಳಿಕ ಅಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮೋದಿ ಪೂಜೆ ಸಲ್ಲಿಸಿದರು. 'ಸೇವಾ ತೀರ್ಥ' ಎಂದು ದೇವನಾಗರಿ ಲಿಪಿಯಲ್ಲಿ ಬರೆದಿರುವ ಫಲಕವನ್ನು ಇದೇ ವೇಳೆ ಅವರು ಅನಾವರಣಗೊಳಿಸಿದರು. 'ನಾಗರಿಕ ದೇವೋ ಭವ' ಎಂಬ ಅಡಿಬರಹವೂ ಇದೇ ಫಲಕದಲ್ಲಿದೆ.

ಬಳಿಕ,ಮಹಿಳೆಯರು, ರೈತರು, ಯುವ ಜನ, ಹಿರಿಯ ನಾಗರಿಕರ ಕಲ್ಯಾಣ ಕುರಿತ ಯೋಜನೆಗಳಿಗೆ ಸಂಬಂಧಿಸಿ ಹಲವು ನಿರ್ಧಾರತೆಗೆದುಕೊಂಡರು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ.ಮಿಶ್ರಾ, ಶಕ್ತಿಕಾಂತ ದಾಸ್ ಇದ್ದರು.

ಹಲವು ದಶಕಗಳಿಂದ ಕೇಂದ್ರ ಸರ್ಕಾರದ ಪ್ರಮುಖ ಕಚೇರಿಗಳು ಹಾಗೂ ಸಚಿವಾಲಯಗಳು ಸೆಂಟ್ರಲ್ ವಿಸ್ತಾ ಪ್ರದೇಶದಲ್ಲಿನ ವಿವಿಧ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅನೇಕ ಕಟ್ಟಡಗಳು ಶಿಥಿಲವಾಗಿದ್ದವು.

ಹೊಸ ಕಟ್ಟಡಗಳಿಗೆ ಕಚೇರಿಗಳನ್ನು/ಸಚಿವಾಲಯಗಳನ್ನು ಸ್ಥಳಾಂತರಗೊಳಿಸುವ ಜೊತೆಗೆ, ಅವುಗಳ ಹೆಸರುಗಳನ್ನು ಕೂಡ ಬದಲಾಯಿಸುವುದಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಇದರ ಭಾಗವಾಗಿ, ಪ್ರಧಾನಿಯ ಗೃಹ ಕಚೇರಿ ಇರುವ 'ರೇಸ್ ಕೋರ್ಸ್ ರಸ್ತೆ'ಯನ್ನು 'ಲೋಕ ಕಲ್ಯಾಣ ಮಾರ್ಗ' ಎಂದು ಬದಲಾಯಿಸಲಾಗಿದೆ. ಕೇಂದ್ರ ಸಚಿವಾಲಯದ ಕಚೇರಿಗಳಿರುವ ಕಟ್ಟಡವನ್ನು 'ಕರ್ತವ್ಯ ಭವನ' ಹಾಗೂ ರಾಜಪಥವನ್ನು 'ಕರ್ತವ್ಯ ಪಥ' ಎಂಬುದಾಗಿ ಬದಲಾಯಿಸಲಾಗಿದೆ.

ರಾಜಭವನ ಹಾಗೂ ರಾಜನಿವಾಸಗಳ ಹೆಸರುಗಳನ್ನು ಸಹ ಬದಲಾಯಿಸಲಾಗಿದೆ.




ನವದೆಹಲಿಯಲ್ಲಿ ಪ್ರಧಾನ ಮಂತ್ರಿ ಕಚೇರಿ ನೂತನ ಕಟ್ಟಡ 'ಸೇವಾ ತೀರ್ಥ'ವನ್ನು ಶುಕ್ರವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕಚೇರಿಯ ನಾಮಫಲಕವನ್ನು ಅನಾವರಣಗೊಳಿಸಿದರು ಪಿಟಿಐ ಚಿತ್ರ

### 'ಬದ್ಧತೆಯ ಪ್ರತೀಕ'

'ಪ್ರಧಾನ ಮಂತ್ರಿ ಕಚೇರಿ(ಸೇವಾ ತೀರ್ಥ) ಹಾಗೂ ಕೇಂದ್ರೀಯ ಸಚಿವಾಲಯ(ಕರ್ತವ್ಯ ಭವನ) ಒಳಗೊಂಡಿರುವ ಹೊಸ ಕಟ್ಟಡಗಳು ವಿಕಸಿತ ಭಾರತದತ್ತ ದೇಶ ಕೈಗೊಂಡಿರುವ ಪಯಣದಲ್ಲಿ ಮಹತ್ವದ ಮೈಲುಗಲ್ಲುಗಳಾಗಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಸೇವಾ ತೀರ್ಥ' ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು,'ಈ ಕಟ್ಟಡಗಳು ನಾಗರಿಕ ಕೇಂದ್ರಿತ ಆಡಳಿತ ಮತ್ತು ದೇಶದ ಅಭಿವೃದ್ಧಿ ಕುರಿತು ನಮ್ಮ ಸರ್ಕಾರ ಹೊಂದಿರುವ ಬದ್ಧತೆಯನ್ನು ಪ್ರತಿಫಲಿಸುತ್ತವೆ' ಎಂದರು.

'ರಕ್ಷಣಾ, ಗೃಹ ಹಾಗೂ ಹಣಕಾಸು ಸಚಿವಾಲಯಗಳಿರುವ ಐತಿಹಾಸಿಕ ಕಟ್ಟಡಗಳಾದ ಸೌತ್ ಬ್ಲಾಕ್ ಹಾಗೂ ನಾರ್ತ್ ಬ್ಲಾಕ್ ಬ್ರಿಟಿಷ್ ಸಾಮ್ರಾಜ್ಯದ ಆದರ್ಶಗಳ ಅಭಿವ್ಯಕ್ತಿಯಂತಿದ್ದವು. ಸೇವಾ ತೀರ್ಥ ಹಾಗೂ ಕರ್ತವ್ಯ ಭವನಗಳನ್ನು ದೇಶದ ಪ್ರಜೆಗಳ ಆಶೋತ್ತರಗಳನ್ನು ಸಾಕಾರಗೊಳಿಸುವುದಕ್ಕಾಗಿ ನಿರ್ಮಿಸಲಾಗಿದೆ' ಎಂದು ಹೇಳಿದರು.

ಸೇವಾ ತೀರ್ಥದ ಉದ್ಘಾಟನೆ ಸ್ಮರಣಾರ್ಥ ಅದರ ಚಿತ್ರವಿರುವ ಅಂಚೆ ಚೀಟಿ ಹಾಗೂ ನಾಣ್ಯವನ್ನು ಇದೇ ವೇಳೆ ಮೋದಿ ಬಿಡುಗಡೆ ಮಾಡಿದರು.

### ಪ್ರಮುಖ ನಿರ್ಧಾರಗಳು

- 'ಪ್ರಧಾನ ಮಂತ್ರಿ ರಾಹತ್' ಯೋಜನೆಗೆ ಪ್ರಧಾನಿ ಅನುಮೋದನೆ ನೀಡಿದರು. ಅಪಘಾತಗಳು ಸಂಭವಿಸಿದ ವೇಳೆ, ಸಂತ್ರಸ್ತರಿಗೆ ₹1.5 ಲಕ್ಷ ಮೊತ್ತದಷ್ಟು ನಗದುರಹಿತ ಚಿಕಿತ್ಸೆ ನೀಡುವ ಯೋಜನೆ ಇದಾಗಿದೆ. ಅಪಘಾತಗಳ ಸಂದರ್ಭದಲ್ಲಿ ತಕ್ಷಣಕ್ಕೆ ವೈದ್ಯಕೀಯ ನೆರವು ಸಿಗದ ಕಾರಣಕ್ಕಾಗಿ ಜೀವ ಹಾನಿ ಆಗುವುದನ್ನು ತಪ್ಪಿಸುವುದು ಈ ಯೋಜನೆ ಉದ್ದೇಶವಾಗಿದೆ
- 'ಲಖ್‌ಪತಿ ದೀದಿ'ಗಳ ಸಂಖ್ಯೆಯನ್ನು 6 ಕೋಟಿಗೆ ಹೆಚ್ಚಿಸುವ ಗುರಿಯನ್ನು ನಿಗದಿಪಡಿಸುವ ಕಡತಕ್ಕೆ ಮೋದಿ ಸಹಿ ಹಾಕಿದರು. ಈ ಮೊದಲು ಮಾರ್ಚ್ 2027ರ ಒಳಗಾಗಿ 'ಲಖ್‌ಪತಿ ದೀದಿಗಳ ಸಂಖ್ಯೆಯನ್ನು 3 ಕೋಟಿಗೆ ತಲುಪುವ ಗುರಿ ನಿಗದಿಪಡಿಸಲಾಗಿತ್ತು. ಅವಧಿಗಿಂತಲೂ ಮೊದಲೇ ಗುರಿ ಸಾಧಿಸಲಾಗಿರುವ ಕಾರಣ, 2029ರ ಮಾರ್ಚ್ ಒಳಗಾಗಿ ಇವರ ಸಂಖ್ಯೆಯನ್ನು 6 ಕೋಟಿಗೆ ತಲುಪಿಸುವ ಗುರಿಯನ್ನು ನಿಗದಿಪಡಿಸಲಾಗಿದೆ
- ರೈತರಿಗೆ ಉತ್ತೇಜನ ನೀಡುವುದಕ್ಕಾಗಿ 'ಕೃಷಿ ಮೂಲಸೌಕರ್ಯ ನಿಧಿ'ಯ ಮೊತ್ತವನ್ನು ₹2 ಲಕ್ಷ ಕೋಟಿಗೆ ಹೆಚ್ಚಿಸುವ ನಿರ್ಧಾರಕ್ಕೆ ಸಹಿ ಹಾಕಿದ್ದಾರೆ
- ಸ್ಟಾರ್ಟ್‌ಅಪ್ ಇಂಡಿಯಾ ಫಂಡ್ ಆಫ್ ಫಂಡ್ಸ್ 2.0ಗೆ ಅನುಮೋದನೆ ನೀಡಿ, ₹10 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ಇದರಿಂದ ಡೀಪ್ ಟೆಕ್, ತಯಾರಿಕಾ ಮತ್ತು ನವೀನ ತಂತ್ರಜ್ಞಾನಗಳ ಕ್ಷೇತ್ರಕ್ಕೆ ಬಲ ತುಂಬುವಿಕೆ.

## ಕೇಂದ್ರದ 2026ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಆಗಿದೆಯೇ ಎನ್ನುವ ಬಗ್ಗೆ ರಾಜ್ಯದ ಇಬ್ಬರು ಮುಖಂಡರ ಅನಿಸಿಕೆಗಳು

ದೇಶದ ಸಂವಿಧಾನವು ಜನರ ಯೋಗಕ್ಷೇಮ ಹಾಗೂ ಅಭಿವೃದ್ಧಿ ಕರ್ತವ್ಯದಲ್ಲಿ 2/3 ಭಾಗದ ಹೊಣೆಯನ್ನು ರಾಜ್ಯಗಳಿಗೆ ವಹಿಸಿದೆ. ಆದರೆ, 2/3ರಷ್ಟು ಆದಾಯವನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ಈ ನಿಯಮ ರಾಜ್ಯಗಳ ಸುಸ್ಥಿರ ಅಭಿವೃದ್ಧಿಗೆ ಮಾರಕ. ಹೆಚ್ಚಿನ ಪ್ರಮಾಣದ ಅಭಿವೃದ್ಧಿ ಕೆಲಸಗಳನ್ನು ರಾಜ್ಯಗಳೇ ಮಾಡಬೇಕು. ಆದರೆ, ಆದಾಯ ಮಾತ್ರ ಕೇಂದ್ರದ ಪಾಲಾದರೆ ರಾಜ್ಯದ ಅಭಿವೃದ್ಧಿ ಹೇಗೆ ಸಾಧ್ಯ? ಸಾರ್ವಜನಿಕರೂ ಅವರ ಯೋಗಕ್ಷೇಮದ ಬೇಡಿಕೆ ಹಾಗೂ ಅಭಿವೃದ್ಧಿ ಅಗತ್ಯಗಳಿಗೆ ರಾಜ್ಯ ಸರ್ಕಾರಗಳನ್ನೇ ಅವಲಂಬಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರವು ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಕೊಕ್ಕೆ ಹಾಕಿ ಕೂತಿರುವುದು ಗಣತಂತ್ರ ಒಕ್ಕೂಟ ವ್ಯವಸ್ಥೆಯ ಅಣಕವಲ್ಲದೆ ಮತ್ತೇನು?

ಗ್ಯಾರಂಟಿ ಯೋಜನೆಗಳ ಪರಿಣಾಮ ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಅತ್ಯಂತ ಕಡಿಮೆ ದುಡ್ಡು ಖರ್ಚು ಮಾಡಲಾಗುತ್ತಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ರಾಜ್ಯಕ್ಕೆ ಹಿನ್ನಡೆಯಾಗಿರುವುದು ತುಂಬಲಾರದ ನಷ್ಟ. ಇದನ್ನು ಸರಿಪಡಿಸಲು ಮುಂದೆ ಬರುವಂತಹ ಸರ್ಕಾರ ಹರಸಾಹಸ ಪಡಬೇಕಾಗುತ್ತದೆ. ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯ ಹೆಚ್ಚು ಸಾಲ ಮಾಡಿದ್ದರು. ಈಗಲೂ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಅವರು ಈ ಅವಧಿಯಲ್ಲಿ ₹6 ಲಕ್ಷ ಕೋಟಿಗಿಂತ ಹೆಚ್ಚು ಹೊರೆಯನ್ನು ರಾಜ್ಯದ ಜನರ ಮೇಲೆ ಹೇರಲಿದ್ದಾರೆ

# ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯ ರಾಜ್ಯಕ್ಕೆ ಕಾಂಗ್ರೆಸ್‌ನಿಂದ

• ಕೃಷ್ಣಬೈರೇಗೌಡ



'ವಿಕಸಿತ ಭಾರತ' ಎಂಬ ಪದದ ಅರ್ಥ ಮತ್ತು ವ್ಯಾಪ್ತಿ ಅಗಾಧವಾದದ್ದು. ಆದರೆ, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವ ದಕ್ಷಿಣದ ರಾಜ್ಯಗಳಿಗೆ ಸತತ ಅನ್ಯಾಯವನ್ನಷ್ಟೇ ಎಸಗುತ್ತಿರುವ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ, ಈ ಪದವನ್ನು ಕೇವಲ ತೋರ್ಪಡಿಕೆಗೆ ಬಳಸುತ್ತಿದೆ; ಅದರ ನಿಜವಾದ ಹೆಜ್ಜೆ ತದ್ವಿರುದ್ಧ ದಿಕ್ಕಿನಲ್ಲಿದೆ. ಅದಕ್ಕೊಂದು ತಾಜಾ ಉದಾಹರಣೆಯೇ ಕೇಂದ್ರದ 2026ರ ಬಜೆಟ್.

ಪ್ರತಿಯೊಂದು ರಾಜ್ಯದ ಸ್ವಾಯತ್ತೆಯು ಸುಸ್ಥಿರ ಆದಾಯದ ಮೇಲೆ ನಿಂತಿದೆ. ಆ ನಿಟ್ಟಿನಲ್ಲಿ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಯಾಗುವವರೆಗೆ ಕರ್ನಾಟಕ ಸೇರಿದಂತೆ ಎಲ್ಲಾ ರಾಜ್ಯಗಳು ಸ್ವಾಯತ್ತವಾಗಿಯೇ ಇದ್ದವು. ಆದರೆ, ಜಿಎಸ್‌ಟಿ ಜಾರಿಯು ರಾಜ್ಯಗಳ ಸ್ವಾಯತ್ತೆಗೆ ಬಿದ್ದ ಮೊದಲ ಕೊಡಲಿ ಪೆಟ್ಟು. ಜಿಎಸ್‌ಟಿಯಿಂದಾಗಿ ರಾಜ್ಯಗಳು ಪ್ರತಿ ವಸ್ತುವಿನ ಮೇಲೆ ತೆರಿಗೆ ನಿರ್ಧರಿಸುವ ಮತ್ತು ಸಂಗ್ರಹಿಸುವ ತನ್ನ ಪರಮಾಧಿಕಾರವನ್ನೇ ಕಳೆದುಕೊಂಡವು. ಅಲ್ಲದೆ, ತೆರಿಗೆ ಸಂಗ್ರಹದಲ್ಲಿ ತಮ್ಮ ಪಾಲು ಪಡೆಯಲು ಕೇಂದ್ರವನ್ನು ಅವಲಂಬಿಸುವಂತಾದವು. ಇದು ದುರದೃಷ್ಟಕರ.

ಜಿಎಸ್‌ಟಿ ಜಾರಿಯಿಂದ ರಾಜ್ಯಕ್ಕೆ ವಾರ್ಷಿಕ ₹20 ಸಾವಿರ ಕೋಟಿಯಿಂದ ₹25 ಸಾವಿರ ಕೋಟಿಯಷ್ಟು ತೆರಿಗೆ ನಷ್ಟ ಉಂಟಾಗಿತ್ತು. ಈ ನಷ್ಟವನ್ನು ಭರಿಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕಳೆದ ವರ್ಷ ಜಿಎಸ್‌ಟಿ ದರದಲ್ಲಿ ಬದಲಾವಣೆಗಳನ್ನು ಮಾಡಿದೆ. ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿದ್ದರೆ, ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿದ್ದರೆ ನಮ್ಮದೇನೂ ತಕರಾರಿಲ್ಲ. ಆದರೆ, ಈ ಜಿಎಸ್‌ಟಿ ಸರಳೀಕರಣದಿಂದ ಜನರಿಗೂ ಲಾಭವಿಲ್ಲ, ರಾಜ್ಯಕ್ಕೂ ವಾರ್ಷಿಕ ಸುಮಾರು ₹15 ಸಾವಿರ ಕೋಟಿಯಿಂದ ₹20 ಸಾವಿರ ಕೋಟಿವರೆಗೆ ಆದಾಯ ಕೊರತೆಯಾಗಿದೆ. ಜಿಎಸ್‌ಟಿ ಬೆಳವಣಿಗೆ ಶೇ 12ರಿಂದ ಶೇ 5ಕ್ಕೆ ಇಳಿಕೆಯಾಗಿದೆ.

ಈ ನಷ್ಟವನ್ನು ತುಂಬಿಕೊಡಲು ಜಿಎಸ್‌ಟಿ ಮಂಡಳಿ ಬಳಿ ಯಾವುದೇ ಪರಿಹಾರದ ಯೋಜನೆ ಇಲ್ಲ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ 'ವಿಕಸಿತ ಭಾರತ' ಬಜೆಟ್‌ನಲ್ಲಿಯೂ ಈ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

ಅಸಲಿಗೆ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಸ್ಥಿರಗೊಳ್ಳುವವರೆಗೆ ಕೇಂದ್ರ ಸರ್ಕಾರ ತನ್ನ ಖಜಾನೆಯಿಂದ ಒಂದು ರೂಪಾಯಿಯನ್ನೂ ನೀಡುವ ಅಗತ್ಯವಿಲ್ಲ. ಬದಲಿಗೆ ಜಿಎಸ್‌ಟಿ ಮಂಡಳಿ ಪರಿಧಿಯಲ್ಲೇ ಪ್ರತಿಯೊಂದು ರಾಜ್ಯಕ್ಕೂ ಪರಿಹಾರ ನೀಡಬಹುದು. ಕೇಂದ್ರ ಸರ್ಕಾರ ಸೆಸ್, ಸರ್‌ಚಾರ್ಜ್ ಮೂಲಕ ಸಂಗ್ರಹಿಸುವ ತೆರಿಗೆ ಹಣವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವುದೇ ಇದಕ್ಕಿರುವ ಏಕೈಕ ಪರಿಹಾರ.

ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 28ರಷ್ಟು ಮಾತ್ರ. ಉಳಿದ ಶೇ 72ರಷ್ಟು ಆದಾಯವನ್ನು ಕೇಂದ್ರ ಸರ್ಕಾರ ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ, ಆದಾಯ ತೆರಿಗೆ, ಕಸ್ಟಮ್ಸ್, ಡಿವಿಡೆಂಡ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯದ ಮೂಲ. ಸೆಸ್ ಮೂಲಕವೇ ಕೇಂದ್ರ ಸರ್ಕಾರ ಶೇ 17ರಿಂದ ಶೇ 20ರಷ್ಟು ಆದಾಯ ಗಳಿಸುತ್ತದೆ. 2024-25ರ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಸೆಸ್ ಮೂಲಕ ₹3.87 ಲಕ್ಷ ಕೋಟಿ ಹಣ ಸಂಗ್ರಹಿಸಿದೆ. ಸರ್‌ಚಾರ್ಜ್ ಮೂಲಕ ₹1.53 ಲಕ್ಷ ಕೋಟಿ ಸೇರಿ ಒಟ್ಟಾರೆ ₹5.40 ಲಕ್ಷ ಕೋಟಿ ಸಂಗ್ರಹಿಸಿದೆ. 2025-26 ನೇ ಸಾಲಿಗೆ ಇದನ್ನು ₹5.91 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದೆ. ಕೇಂದ್ರ ಸರ್ಕಾರ ಸೆಸ್-ಸರ್‌ಚಾರ್ಜ್ ಆದಾಯದಲ್ಲಿ ಒಂದು ರೂಪಾಯಿಯನ್ನೂ ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ತೆರಿಗೆಗಳನ್ನು ವ್ಯವಸ್ಥಿತವಾಗಿ ಸೆಸ್‌ಗಳಿಗೆ ಬದಲಾಯಿಸಿ, ರಾಜ್ಯಗಳಿಗೆ ಅದರಲ್ಲಿ ಏನೂ ಪಾಲು ಕೊಡದೇ ಸಂಪೂರ್ಣ ಹಣವನ್ನು ತಾನೇ ಇಟ್ಟುಕೊಳ್ಳುವ ವ್ಯವಸ್ಥಿತ ಮಾರ್ಗ ಅನುಸರಿಸುತ್ತಿದೆ.

ರಾಜ್ಯಗಳ ಒಟ್ಟು ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 50. ಹೀಗಾಗಿ ಅಭಿವೃದ್ಧಿಗೆ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನೇ ನೆಚ್ಚಿಕೊಂಡಿವೆ.

2022ರಲ್ಲಿ ಜಿಎಸ್‌ಟಿ ತೆರಿಗೆ ನಷ್ಟ ಪರಿಹಾರ ಯೋಜನೆಯನ್ನು ತೆಗೆದುಹಾಕಿದ ನಂತರ ರಾಜ್ಯಗಳ ಆದಾಯದಲ್ಲಿ ಶೇ 25ರಷ್ಟು ಖೋತಾ ಆಗಿದೆ. ಇಂತಹ ಸಂದರ್ಭದಲ್ಲಿ ಜಿಎಸ್‌ಟಿ ಸರಳೀಕರಣ ಎಂಬ ಸೂತ್ರದ ಅಡಿಯಲ್ಲಿ ರಾಜ್ಯಗಳ ಆದಾಯಕ್ಕೆ ಹೆಚ್ಚುವರಿಯಾಗಿ ಶೇ 20ರಷ್ಟು ನಷ್ಟ ಉಂಟುಮಾಡಿದರೆ ರಾಜ್ಯಗಳ ಆರ್ಥಿಕ ಸ್ವಾಯತ್ತೆ ಪ್ರಶ್ನಾರ್ಥಕವಾಗುವುದಿಲ್ಲವೇ? ಇದಕ್ಕೊಂದು ಪರಿಹಾರ ಬೇಡವೇ?

ಜಿಎಸ್‌ಟಿ ಪರಿಚಯಿಸುವಾಗ ಈ ನೂತನ ತೆರಿಗೆ ವ್ಯವಸ್ಥೆ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎನ್ನಲಾಗಿತ್ತು. ಇದು ನಿಜವಾಗಿದ್ದರೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಆದಾಯ ದುಪ್ಪಟ್ಟಾಗಬೇಕಿತ್ತು. ಆದರೆ ಕಳೆದ ಏಳೆಂಟು ವರ್ಷಗಳಲ್ಲಿ ಈ ಹೇಳಿಕೆ ಸುಳ್ಳು ಎಂದು ಸಾಬೀತಾಗಿದೆ. ಪ್ರತಿ ವರ್ಷವೂ ಎಲ್ಲ ರಾಜ್ಯಗಳ ನಿವ್ವಳ ಆದಾಯ ಗಣನೀಯವಾಗಿ ಇಳಿಯುತ್ತಲೇ ಇದೆ. ಜಿಎಸ್‌ಟಿಗೂ ಮುನ್ನ ವ್ಯಾಟ್ ಅಡಿಯಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದ ಕಾಲದಲ್ಲಿ ದೇಶದ ಜಿಡಿಪಿಗೆ ವ್ಯಾಟ್ ಕೊಡುಗೆ ಶೇ 6.1ರಷ್ಟಿತ್ತು. ಆದರೆ, ಈಗ ಜಿಎಸ್‌ಟಿ ಬಳಿಕ ಈ ಪ್ರಮಾಣ ಶೇ 6.1ಕ್ಕೆ ತಲುಪಿಲ್ಲ. ಪ್ರಸ್ತುತ ಜಿಡಿಪಿಗೆ ಜಿಎಸ್‌ಟಿ ಕೊಡುಗೆ ಶೇ 5.9ರಷ್ಟು ಮಾತ್ರ. ಒಟ್ಟಾರೆ ಜಿಎಸ್‌ಟಿಯಿಂದಾಗಿ ರಾಜ್ಯ ಹಾಗೂ ಕೇಂದ್ರಕ್ಕೆ ಆದಾಯ ನಷ್ಟವಾಗುತ್ತಿರುವುದು ಸ್ಪಷ್ಟ. ಜಿಎಸ್‌ಟಿ ವ್ಯವಸ್ಥೆಗೂ ಮುನ್ನ ಇದ್ದ ಆದಾಯ ಹಾಗೂ ಇಂದಿನ ಆದಾಯ ಹೋಲಿಕೆ ಮಾಡಿದರೆ ಕರ್ನಾಟಕದ ಆದಾಯ ಜಿಎಸ್‌ಟಿ ನಂತರ ₹25 ಸಾವಿರ ಕೋಟಿ ಕಡಿಮೆ ಆಗಿದೆ.

ಸಂವಿಧಾನವು ಜನರ ಯೋಗಕ್ಷೇಮ ಹಾಗೂ ಅಭಿವೃದ್ಧಿ ಕರ್ತವ್ಯದಲ್ಲಿ 2/3 ಭಾಗದ ಹೊಣೆಯನ್ನು ರಾಜ್ಯಗಳಿಗೆ ವಹಿಸಿದೆ. ಆದರೆ, 2/3 ರಷ್ಟು ಆದಾಯವನ್ನು ಕೇಂದ್ರಕ್ಕೆ ನೀಡಿದೆ. ಈ ನಿಯಮ ರಾಜ್ಯಗಳ ಸುಸ್ಥಿರ ಅಭಿವೃದ್ಧಿಗೆ ಮಾರಕ. ಹೆಚ್ಚಿನ ಪ್ರಮಾಣದ ಅಭಿವೃದ್ಧಿ ಕೆಲಸಗಳನ್ನು ರಾಜ್ಯಗಳೇ ಮಾಡಬೇಕು. ಆದರೆ, ಆದಾಯ ಮಾತ್ರ ಕೇಂದ್ರದ ಪಾಲಾದರೆ ರಾಜ್ಯದ ಅಭಿವೃದ್ಧಿ ಹೇಗೆ ಸಾಧ್ಯ? ಸಾರ್ವಜನಿಕರೂ ಅವರ ಯೋಗಕ್ಷೇಮದ ಬೇಡಿಕೆ ಹಾಗೂ ಅಭಿವೃದ್ಧಿ ಅಗತ್ಯಗಳಿಗೆ ರಾಜ್ಯ ಸರ್ಕಾರಗಳನ್ನೇ ಅವಲಂಬಿಸಿದ್ದಾರೆ. ಆದರೆ, ಕೇಂದ್ರವು ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಕೊಕ್ಕೆ ಹಾಕಿ ಕೂತಿರುವುದು ಗಣತಂತ್ರ ಒಕ್ಕೂಟ ವ್ಯವಸ್ಥೆಯ ಅಣಕವಲ್ಲದೆ ಮತ್ತೇನು?

ಹಣಕಾಸು ಆಯೋಗವಂತೂ ಹೆಜ್ಜೆ ಹೆಜ್ಜೆಗೂ ಕರ್ನಾಟಕಕ್ಕೆ ಅನ್ಯಾಯವನ್ನಷ್ಟೇ ಮಾಡುತ್ತಿದೆ. 14ನೇ ಹಣಕಾಸು ಆಯೋಗವು ಶೇ 4.71ರಷ್ಟು ಪಾಲನ್ನು ನಮಗೆ ಒದಗಿಸಿತ್ತು. 15ನೇ ಹಣಕಾಸು ಆಯೋಗವು ಇದನ್ನು ಶೇ 3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ರಲ್ಲಿ ಮೊದಲು ಕರ್ನಾಟಕಕ್ಕೆ ₹4.71 ಸಿಗುತ್ತಿದ್ದರೆ, 15ನೇ ಆಯೋಗವು ಅದನ್ನು ₹3.64ಕ್ಕೆ ಇಳಿಸಿತು. ಇದರಿಂದ ರಾಜ್ಯಕ್ಕೆ ನೇರವಾಗಿ ಸುಮಾರು ₹80 ಸಾವಿರ ಕೋಟಿಯಷ್ಟು ಬೃಹತ್ ಪ್ರಮಾಣದ ತೆರಿಗೆ ಪಾಲು ಸಿಗದೆ ಅನ್ಯಾಯವಾಯಿತು.


ಇದಲ್ಲದೆ, ಕಲ್ಯಾಣ ಕರ್ನಾಟಕದ ಹಿಂದುಳಿದ ಪ್ರದೇಶ ಮತ್ತು ಜಾಗತಿಕ ಪರಿಸರ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿಗೆ ವಿಶೇಷ ಹೊಂದಾಣಿಕೆಯ ಅನುದಾನ ನೀಡಬೇಕು; ಬರಪೀಡಿತ ಮಧ್ಯ ಕರ್ನಾಟಕಕ್ಕೆ ನೀರು ಒದಗಿಸಲು ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಈ ಹಿಂದೆಯೇ ಘೋಷಿಸಿದ್ದ ₹5,300 ಕೋಟಿ ಬಿಡುಗಡೆಗೊಳಿಸಬೇಕು, ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಿಗೆ ಅನುಮೋದನೆ ನೀಡಬೇಕು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರ ಗೌರವಧನ ₹5,000 ಮತ್ತು ಅಡುಗೆಯವರು ಮತ್ತು ಸಹಾಯಕರಿಗೆ ₹2,000ಕ್ಕೆ ಹೆಚ್ಚಳಗೊಳಿಸಬೇಕು, ಪ್ರಧಾನ ಮಂತ್ರಿ ಆವಾಜ್ ಯೋಜನೆ ನೆರವನ್ನು ನಗರ ಪ್ರದೇಶದ ಮನೆಗಳಿಗೆ ₹1.5 ಲಕ್ಷದಿಂದ ₹5 ಲಕ್ಷಕ್ಕೆ ಮತ್ತು ಗ್ರಾಮೀಣ ಮನೆಗಳಿಗೆ ₹72 ಸಾವಿರದಿಂದ ₹3 ಲಕ್ಷಕ್ಕೆ ಹೆಚ್ಚಿಸಬೇಕು, ವೃದ್ಧಾಪ್ಯ, ವಿಧವೆಯರು ಮತ್ತು ಅಂಗವಿಕಲರ ಪಿಂಚಣಿ ಹೆಚ್ಚಿಸಬೇಕು ಎಂದು ರಾಜ್ಯ ಸರ್ಕಾರವು ಸಾಲು ಸಾಲು ಬೇಡಿಕೆಗಳನ್ನು ಕೇಂದ್ರದ ಮುಂದೆ ಇಟ್ಟಿತ್ತು. ಆದರೆ, 'ನೀವು ಏನೇ ಬೇಡಿಕೆ ಮುಂದಿಟ್ಟರೂ ನಾವು ನಮ್ಮಿಷ್ಟದಂತೆ ಏನು ಬೇಕೋ ಅದನ್ನೇ ಮಾಡುತ್ತೇವೆ' ಎನ್ನುವ ಕೇಂದ್ರದ ವರ್ತನೆಗೆ ಮತ್ತೊಂದು ಬಜೆಟ್ ಸಾಕ್ಷಿಯಾಗಿದೆಯಷ್ಟೆ. ನಮ್ಮ ಮನವಿಗೆ ಕಿವಿಗೊಡದ ಈ ಬಜೆಟ್ ನಮಗೆ ಅಚ್ಚರಿಯನ್ನೇನೂ ನೀಡಿಲ್ಲ; ಆದರೆ, ತನ್ನ ಬೆವರು ಹರಿಸಿ ಕೇಂದ್ರಕ್ಕೆ ತೆರಿಗೆ ನೀಡುವ ಕನ್ನಡಿಗರಿಗೆ ಆಘಾತವನ್ನು ನೀಡಿರುವುದು ಮಾತ್ರ ಸುಳ್ಳಲ್ಲ.

ಲೇಖಕ: ಕರ್ನಾಟಕದ ಕಂದಾಯ ಸಚಿವ, ರಾಷ್ಟ್ರೀಯ ಜಿಎಸ್‌ಟಿ ಮಂಡಳಿ ಸದಸ್ಯ


### ರಾಜ್ಯದ ಬೇಡಿಕೆಗೆ ಕೇಂದ್ರದ ಮೌನ

ದೇಶದ ಆರ್ಥಿಕ ಶಕ್ತಿಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕ ತಲಾವಾರು ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದೆ. ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ವಾರ್ಷಿಕ ₹4.5 ಲಕ್ಷ ಕೋಟಿಯಿಂದ ₹5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ಕೇಂದ್ರ ಸರ್ಕಾರಕ್ಕೆ ಅತಿಹೆಚ್ಚು ಹಣ ಸಂದಾಯ ಮಾಡುವ ರಾಜ್ಯಗಳ ಪೈಕಿ ಮೊದಲ ಸ್ಥಾನದಲ್ಲಿರುವ ಕರ್ನಾಟಕ ತೆರಿಗೆ ಪಾಲು ಮತ್ತು ಅನುದಾನ ಪಡೆಯುವಲ್ಲಿ ಕೆಳಗಿರುವುದು ದುರದೃಷ್ಟಕರ. ಹೀಗಾಗಿ 14ನೇ ಹಣಕಾಸು ಆಯೋಗ ಶಿಫಾರಸು ಮಾಡಿದಂತೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲನ್ನು ಕರ್ನಾಟಕಕ್ಕೆ ನೀಡಬೇಕು ಹಾಗೂ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದ ₹11,495 ಕೋಟಿ ವಿಶೇಷ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂಬುದು ರಾಜ್ಯ ಸರ್ಕಾರದ ಒತ್ತಾಯವಾಗಿತ್ತು. ಆದರೆ, ಕರ್ನಾಟಕಕ್ಕೆ ಶೇ 4.13 ರಷ್ಟು ಮಾತ್ರ ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ. ಇದರಿಂದಲೇ ಕರ್ನಾಟಕಕ್ಕೆ ವಾರ್ಷಿಕವಾಗಿ ಸುಮಾರು ₹9,000 ಕೋಟಿಯಿಂದ ₹10 ಸಾವಿರ ಕೋಟಿವರೆಗೆ ನಷ್ಟವಾಗಲಿದೆ. 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ವಿಶೇಷ ಅನುದಾನ ಬಿಡುಗಡೆಗೆ ಸಂಬಂಧಿಸಿಯೂ ಕೇಂದ್ರ ಸರ್ಕಾರ ಎಂದಿನ ಅದೇ ಮೌನ ವಹಿಸಿದೆ.

Publication Date
14/02/2026




• ಬಸವರಾಜ ಬೊಮ್ಮಾಯಿ



ಹದಿನಾರನೇ ಹಣಕಾಸು ಆಯೋಗ ನೀಡಿರುವ ವರದಿಯನ್ನು ಕೇಂದ್ರ ಸರ್ಕಾರ ಸ್ವೀಕಾರ ಮಾಡಿದೆ. ಈ ಸಂದರ್ಭದಲ್ಲಿ ರಾಜ್ಯದ ಹಣಕಾಸಿನ ಮೇಲೆ ಶಿಫಾರಸುಗಳು ಯಾವ ರೀತಿಯಲ್ಲಿ ಪರಿಣಾಮ ಬೀರಲಿವೆ ಎಂದು ನೋಡುವುದು ಬಹಳ ಮುಖ್ಯ. 16ನೇ ಹಣಕಾಸು ಆಯೋಗವು 15ನೇ ಹಣಕಾಸು ಆಯೋಗಕ್ಕಿಂತ ಬಹಳ ವಿಭಿನ್ನವಾಗಿದೆ. ಹೊಸ ನಿಯಮಗಳು ಮತ್ತು ವಿವಿಧ ಅಂಶಗಳಿಗೆ ನೀಡಿದ ಆದ್ಯತೆಯ (ವೇಟೇಜ್) ಅನುಸಾರ ಕರ್ನಾಟಕ ಸೇರಿದಂತೆ ದೇಶದ ಎಲ್ಲ ರಾಜ್ಯಗಳಿಗೆ ಒಟ್ಟು ₹8 ಲಕ್ಷ ಕೋಟಿ ನೀಡಬೇಕು ಎಂದು ಹಣಕಾಸು ಆಯೋಗ ಶಿಫಾರಸು ಮಾಡಿದೆ. ಈ ಪೈಕಿ ₹4.4 ಲಕ್ಷ ಕೋಟಿಯಷ್ಟನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮತ್ತು ₹3.6 ಲಕ್ಷ ಕೋಟಿ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು ಎಂದು ಆಯೋಗವು ವರದಿಯಲ್ಲಿ ಹೇಳಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಕ್ಕೆ ಶೇ 3.65ರಷ್ಟು ತೆರಿಗೆ ಪಾಲು ಸಿಕ್ಕಿತ್ತು. 16ನೇ ಹಣಕಾಸು ಆಯೋಗವು ಈ ಪಾಲಿನ ಪ್ರಮಾಣವನ್ನು ಶೇ 4.13ಕ್ಕೆ ಹೆಚ್ಚಿಸಿದೆ. ಅಂದರೆ, ಕೇಂದ್ರದಿಂದ ಬರಬೇಕಾದ ಮೊತ್ತದಲ್ಲಿ ಶೇ 15 ರಷ್ಟು ಏರಿಕೆಯಾಗಿದೆ. ಹೀಗಾಗಿ ಕರ್ನಾಟಕಕ್ಕೆ ಹೆಚ್ಚಿನ ಹಣಕಾಸಿನ ನೆರವು ಸಿಗಲಿದೆ. ರಾಜ್ಯಕ್ಕೆ ಈವರೆಗೆ ತೆರಿಗೆ ಪಾಲಾಗಿ ₹55,663 ಕೋಟಿ ಹಣ ಬರುತ್ತಿತ್ತು. 16ನೇ ಹಣಕಾಸು ಆಯೋಗದ ಶಿಫಾರಸಿನಂತೆ ₹63,049 ಕೋಟಿ ಬರಲಿದೆ. ಇದರಿಂದ ರಾಜ್ಯಕ್ಕೆ ₹7,387 ಕೋಟಿ ಹೆಚ್ಚುವರಿಯಾಗಿ ಸಿಗಲಿದೆ. ಇದು ಒಂದು ಭಾಗವಾದರೆ, ಗ್ರ್ಯಾಂಟ್ ಇನ್ ಏಡ್ ಹಂಚಿಕೆಯಲ್ಲೂ ಹೆಚ್ಚಾಗಲಿದೆ. ನೈಸರ್ಗಿಕ ವಿಪತ್ತು ನಿರ್ವಹಣೆಗೆ ₹6,019 ಕೋಟಿ ಮೀಸಲಿಡಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳುವುದು ರಾಜ್ಯ ಸರ್ಕಾರದ ಕೈಯಲ್ಲಿದೆ. ಆದರೆ, ರಾಜ್ಯದ ಸದ್ಯದ ಹಣಕಾಸು ಪರಿಸ್ಥಿತಿ ನೋಡಿದರೆ ಬಹಳ ನಿರಾಸೆಯಾಗುತ್ತದೆ.

2022-23ರಲ್ಲಿ ರಾಜ್ಯದ ರಾಜಸ್ವ ಹೆಚ್ಚಳ ಹೆಚ್ಚು ಇತ್ತು. ಅದನ್ನು ರಾಜಸ್ವ ಕೊರತೆಯ ರಾಜ್ಯ ಮಾಡಿರುವುದು ಈಗಿನ ಸರ್ಕಾರದ ಕೊಡುಗೆ. ರಾಜ್ಯ ಸರ್ಕಾರ ತೀವ್ರ ಸಾಲದ ಸುಳಿಗೆ ಈಗಾಗಲೇ ಸಿಲುಕಿದೆ. ಕಳೆದ ವರ್ಷ ₹1.16 ಲಕ್ಷ ಕೋಟಿ ಸಾಲ ಪಡೆದಿದ್ದರೂ ಬಜೆಟ್‌ನಲ್ಲಿ ಹೇಳಿದಂತೆ ಆ ಮೊತ್ತವನ್ನು ಬಂಡವಾಳ ಹೂಡಿಕೆಗೆ ಬಳಸುವಲ್ಲಿ ವಿಫಲವಾಗಿದೆ. ಹೀಗಾಗಿ ಶಾಲೆ, ಗ್ರಾಮೀಣ ರಸ್ತೆಗಳು, ರಾಜ್ಯ ಮಟ್ಟದ ರಸ್ತೆಗಳ ನಿರ್ಮಾಣ ನಿಧಾನಗತಿಯಲ್ಲಿ ನಡೆಯುತ್ತಿದೆ. ಜೊತೆಗೆ ರಾಜ್ಯ ಸರ್ಕಾರವು ಒಟ್ಟು ರಾಜ್ಯದ ರಾಜಸ್ವ ವೆಚ್ಚದಲ್ಲಿ ಶೇ 9.26ರಷ್ಟು ಮೊತ್ತವನ್ನು ನೇರ ಹಣ ವರ್ಗಾವಣೆ ಮೂಲಕ (ಗ್ಯಾರಂಟಿಗಳಿಗೆ ಕೊಡುತ್ತಿದೆ) ರಾಜಕೀಯ ಲಾಭಕ್ಕಾಗಿ ಮಾಡುತ್ತಿರುವುದು ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ಬಹಳ ದೊಡ್ಡ ಹೊರೆ ಬೀಳುವಂತೆ ಮಾಡಿದೆ. ಜೊತೆಗೆ, ರಾಜ್ಯ ಸರ್ಕಾರ ಪ್ರತಿ ವರ್ಷ ಒಟ್ಟು ಆದಾಯದಲ್ಲಿ ಸಾಲದ ನಿರ್ವಹಣೆಗೆ ಅತಿ ಹೆಚ್ಚು ಖರ್ಚು ಮಾಡುತ್ತಿದೆ. ಒಟ್ಟು ರಾಜಸ್ವ ಆದಾಯದಲ್ಲಿ ಶೇ 14ರಷ್ಟು ಸಾಲದ ಮರುಪಾವತಿಗೆ ವೆಚ್ಚ ಮಾಡುತ್ತಿರುವುದು ಅತ್ಯಂತ ಕಳವಳಕಾರಿ. ಸರ್ಕಾರವು ತನ್ನ ಒಟ್ಟು ಆದಾಯದಲ್ಲಿ ಶೇ 83ರಷ್ಟನ್ನು ರಾಜಸ್ವ ವೆಚ್ಚಕ್ಕೆ ಅಂದರೆ ಸಂಬಳ, ಪಿಂಚಣಿ, ಸಾಲ ತೀರಿಸಲು ಮತ್ತು ಸಬ್ಸಿಡಿಗೆ ಖರ್ಚು ಮಾಡುತ್ತಿರುವುದರಿಂದ ಅಭಿವೃದ್ಧಿಗೆ ಹಣ ಇಲ್ಲದಿರುವುದು ಸ್ಪಷ್ಟವಾಗಿದೆ. ಸಾಲ ಪಡೆದು ಜನಪ್ರಿಯ ಯೋಜನೆಗಳಿಗೆ ಹಣ ಕೊಡುತ್ತಿರುವುದು ರಾಜ್ಯವನ್ನು ಆರ್ಥಿಕ ಬಿಕ್ಕಟ್ಟಿಗೆ ತಳ್ಳುವುದರಲ್ಲಿ ಅನುಮಾನವಿಲ್ಲ. 2025ರ ಮಾರ್ಚ್‌ಗೆ ಕರ್ನಾಟಕದ ವರಮಾನದಲ್ಲಿ ಶೇ 26ಕ್ಕಿಂತ ಹೆಚ್ಚು ಮೊತ್ತ ಸಾಲದಿಂದ ಬರುತ್ತಿರುವುದು ಸರ್ಕಾರ ಮಂಡಿಸಿರುವ ಬಜೆಟ್‌ನಿಂದ ಗೊತ್ತಾಗುತ್ತದೆ. ಹೀಗೆ, ಸಂಪೂರ್ಣವಾಗಿ ಎಲ್ಲ ಗಡಿ ಮೀರಿರುವ ಆರ್ಥಿಕ ನಿರ್ವಹಣೆಯನ್ನು ಸರಿಪಡಿಸದೆ, ಕೇಂದ್ರದ ಮೇಲೆ ಪದೇ ಪದೇ ಟೀಕೆ ಮಾಡುವುದು, ಅನ್ಯಾಯ ಆಗಿದೆ ಅಂತ ಕೂಗು ಹಾಕುವುದರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಸುಳ್ಳನ್ನೇ ನೂರು ಬಾರಿ ಹೇಳಿ ಸತ್ಯ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಜಿಎಸ್‌ಟಿಯಿಂದಾಗಿ ರಾಜ್ಯದ ಆದಾಯ ಕಡಿಮೆ ಆಗಿದೆ ಎಂಬುದು ಅವರು ಮಾಡುವ ಪ್ರಮುಖ ಆಪಾದನೆಗಳಲ್ಲೊಂದು. ಮೊದಲು ಜಾರಿಯಲ್ಲಿದ್ದ ಅಬಕಾರಿ ತೆರಿಗೆ, ಮಾರಾಟ ತೆರಿಗೆ ಹಾಗೂ ಇನ್ನಿತರ ತೆರಿಗೆಗಳು ಒಂದು ರೀತಿಯಲ್ಲಿ ತೆರಿಗೆ ಭಯೋತ್ಪಾದನೆಯಂತಿದ್ದವು. ಹಲವು ತೆರಿಗೆಗಳಿಂದಾಗಿ ವ್ಯಾಪಾರಸ್ಥರಿಗೆ, ತೆರಿಗೆದಾರರಿಗೆ, ಜನಸಾಮಾನ್ಯರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಕಿರುಕುಳ ಆಗುತ್ತಿತ್ತು. ಈಗ ಜಾರಿಯಲ್ಲಿರುವ ಜಿಎಸ್‌ಟಿ ಪರಿಕಲ್ಪನೆ ಬಿಜೆಪಿಯದ್ದಲ್ಲ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವೇ ಜಿಎಸ್‌ಟಿ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡನೆ ಮಾಡಿತ್ತು. ಆದರೆ, ಅದಕ್ಕೆ ಜಾರಿಗೊಳಿಸಲು ಸಾಧ್ಯವಾಗಲಿಲ್ಲ. ಅವರು ಈ ಹಿಂದೆ ಮಂಡಿಸಿದ್ದ ಕಾನೂನನ್ನು ಈಗ ಅವರೇ ವಿರೋಧಿಸುತ್ತಿರುವುದು ಕಾಂಗ್ರೆಸ್‌ನವರ ಹೊಸ ನೀತಿ. ಜಿಎಸ್‌ಟಿ ಜಾರಿಯ ನಂತರದಲ್ಲಿ ರಾಜ್ಯಗಳಿಗೆ ಆಗುತ್ತಿದ್ದ ನಷ್ಟವನ್ನು ತಪ್ಪಿಸುವುದಕ್ಕಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವರಮಾನ ನಷ್ಟ ಪರಿಹಾರವನ್ನು (ಶೇ 14ರಷ್ಟು ವಾರ್ಷಿಕ ಅಭಿವೃದ್ಧಿಯ ಆಧಾರದಲ್ಲಿ) ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಿಗೆ 2022ರವೆಗೆ ಐದು ವರ್ಷ ನೀಡಿದೆ. ಹೀಗಾಗಿ, ಈಗ ಕಾಂಗ್ರೆಸ್‌ನವರು ಮಾಡುತ್ತಿರುವ ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ.

15ನೇ ಹಣಕಾಸಿನ ಆಯೋಗದ ಅನುದಾನದ ಒಟ್ಟು ಮೊತ್ತ 14ನೇ ಹಣಕಾಸಿನ ಆಯೋಗಕ್ಕಿಂತ ದೊಡ್ಡದಿರುವುದರಿಂದ ರಾಜ್ಯಕ್ಕೆ ₹1 ಲಕ್ಷ ಕೋಟಿ ಹೆಚ್ಚು ಹಣ ಬಂದಿದೆ. ಆದರೆ, ರಾಜ್ಯ ಸರ್ಕಾರ ಇದನ್ನು ಮುಚ್ಚಿ ಹಾಕುತ್ತಿದೆ. ತನ್ನ ವೈಫಲ್ಯ ಮರೆಮಾಚಲು ಪ್ರಯತ್ನ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳ ಪರಿಣಾಮ ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಅತ್ಯಂತ ಕಡಿಮೆ ದುಡ್ಡು ಖರ್ಚು ಮಾಡಲಾಗುತ್ತಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ರಾಜ್ಯಕ್ಕೆ ಹಿನ್ನಡೆಯಾಗಿರುವುದು ತುಂಬಲಾರದ ನಷ್ಟ. ಇದನ್ನು ಸರಿಪಡಿಸಲು ಮುಂದೆ ಬರುವಂತಹ ಸರ್ಕಾರ ಹರಸಾಹಸ ಪಡಬೇಕಾಗುತ್ತದೆ. ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚು ಸಾಲ ಮಾಡಿದ್ದರು. ಈಗಲೂ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಈ ಅವಧಿಯಲ್ಲಿ ₹6 ಲಕ್ಷ ಕೋಟಿಗಿಂತ ಹೆಚ್ಚು ಹೊರೆಯನ್ನು ರಾಜ್ಯದ ಜನರ ಮೇಲೆ ಹೇರಲಿದ್ದಾರೆ. ಇದು ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಅತಿ ದೊಡ್ಡ ಅನ್ಯಾಯ.

ಇದನ್ನು ಸರಿಯಾಗಿ ನಿರ್ವಹಿಸಲು ಕೇಂದ್ರ ಸರ್ಕಾರ 50 ವರ್ಷಕ್ಕೆ ಬಂಡವಾಳ ವೆಚ್ಚದ ಮೇಲೆ ಸಾಲ ಕೊಡುತ್ತಿರುವುದನ್ನು ಬಳಸಿಕೊಳ್ಳಬೇಕು. ಬಂಡವಾಳ ವೆಚ್ಚ ಹೆಚ್ಚು ಮಾಡಬೇಕು. ಗ್ಯಾರಂಟಿ ಜೊತೆಗೆ ಗ್ಯಾರಂಟಿ ಉಸ್ತುವಾರಿಗಳಿಗೆ, ಸಾಧನಾ ಸಮಾವೇಶಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. 50ಕ್ಕೂ ಹೆಚ್ಚು ನಿಗಮ ಮಂಡಳಿ ಅಧ್ಯಕ್ಷರಿಗೆ ಸಂಪುಟ ಸಚಿವ ಸ್ಥಾನ ಕೊಟ್ಟು ವೆಚ್ಚ ಮಾಡುತ್ತಿದ್ದಾರೆ. ರಾಜಕೀಯ ವೆಚ್ಚವನ್ನು ಸಂಪೂರ್ಣವಾಗಿ ತೆಗೆದು ಹಾಕಿ, ಅನುಪಯುಕ್ತ ವೆಚ್ಚ ಕಡಿಮೆ ಮಾಡಿ ರಾಜ್ಯದ ಜನರ ಮೇಲೆ ಈಗಾಗಲೇ ₹1 ಲಕ್ಷ ಕೋಟಿ ಹೊಸ ತೆರಿಗೆ ಹಾಕಿದ್ದಾರೆ. ಅದನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಸಿದ್ದರಾಮಯ್ಯ ಪ್ರಯತ್ನ ಮಾಡಬೇಕು. ಕೇಂದ್ರದ ಮೇಲೆ ದೂಷಣೆ ಮಾಡುವುದನ್ನು, ಸುಳ್ಳು ಹೇಳಿ ರಾಜ್ಯದ ಜನರ ದಾರಿ ತಪ್ಪಿಸುವುದನ್ನು ಬಿಡಬೇಕು. ಜನರಿಗೆ ಸತ್ಯ ಹೇಳಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ರಾಜ್ಯಕ್ಕೆ ಹಣಕಾಸಿನ ಸಂಕಷ್ಟ ತಂದಿರುವ ಮುಖ್ಯಮಂತ್ರಿ ಎನ್ನುವ ಅಪಖ್ಯಾತಿಗೆ ಅವರು ಗುರಿಯಾಗಲಿದ್ದಾರೆ. ಇದು ನನ್ನೊಬ್ಬನದ್ದಲ್ಲ; ರಾಜ್ಯದ ಜನಸಾಮಾನ್ಯರ ಅಭಿಪ್ರಾಯವೂ ಹೌದು.

ಲೇಖಕ: ಸಂಸದ, ಮಾಜಿ ಮುಖ್ಯಮಂತ್ರಿ

### ಸೆಸ್: ಸುಳ್ಳು ಆರೋಪ

ಅವರು ಮಾಡುತ್ತಿರುವ ಎರಡನೇ ಆರೋಪ ಸೆಸ್‌ನಲ್ಲಿ ರಾಜ್ಯಕ್ಕೆ ಪಾಲಿಲ್ಲ ಎನ್ನುವುದು. ಈ ವ್ಯವಸ್ಥೆ 1960ರಿಂದಲೇ ಜಾರಿಯಲ್ಲಿದೆ. ಸೆಸ್ ಎನ್ನುವುದು ವಿಶೇಷ ಕಾರ್ಯಕ್ರಮಗಳಿಗೆ ಇರುವಂತಹದ್ದು. ಇದನ್ನು ಸಂಸತ್ತಿನ ಮೂಲಕ ಅವತ್ತಿನ ಕಾಂಗ್ರೆಸ್ ಸರ್ಕಾರವೇ ಜಾರಿ ಮಾಡಿದೆ. ಅದು ಸಿ.ಎಂ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲವೇ? ಹಿಂದೆ ಅವರೇ ರೂಪಿಸಿರುವ ಕಾನೂನನ್ನು ಈಗ ಅವರೇ ಟೀಕಿಸುತ್ತಿದ್ದಾರೆ. ಜಿಎಸ್‌ಟಿ ಬಂದ ಮೇಲೆ ಮದ್ಯ, ತಂಬಾಕಿನ ಮೇಲಿನ ಸೆಸ್ ವರಮಾನವನ್ನು ಎಲ್ಲ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ರೂಪದಲ್ಲಿ ಕೊಡಲು ತೀರ್ಮಾನ ಮಾಡಿದ್ದರಿಂದ ಸೆಸ್‌ನಲ್ಲಿ ರಾಜ್ಯದ ಪಾಲು ಇದೆ ಎನ್ನುವುದು ಸ್ಪಷ್ಟ. 15ನೇ ಹಣಕಾಸು ಆಯೋಗದ ವರದಿಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ ಸರ್ಕಾರವೇ ನೇರ ಹೊಣೆ. ಅವರ ಸರ್ಕಾರ ಇದ್ದಾಗಲೇ ವರದಿ ಅಂತಿಮವಾಗಿದ್ದು, ಮತ್ತು 15ನೇ ಹಣಕಾಸು ಆಯೋಗದ ಹಣ ವಿತರಣೆಗೆ ಕರಾರುಗಳನ್ನು ನಿರ್ಧಾರ ಮಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವೇ ಇತ್ತು. ಅವರ ಸರ್ಕಾರದ ಐದು ಜನ ಸಚಿವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಆಗ ಪ್ರತಿಭಟಿಸದೆ ಈಗ ಕೇಂದ್ರದ ಮೇಲೆ ಗೂಬೆ ಕೂರಿಸುವುದು ರಾಜಕೀಯ ಪ್ರೇರಿತವಾದ ನಡೆಯಾಗುತ್ತದೆ.

Presented by

# ಬ್ಯಾಂಕ್ ಕನಿಷ್ಠ ಮೊತ್ತ: ದಂಡ ವಿಧಿಸಬೇಡಿ

## ಸಂಸದ ಚಂದ್ರಪ್ರಕಾಶ್ ಜೋಶಿ ನೇತೃತ್ವದ ಸಮಿತಿ ಶಿಫಾರಸು; ಮಾರ್ಗಸೂಚಿ ಹೊರಡಿಸಲು ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಕಾರಣಕ್ಕಾಗಿ ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ವಲಯದ ಬ್ಯಾಂಕ್‌ಗಳು 2024–25ನೇ ಸಾಲಿನಲ್ಲಿ ₹4,817.96 ಕೋಟಿ ದಂಡ ವಿಧಿಸಿವೆ. ಬ್ಯಾಂಕ್‌ಗಳು ದಂಡ ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಈ ಸಂಬಂಧ ಆರ್‌ಬಿಐ ಹಾಗೂ ಹಣಕಾಸು ಸೇವಾ ಇಲಾಖೆಯು ಅಗತ್ಯ ಮಾರ್ಗಸೂಚಿ ಹೊರಡಿಸಬೇಕು ಎಂದು ಲೋಕಸಭೆಯ ಅರ್ಜಿಗಳ ಸಮಿತಿ ಶಿಫಾರಸು ಮಾಡಿದೆ.

'ಬ್ಯಾಂಕ್‌ಗಳು ಗ್ರಾಹಕರಿಗೆ ದಂಡ ವಿಧಿಸುವ ಬದಲು ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವ ಮೂಲಕ ಕನಿಷ್ಠ ಮೊತ್ತ



ಕಾಯ್ದುಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಜತೆಗೆ, ಸ್ಥಿರ ಠೇವಣಿ ನಿರ್ವಹಣೆ ಮಾಡುವವರಿಗೆ ಹೆಚ್ಚಿನ ಬಡ್ಡಿದರ ನೀಡಬಹುದು' ಎಂದು ಬಿಜೆಪಿ ಸಂಸದ ಚಂದ್ರಪ್ರಕಾಶ್ ಜೋಶಿ ನೇತೃತ್ವದ 15 ಸದಸ್ಯರ ಸಮಿತಿ ಸಲಹೆ ನೀಡಿದೆ.

'ಸರ್ಕಾರಿ ಸ್ವಾಮ್ಯದ ಬಹುತೇಕ ಬ್ಯಾಂಕ್‌ಗಳು ಈ ದಂಡವನ್ನು ಕೈಬಿಡಲು ನಿರ್ಧರಿಸಿದ್ದರೂ, ಆರ್‌ಬಿಐ ಈ ಬಗ್ಗೆ

### ಮುಖ್ಯಾಂಶಗಳು

- ಪರಮೇಶ್ವರನ್ ಕೃಷ್ಣ ಅಯ್ಯರ್ ಸಲ್ಲಿಸಿದ್ದ ದೂರು
- 2024–25ನೇ ಸಾಲಿನಲ್ಲಿ ₹4,817.96 ಕೋಟಿ ದಂಡ ಸಂಗ್ರಹ
- ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವಂತೆ ಸಲಹೆ

ಯಾವುದೇ ನಿರ್ದೇಶನ ಅಥವಾ ಮಾರ್ಗಸೂಚಿ ಹೊರಡಿಸಿಲ್ಲ. ಖಾಸಗಿ ವಲಯದ ಬ್ಯಾಂಕ್‌ಗಳು ಇನ್ನೂ ದಂಡ ವಿಧಿಸುತ್ತಿವೆ. ಹೀಗಾಗಿ, ಎಲ್ಲ ಬ್ಯಾಂಕ್‌ಗಳು ಏಕರೂಪದ ನೀತಿಯನ್ನು

### ಅಂಕಿ ಅಂಶಗಳು

**₹2,045.21 ಕೋಟಿ** ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ವಿಧಿಸಿದ ದಂಡ

**₹2,772.21 ಕೋಟಿ** ಖಾಸಗಿ ವಲಯದ 13 ಬ್ಯಾಂಕ್‌ಗಳು ವಿಧಿಸಿದ ದಂಡ

ಅಳವಡಿಸಿಕೊಳ್ಳಬೇಕು. ಸಹಕಾರ ಬ್ಯಾಂಕ್ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಎಲ್ಲ ಬ್ಯಾಂಕ್‌ಗಳಿಗೆ ಅಗತ್ಯ ಮಾರ್ಗಸೂಚಿ ರೂಪಿಸಬೇಕು' ಎಂದು ಹೇಳಿದೆ.

ಬೆಂಗಳೂರಿನ ಬಂಬೂಪೆಕರ್ ಕಂಪನಿ ಮಾಲೀಕ ಪರಮೇಶ್ವರನ್ ಕೃಷ್ಣ ಅಯ್ಯರ್ ಅವರು ಸಲ್ಲಿಸಿದ್ದ ದೂರಿನ ಮೇರೆಗೆ ಈ ಶಿಫಾರಸು ಮಾಡಲಾಗಿದೆ.

'ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಂಡ ಗ್ರಾಹಕರಿಗೆ ಸಿಗುವುದು ಅಲ್ಪ ಬಡ್ಡಿ ದರ ಮಾತ್ರ. ಒಂದು ವೇಳೆ, ಕನಿಷ್ಠ ಮೊತ್ತ ಕಾಯ್ದುಕೊಳ್ಳಲು ವಿಫಲವಾದರೆ ಬ್ಯಾಂಕ್ ವಿಧಿಸುವ ದಂಡವು ಬಡ್ಡಿಗಿಂತ 15ರಿಂದ 20 ಪಟ್ಟು ಹೆಚ್ಚಾಗಿರುತ್ತದೆ. ಬಡ್ಡಿ ಮತ್ತು ದಂಡದ ನಡುವಿನ ಈ ಭಾರಿ ವ್ಯತ್ಯಾಸವು ನ್ಯಾಯಸಮ್ಮತವಲ್ಲ. ಇದರಿಂದ ಗ್ರಾಹಕರ ಮೇಲೆ ಆರ್ಥಿಕ ಹೊರೆ ಬೀಳುತ್ತದೆ' ಎಂದು ಅಯ್ಯರ್ ಅರ್ಜಿಯಲ್ಲಿ ತಿಳಿಸಿದ್ದರು.

ಈ ದೂರನ್ನು ಪರಿಶೀಲಿಸಿದ ಸಮಿತಿ, ಲೋಕಸಭೆಯಲ್ಲಿ ಗುರುವಾರ ವರದಿಯನ್ನು ಮಂಡಿಸಿದೆ. ಬಿಹಾರದ ಮಹಿಳೆಯೊಬ್ಬರಿಗೆ ಮನರೇಗಾ (ಈಗ ವಿಬಿ–ಜಿ ರಾಮ್ ಜಿ) ಯೋಜನೆಯಡಿ ಬಂದಿದ್ದ ₹500 ಪೈಕಿ ₹440 ಮೊತ್ತವನ್ನು ಬ್ಯಾಂಕ್ ಕಡಿತಗೊಳಿಸಿರುವ ಹಾಗೂ ವ್ಯಕ್ತಿಯೊಬ್ಬರು ತನ್ನ ಮಗನ ಖಾತೆಯಲ್ಲಿ ಠೇವಣಿ ಇಟ್ಟಿದ್ದ ₹5 ಸಾವಿರ ಪೈಕಿ ₹2,500 ಮೊತ್ತವನ್ನು ಮತ್ತೊಂದು ಬ್ಯಾಂಕ್ ಕಡಿತಗೊಳಿಸಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

# 25 ಲಕ್ಷ ಟನ್ ಗೋಧಿ ರಫ್ತಿಗೆ ಒಪ್ಪಿಗೆ

## ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತಿಗೂ ಅನುಮೋದನೆ: ಕೇಂದ್ರ

ನವದೆಹಲಿ (ಪಿಟಿಐ): 25 ಲಕ್ಷ ಟನ್‌ನಷ್ಟು ಗೋಧಿ ರಫ್ತು ಮಾಡಲು ಕೇಂದ್ರ ಸರ್ಕಾರ ಶುಕ್ರವಾರ ಅನುಮೋದನೆ ನೀಡಿದೆ. ಇದೇ ವೇಳೆ ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತಿಗೂ ಸಹ ಒಪ್ಪಿಗೆ ನೀಡಿದೆ.

ಪ್ರಸ್ತುತ ಲಭ್ಯತೆ ಇರುವ ದಾಸ್ತಾನು ಮತ್ತು ಬೆಲೆಯ ಸನ್ನಿವೇಶವನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿದ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದು ರೈತರ ಹಿತಾಸಕ್ತಿಗಳನ್ನು ರಕ್ಷಿಸುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಈಗ ಅಂದಾಜು 75 ಲಕ್ಷ ಟನ್ ಗೋಧಿ ದಾಸ್ತಾನು ಇದೆ.



ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ 32 ಲಕ್ಷ ಟನ್‌ಗೂ ಅಧಿಕ ಎಂದು ತಿಳಿಸಿದೆ.

2026ರ ಏಪ್ರಿಲ್ 1ರ ವೇಳೆಗೆ ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಂದಾಜು 182 ಲಕ್ಷ ಟನ್ ಗೋಧಿ ಲಭ್ಯವಾಗುವ ನಿರೀಕ್ಷೆ ಇದೆ. ಹೀಗಾಗಿ, ರಫ್ತು ಅನುಮತಿ ದೇಶದ ಆಹಾರದ ಅಗತ್ಯಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದೆ.

ಕಳೆದ ವರ್ಷದ ಹಿಂಗಾರು ಹಂಗಾಮಿನಲ್ಲಿ ದೇಶದಲ್ಲಿ 328 ಲಕ್ಷ ಹೆಕ್ಟೇರ್‌ನಲ್ಲಿ ಗೋಧಿ ಬಿತ್ತನೆ ಆಗಿತ್ತು. ಅದು ಈ ಬಾರಿ 334 ಲಕ್ಷ ಹೆಕ್ಟೇರ್‌ಗೆ ಹೆಚ್ಚಳವಾಗಿದೆ. ಇದು ಗೋಧಿ ಕೃಷಿಯಲ್ಲಿ ಹೆಚ್ಚುತ್ತಿರುವ ರೈತರ ದೃಢವಾದ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದೆ.

ಹೆಚ್ಚಿನ ಗೋಧಿ ಲಭ್ಯತೆ, ಬೆಲೆ ಇಳಿಕೆ, ಉತ್ಪಾದನೆ ಹೆಚ್ಚುವ ನಿರೀಕ್ಷೆ ಮತ್ತು ಮಾರಾಟದ ಸಮಯದಲ್ಲಿ ಉಂಟಾಗುವ ತೊಂದರೆಯನ್ನು ತಡೆಯಲು ಸರ್ಕಾರವು ರಫ್ತು ನಿರ್ಧಾರವನ್ನು ಕೈಗೊಂಡಿದೆ. ಸರ್ಕಾರದ ನಿರ್ಧಾರವು ದೇಶೀಯ ಮಾರುಕಟ್ಟೆಯಲ್ಲಿ ದರವನ್ನು ಸ್ಥಿರಗೊಳಿಸಲಿದೆ ಮತ್ತು ರೈತರ ಆದಾಯವನ್ನು ಸುಧಾರಿಸಲಿದೆ ಎಂದು ಹೇಳಿದೆ.

2025-26ರ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಸರ್ಕಾರ ಅನುಮೋದನೆ ನೀಡಿದೆ.

ಸಕ್ಕರೆ ಕಾರ್ಖಾನೆಗಳು ಒದಗಿಸಿದ ಮಾಹಿತಿಯ ಪ್ರಕಾರ, ಜನವರಿ 31ರವರೆಗೆ ಸುಮಾರು 1.97 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ರಫ್ತು ಮಾಡಲಾಗಿದೆ. ಇದರ ಜೊತೆಗೆ, ಇಲ್ಲಿಯವರೆಗೆ ಸಕ್ಕರೆ ಕಾರ್ಖಾನೆಗಳು ಸುಮಾರು 2.72 ಲಕ್ಷ ಟನ್ ಸಕ್ಕರೆ ರಫ್ತಿಗೆ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿಸಿದೆ.

## ❖ ಮಲೇಷ್ಯಾ: ಪ್ರವಾಸಿಗರಿಗೆ ವೀಸಾ ಅಗತ್ಯವಿಲ್ಲ

**ಸಂದರ್ಭ: ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಈ ವರ್ಷದ ಡಿಸೆಂಬರ್‌ವರೆಗೂ ವೀಸಾ ರದ್ದುಪಡಿಸಿದ್ದು, ಸುಮಾರು 21 ಲಕ್ಷ ಮಂದಿ ಭಾರತೀಯರು ಈ ವರ್ಷ ಮಲೇಷ್ಯಾಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಮಲೇಷ್ಯಾದ ಪ್ರವಾಸೋದ್ಯಮ ಇಲಾಖೆ ಅಂದಾಜಿಸಿದೆ.**

- ಭಾರತ, ಚೀನಾ, ಆಸಿಯಾನ್ ಮತ್ತಿತರ ದೇಶಗಳಿಂದ ಮಲೇಷ್ಯಾಗೆ ಪ್ರವಾಸಿಗರು ಹೆಚ್ಚಾಗಿ ಬರುತ್ತಾರೆ. ಅವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ವೀಸಾ ರದ್ದುಪಡಿಸಲಾಗಿದೆ ಎಂದು ಮಲೇಷ್ಯಾದ ಪ್ರವಾಸೋದ್ಯಮ ಮಂಡಳಿಯ ಅಧ್ಯಕ್ಷ ಡಿ. ಮನೋಹರನ್ ಅವರು ತಿಳಿಸಿದ್ದಾರೆ.
- ಭಾರತದಿಂದ 2025ರಲ್ಲಿ ಸುಮಾರು 15.65 ಲಕ್ಷ ಹಾಗೂ 2024ರಲ್ಲಿ 13.65 ಲಕ್ಷ ಮಂದಿ ಪ್ರವಾಸಿಗರು ಮಲೇಷ್ಯಾಗೆ ಬಂದಿದ್ದರು. 2024ಕ್ಕೆ ಹೋಲಿಸಿದರೆ ಕಳೆದ ವರ್ಷ ಪ್ರವಾಸಿಗರ ಸಂಖ್ಯೆ ಶೇ 14.6ರಷ್ಟು ಹೆಚ್ಚಾಗಿದೆ. ಈ ವರ್ಷ ಭಾರತದಿಂದ ಬರುವ ಪ್ರವಾಸಿಗರ ಸಂಖ್ಯೆ 21 ಲಕ್ಷಕ್ಕೂ ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.
- ಬೆಂಗಳೂರಿನಿಂದ ವಾರದಲ್ಲಿ 30 ವಿಮಾನಗಳು ಮಲೇಷ್ಯಾಗೆ ಸಂಚರಿಸುತ್ತವೆ. ರಜಾ ದಿನಗಳನ್ನು ಕಳೆಯಲು, ಮದುವೆ ಸಮಾರಂಭಗಳನ್ನು ಆಯೋಜಿಸಲು ಮಲೇಷ್ಯಾದ ಪ್ರವಾಸಿ ತಾಣಗಳಲ್ಲಿ ಅವಕಾಶವಿದೆ. ಈ ನಿಟ್ಟಿನಲ್ಲಿ ಅರಿವು ಮೂಡಿಸಲು ಮಲೇಷ್ಯಾದ ಪ್ರವಾಸೋದ್ಯಮ ಇಲಾಖೆ ಮತ್ತು ಮಲೇಷ್ಯಾದ ಅಸೋಸಿಯೇಷನ್ ಆಫ್ ಟೂರ್ ಅಂಡ್ ಟ್ರಾವೆಲ್ ಏಜೆಂಟ್ಸ್ ಸಹಭಾಗಿತ್ವದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ 'ಸೇಲ್ಸ್ ಮಿಷನ್ 2026 ಕಾರ್ಯಕ್ರಮ ಯಶಸ್ವಿಯಾಯಿತು ಎಂದು ಅವರು ತಿಳಿಸಿದ್ದಾರೆ.
- ಚೆನ್ನೈ ನಲ್ಲಿರುವ ಮಲೇಷ್ಯಾದ ಕಾನ್ಸುಲ್ ಜನರಲ್ ಕೆ.ಸರವಣ ಕುಮಾರ್ ಮಾತನಾಡಿ. ಮಲೇಷ್ಯಾ ಮತ್ತು ಭಾರತ ನಡುವಿನ ಸಂಬಂಧ ವೃದ್ಧಿಸುವಲ್ಲಿ ಪ್ರವಾಸೋದ್ಯಮದ ಪಾತ್ರ ಪ್ರಮುಖವಾಗಿದೆ ಎಂದರು.

# ಕೊನೆಯ ದಿನವೂ ಭಾರತ ಶೂಟರ್‌ಗಳ ಪ್ರಾಬಲ್ಯ

# ಏಷ್ಯನ್ ಶೂಟಿಂಗ್: ಅಮನ್‌ಪ್ರೀತ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ದಿಗ್ಗಜ ಪಿಸ್ತೂಲ್ ಶೂಟರ್ ಅಮನ್‌ಪ್ರೀತ್ ಸಿಂಗ್ ಅವರು ಶುಕ್ರವಾರ ಮುಕ್ತಾಯಗೊಂಡ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 25 ಮೀ. ಸೆಂಟರ್ ಫೈರ್ ಸ್ಪರ್ಧೆಯಲ್ಲಿ ಸ್ವರ್ಣ ಗೆದ್ದು ಬೀಗಿದರು. ಒಲಿಂಪಿಯನ್ ಗುರುಪ್ರೀತ್ ಸಿಂಗ್ ಹಾಗೂ ಅಂಕುರ್ ಗೋಯಲ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಆತಿಥೇಯ ಭಾರತವು ಸೀನಿಯರ್ ವಿಭಾಗದಲ್ಲಿ ಒಟ್ಟು 33 ಪದಕಗಳನ್ನು (13 ಚಿನ್ನ, 11 ಬೆಳ್ಳಿ, 9 ಕಂಚು) ಜಯಿಸಿ, ಪದಕ-ಪಟ್ಟಿಯಲ್ಲಿ ಅಗ್ರಸ್ಥಾನಿಯಾಯಿತು. ಜೂನಿಯರ್ ವಿಭಾಗದಲ್ಲಿ ಆತಿಥೇಯ ಶೂಟರ್‌ಗಳು ಒಟ್ಟು 61 ಪದಕಗಳಿಗೆ (38 ಚಿನ್ನ, 12 ಬೆಳ್ಳಿ, 11 ಕಂಚು) ಗುರಿಯಿಟ್ಟರು.

38 ವರ್ಷ ವಯಸ್ಸಿನ ಅಮನ್‌ಪ್ರೀತ್ ಅವರು ಫೈನಲ್ ಸುತ್ತಿನಲ್ಲಿ 589 ಅಂಕ ಕಲೆಹಾಕಿದರು. ಗುರ್‌ಪ್ರೀತ್ ಹಾಗೂ ಅಂಕುಲ್ ಕ್ರಮವಾಗಿ 584 ಮತ್ತು 570 ಅಂಕ ಪಡೆದರು. ಅದರೊಂದಿಗೆ ಭಾರತದ ಶೂಟರ್‌ಗಳು ಎಲ್ಲ ಮೂರು ಪದಕ ಗೆದ್ದು ಪಾರಮ್ಯ ಮೆರೆದರು.

ಟೀಮ್ ವಿಭಾಗದಲ್ಲಿಯೂ ಆತಿಥೇಯ ಶೂಟರ್‌ಗಳು ಸ್ವರ್ಣ (1,743) ತಮ್ಮದಾಗಿಸಿಕೊಂಡರು. ವಿಯೆಟ್ನಾಂ (1,671) ರಜತ ಪದಕ ಗೆದ್ದುಕೊಂಡಿತು.

ಪರಿಣತ ಶೂಟರ್ ಸಿಫ್ಟ್ ಕೌರ್ ಸಮ್ರಾ ಅವರು ಮಹಿಳೆಯರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಸ್ವಲ್ಪ-ದರಲ್ಲಿಯೇ ಚಿನ್ನ ತಪ್ಪಿಸಿಕೊಂಡರು. ತೀವ್ರ ಪೈಪೋಟಿಯಿದ್ದ ಫೈನಲ್ ಸುತ್ತಿನಲ್ಲಿ ಸಮ್ರಾ 623.2 ಅಂಕ ಸಂಪಾದಿಸಿದರು. ಕಜಾಕಸ್ತಾನದ ಯೆಲಿಝುವೆಟಾ ಬೆಝ್ರುಕೊವಾ (623.4) ಸ್ವರ್ಣಕ್ಕೆ ಕೊರಳೊಡ್ಡಿದರೆ, ತೇಜಸ್ವಿನಿ ಸಾವಂತ್ (621) ಕಂಚು ತಮ್ಮದಾಗಿಸಿಕೊಂಡರು.




ಪುರುಷರ 25 ಮೀ. ಸೆಂಟರ್ ಫೈರ್ ಸ್ಪರ್ಧೆಯ ಪದಕ ವಿಜೇತರು: (ಎಡದಿಂದ) ಗುರ್‌ಪ್ರೀತ್ ಸಿಂಗ್, ಅಮನ್‌ಪ್ರೀತ್ ಸಿಂಗ್ ಹಾಗೂ ಅಂಕುಲ್ ಗೋಯಲ್

ಸಮ್ರಾ, ತೇಜಸ್ವಿನಿ ಹಾಗೂ ಮಾನಿನಿ ಕೌಶಿಕ್ ಅವರಿಗೆ (ಒಟ್ಟು 1862.9 ಅಂಕ) ಟೀಮ್ ವಿಭಾಗದಲ್ಲಿ ಸ್ವರ್ಣ ಒಲಿಯಿತು. ಕಜಾಕಸ್ತಾನ (1862.8) ಬೆಳ್ಳಿ ಪದಕ ಗೆದ್ದುಕೊಂಡಿತು. ಜೂನಿಯರ್ ಮಹಿಳೆಯರ ವಿಭಾಗದಲ್ಲಿ ತೆಲಂಗಾಣದ ಧಾಳವಿಕಾ ದೇವಿ (614.1) ಅವರು ಕಂಚು ಗೆದ್ದರು. ಕಜಾಕಸ್ತಾನದ ಟೊಮಿರಿಸ್ ಅಮನೊವಾ (620.1) ಹಾಗೂ ಡಾರ್ಯ ಪೊನೊಮರೆಂಕೊ (615.4) ಅವರು ಕ್ರಮವಾಗಿ ಮೊದಲೆರಡು ಸ್ಥಾನ ಪಡೆದರು.

Publication Date
14/02/2026

Presented by ಪ್ರಜಾವಾಣಿ

-----------------------------------------------ಶುಭವಂದನೆಗಳು-----------------------------------------------